ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 25 ಮಂಗಳವಾರ 2023

ಸಂಪುಟ: 44 | ಸಂಚಿಕೆ: 100 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಧಾರ್ಮಿಕತೆಗೆ ಧಕ್ಕೆಯಾಗದಂತೆ 'ಪ್ರಸಾದ'ದಡಿ

ಚಾಮುಂಡಿಬೆಟ್ಟ ಅಭಿವೃದ್ಧಿ

ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಮಾಹಿತಿ; ತಜ್ಞರೊಂದಿಗೆ ಚರ್ಚಿಸಿದ ನಂತರ ವಿವಿಧ ಕಾಮಗಾರಿಗೆ ಡಿಪಿಆರ್

ಮೈಸೂರು,ಜು.24(ಎಂಟಿವೈ)– ಧಾರ್ಮಿಕತೆ ಹಾಗೂ ಸಂಸ್ಕೃತಿಗೆ ಧಕ್ಕೆಯಾಗದಂತೆ ಚಾಮುಂಡಿ ಬೆಟ್ಟವನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದಾಗಿ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದ್ದಾರೆ. ಚಾಮುಂಡಿಬೆಟ್ಟಕ್ಕೆ ಸೋಮವಾರ ಆಗಮಿಸಿ ನಾಡದೇವಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಅಧಿಕಾರಿಗಳಿಂದ ಪ್ರಸಾದ ಯೋಜನೆಯಡಿ ಚಾಮುಂಡಿಬೆಟ್ಟದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದರು.

ಬಳಿಕ ಲಲಿತಮಹಲ್ ಪ್ಯಾಲೇಸ್ ಬಳಿ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಚಾಮುಂಡಿಬೆಟ್ಟದ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪರಿಣಿತರೊಂದಿಗೆ ಚರ್ಚಿಸುತ್ತೇವೆ. ಪ್ರಸಾದ ಯೋಜನೆಯಡಿ 45 ಕೋಟಿ ರೂ. ವೆಚ್ಚದಲ್ಲಿ ಚಾಮುಂಡಿಬೆಟ್ಟದಲ್ಲಿ ಕೆಲವು ಕಾಮಗಾರಿ ನಡೆಸಲು ಉದ್ದೇಶಿಸಲಾಗಿದೆ.



ತಜ್ಞರೊಂದಿಗೆ ಚರ್ಚಿಸಿದ ನಂತರ ಡಿಪಿಆರ್ ಸಿದ್ಧಗೊಳ್ಳುತ್ತದೆ. ಈಗಾಗಲೇ ಪ್ರಸಾದ ಯೋಜನೆಯ ಕಾಮಗಾರಿ ಕುರಿತಂತೆ ತಜ್ಞರು ನೀಡಿರುವ ಸಲಹೆಯನ್ನು ಪರಿಶೀಲಿಸಲಾಗುತ್ತಿದೆ. ಚಾಮುಂಡೇಶ್ವರಿ ಸನ್ನಿಧಾನವನ್ನು ಪ್ರವಾಸಿಗರ ಆಕರ್ಷಣೀಯ ಕೇಂದ್ರ ಮಾಡುವುದರ ಜೊತೆಗೆ ಭಕ್ತರಿಗೆ ನೆಮ್ಮದಿ ತಾಣವಾಗಿಸಲು ನಿರ್ಧರಿಸಲಾಗಿದೆ. ಹಾಗಾಗಿ ಡಿಪಿಆರ್‌ನಲ್ಲಿರುವ ಯಾವ ವಿಚಾರಕ್ಕೆ ಮಹತ್ವ ನೀಡಬೇಕು, ಇನ್ನಾವ ವಿಚಾರಕ್ಕೆ ಹೆಚ್ಚು ಮಹತ್ವ ನೀಡಬೇಕು ಎಂಬುದರ ಬಗ್ಗೆ ನಿರ್ಧರಿಸಲಾಗುತ್ತದೆ ಎಂದರು.

ಧಾರ್ಮಿಕ, ಪ್ರವಾಸಿ ತಾಣಗಳಿಗೆ 'ಶಕ್ತಿ': ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಜಾರಿಗೊಳಿಸಿರುವ 5 ಗ್ಯಾರಂಟಿ ಯೋಜನೆಗಳಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆಯಿಂದಾಗಿ ರಾಜ್ಯದ ಎಲ್ಲಾ ಧಾರ್ಮಿಕ ಕ್ಷೇತ್ರ ಹಾಗೂ ಪ್ರವಾಸಿ ತಾಣಗಳಲ್ಲಿ ಭಕ್ತರು ಹಾಗೂ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ದೇವಾಲಯಗಳ ಅದಾಯವೂ ಹೆಚ್ಚಳವಾಗಿದೆ. ಇದರೊಂದಿಗೆ ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಲ್ಲೂ ಅಗತ್ಯಕ್ಕೆ ಅನುಗುಣವಾಗಿ

● 8ನೇ ಪುಟಕ್ಕೆ

ಮೈಸೂರಿನ ಲಲಿತ ಮಹಲ್ ಪ್ಯಾಲೆಸ್ ಪುನಶ್ಚೇತನಕ್ಕೆ ಕ್ರಮ

- ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಭರವಸೆ
- ಪಾರಂಪರಿಕ ಶೈಲಿ ಕಾಪಾಡಿಕೊಳ್ಳಲಾಗುವುದು
- ಪುನಶ್ಚೇತನಕ್ಕೆ ಅಂದಾಜು ಮಾಡಲಾಗುವುದು
- ಗತ ವೈಭವ ಮರುಕಳಿಸಲು ಎಲ್ಲಾ ಕ್ರಮ
- ಇನ್ನಿತರೆ ಪಾರಂಪರಿಕ ಕಟ್ಟಡಗಳಿಗೂ ಕಾಯಕಲ್ಪ



ಮೈಸೂರು, ಜು.24(ಬಿಎಲ್‌ಯು)– ರಾಜರ ಕಾಲದಲ್ಲಿ ಪಾರಂಪರಿಕ ಶೈಲಿಯಲ್ಲಿ ನಿರ್ಮಾಣವಾಗಿರುವ ಮೈಸೂರಿನ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಪುನಶ್ಚೇತನಗೊಳಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಮೈಸೂರು ಅರಮನೆ ಮಂಡಳಿ ಸಭಾಂಗಣದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಳೆದ 30 ವರ್ಷದ ಹಿಂದೆ ನಾನು ಲಲಿತ ಮಹಲ್ ಪ್ಯಾಲೆಸ್‌ಗೆ ಹೋಗಿದ್ದೆ. ಅಂದು ಅಲ್ಲಿನ ಸೌಂದರ್ಯ ಸವಿದಿದ್ದೆ. ಆದರೆ ಆಗ ಇದ್ದ ಲಲಿತ ಮಹಲ್ ಪ್ಯಾಲೆಸ್‌ಗೂ ಈಗಿನ ಲಲಿತ ಮಹಲ್ ಪ್ಯಾಲೆಸ್‌ಗೂ ಬಹಳ ವ್ಯತ್ಯಾಸವಿದೆ. ವಯಸ್ಸಾದಂತೆ ಸಹಜ ಹಾಗೂ ನೈಸರ್ಗಿಕವಾಗಿ ಅದು ಹಳೆಯದಾಗಿದೆ ಎಂದು ಹೇಳಿದರು.



ಹಳೆಯದಾಗಿರುವ ಲಲಿತ ಮಹಲ್ ಪ್ಯಾಲೆಸ್ ಅನ್ನು ದೊಡ್ಡ ಪ್ರಮಾಣದಲ್ಲಿ ಪುನಶ್ಚೇತನಗೊಳಿಸಬೇಕಿದೆ. ಇದಕ್ಕಾಗಿ ಕೋಟ್ಯಾಂತರ ರೂ. ಹಣ ಬೇಕಿದೆ. ಬೇರೆ ಕಟ್ಟಡಗಳಂತೆ ಇದನ್ನು ಪುನಶ್ಚೇತನ ಮಾಡಲು

● 8ನೇ ಪುಟಕ್ಕೆ


ಕಬಿನಿ ಜಲಾಶಯ ಭರ್ತಿಗೆ 4 ಅಡಿ ಮಾತ್ರ ಬಾಕಿ ■ ಪುಟ–9

ಸರ್ಕಾರದ ಪತನಕ್ಕೆ ಸಿಂಗಾಪುರದಲ್ಲಿ ಸಂಚು

●ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ 'ಹೊಸ ಬಾಂಬ್' ●ಪರೋಕ್ಷವಾಗಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸಿಂಗಾಪುರ ಪ್ರವಾಸ ಪ್ರಸ್ತಾಪ ●ಕುತೂಹಲ ಕೆರಳಿಸಿದ ಜು.27ರ ಶಾಸಕಾಂಗ ಪಕ್ಷ ಸಭೆ



ಪಕ್ಷದೊಳಗೆ ಸಿಎಂ ಕುರ್ಚಿ ಅಲುಗಾಡಿಸುವ ಕೆಲಸ ಆಗುತ್ತಿದೆ...



ಬೆಂಗಳೂರು: ಸಿಂಗಾಪುರದಲ್ಲಿ ಕುಳಿತುಕೊಂಡು ಕರ್ನಾಟಕ ಸರ್ಕಾರದ ವಿರುದ್ಧ ತಂತ್ರ ರೂಪಿಸುತ್ತಿದ್ದಾರೆ ಎಂಬ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿಕೆಗೆ ತಿರುಗೇಟು ನೀಡಿದ ಮಾಜಿ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಹಲವು ದೃಷ್ಟಿಕೋನ ಇದೆ. ಸರ್ಕಾರದಲ್ಲಿ ಏನೂ ಸರಿಯಿಲ್ಲ ಅನ್ನೋದು ಗೊತ್ತಾಗುತ್ತಿದೆ. ಒಳಗಿನಿಂದಲೇ ಮುಖ್ಯಮಂತ್ರಿ ಕುರ್ಚಿ ಅಲುಗಾಡಿಸುವ ಕೆಲಸಗಳು ಆಗುತ್ತಿವೆ ಎಂದರು. ಕಾಂಗ್ರೆಸ್ ನಾಯಕರ ಸಹಕಾರ ಇಲ್ಲದೆ ಏನೂ ಆಗುವುದಿಲ್ಲ. ಬಹಳ ದೊಡ್ಡವರೇ ಇದಕ್ಕೆ ಸಹಕಾರ ಕೊಟ್ಟಂತೆ ಕಾಣುತ್ತಿದೆ ಎಂದು ಹೇಳಿದ ಅಶ್ವತ್ಥ ನಾರಾಯಣ, ನನ್ನನ್ನು ಸಿಎಂ ಮಾಡಲಿಲ್ಲ ಅಂದರೆ ಈ ಸರ್ಕಾರ ಉಳಿಸಲ್ಲ ಅಂತ ಡಿ.ಕೆ. ಶಿವಕುಮಾರ್ ಪರೋಕ್ಷವಾಗಿ ಎಚ್ಚರಿಕೆ ಕೊಟ್ಟಂತಿದೆ. ಕುಮಾರಸ್ವಾಮಿ ಅವರು ಯಾವ ರೀತಿ ಸರ್ಕಾರ ಬೀಳಿಸುತ್ತಾರೆ ಅಂತನೂ ●6ನೇ ಪುಟಕ್ಕೆ

ಬೆಂಗಳೂರು, ಜು. 24(ಕೆಎಂಶಿ)– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪತನಕ್ಕೆ ಸಂಚು ನಡೆದಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಹೊಸ ಬಾಂಬ್ ಸಿಡಿಸಿದ್ದಾರೆ.

ಸರ್ಕಾರ ತೆಗೆಯಲು ಕೆಲವರು ಸಿಂಗಾಪುರದಲ್ಲಿ ಪಿತೂರಿ ನಡೆಸುತ್ತಿದ್ದಾರೆ ಎಂಬ ಮಾಹಿತಿ ನಮಗಿದೆ. ಅಲ್ಲಿ ಕುಳಿತು ಮಾಡುತ್ತಿರುವ ತಂತ್ರದ ಬಗ್ಗೆ ನಮಗೆಲ್ಲಾ ಮಾಹಿತಿ ಇದೆ. ನಾವು ಸರ್ಕಾರ ಉಳಿಸಿಕೊಳ್ಳಲು ಏನು ಬೇಕೋ ಅದನ್ನು ಮಾಡುತ್ತೇವೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಇದರ ಸುಳಿವರಿತೇ ಮುಖ್ಯಮಂತ್ರಿ ಅವರು, ಇದೇ 27ರಂದು ಒಗ್ಗಟ್ಟಿನ ಬಲ ಪ್ರದರ್ಶಿಸಲು ಶಾಸಕಾಂಗ ಪಕ್ಷದ ಸಭೆ ಕರೆದಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸಮ್ಮುಖದಲ್ಲೇ ಸಭೆ ನಡೆಯಲಿದ್ದು, ಸಭೆಯಲ್ಲಿ ಇತ್ತೀಚಿನ ರಾಜಕೀಯ ಬೆಳವಣಿಗೆಗಳು, ಮುಂಬರುವ ಲೋಕಸಭಾ ಚುನಾವಣೆ ತಯಾರಿ ಬಗ್ಗೆ ಚರ್ಚೆಯಾಗಲಿದೆ ಆದರೆ ಶಿವಕುಮಾರ್ ಯಾವ ಕೋನದಿಂದ ಸಂಚು ನಡೆದಿದೆ ಎಂಬ ಬಗ್ಗೆ ಪೂರ್ಣ ಮಾಹಿತಿ ನೀಡಿಲ್ಲ. ಆದರೆ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಎರಡು ಬಾರಿ ಸಿಂಗಾಪುರ ಪ್ರವಾಸ ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಕೇಂದ್ರದ ಪ್ರಭಾವಿ ಸಚಿವರೊಬ್ಬರು ಅಲ್ಲಿ ಕುಮಾರಸ್ವಾಮಿ ಅವರನ್ನು ಭೇಟಿಯಾಗಿದ್ದರಂತೆ. ಇದೀಗ ತಮ್ಮ ಕುಟುಂಬ ●6ನೇ ಪುಟಕ್ಕೆ



"ಬಿಜೆಪಿಯವರು ಚುನಾಯಿತ ಸರ್ಕಾರಗಳನ್ನು ಪತನಗೊಳಿಸಿರುವ ಹಿನ್ನೆಲೆಯಲ್ಲಿ ನಮ್ಮ ಎಚ್ಚರಿಕೆಯಿಂದ ನಾವು ಇರಬೇಕಾಗುತ್ತದೆ. ಸರಿ–ತಪ್ಪುಗಳನ್ನು ನೋಡದೇ ಬಿಜೆಪಿಯವರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಕರ್ನಾಟಕ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಆಪರೇಷನ್ ಕಮಲ ಮಾಡಿ ರಾತ್ರೋರಾತ್ರಿ ಪ್ರತಿಪಕ್ಷಗಳ ಸರ್ಕಾರಗಳನ್ನು ಉರುಳಿಸಿರುವ ನಿದರ್ಶನಗಳಿವೆ. ಲೋಕಸಭಾ ಚುನಾವಣೆ ಮುಗಿಯುತ್ತಿದ್ದಂತೆ ನಮ್ಮ ಸರ್ಕಾರವನ್ನು ಪತನಗೊಳಿಸುತ್ತಾರೆ ಎಂಬ ಮಾತುಗಳು ದಟ್ಟವಾಗಿ ಕೇಳಿಬಂದಿದೆ. ಇದರ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ಹಾಗೂ ಪಕ್ಷದ ನಾಯಕರು ಮುನ್ನೆಚ್ಚರಿಕೆ ವಹಿಸಿದ್ದಾರೆ. ಪ್ರಸಕ್ತ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿಯೇ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಇಂತಹ ಹೇಳಿಕೆ ನೀಡಿರಬಹುದು.

–ಕೃಷ್ಣಭೈರೇಗೌಡ, ಕಂದಾಯ ಸಚಿವ



"ಇದು ನಿಜಾನೂ ಇರಬಹುದು. ಬಿಜೆಪಿಯವರು ಸರ್ಕಾರ ಉರುಳಿಸುವ ವಿಚಾರದಲ್ಲಿ ಪರಿಣಿತರು. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಈ ವಿಷಯವನ್ನು ನೋಡಿಕೊಳ್ಳುತ್ತಾರೆ.

–ಸತೀಶ್ ಜಾರಕಿಹೊಳಿ ಲೋಕೋಪಯೋಗಿ ಸಚಿವ

ವೈದ್ಯಕೀಯ, ಎಂಜಿನಿಯರಿಂಗ್ ಸೇರಿ ಎಲ್ಲಾ ಕೋರ್ಸ್‌ಗಳಿಗೂ ಒಮ್ಮೆಗೇ ಸೀಟು ಹಂಚಿಕೆ

ಸಿಇಟಿ: ಈ ಬಾರಿ ಸಂಯೋಜಿತ ಸೀಟು ಹಂಚಿಕೆ



ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಇದುವರೆಗೂ ಪ್ರತ್ಯೇಕವಾಗಿಯೇ ಸೀಟು ಹಂಚಿಕೆ ಪ್ರಕ್ರಿಯೆ ನಡೆಸುತ್ತಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪ್ರಸಕ್ತ ಸಾಲಿನಿಂದ (2023–24) ಎಲ್ಲವನ್ನೂ ಒಟ್ಟಿಗೇ, ಒಮ್ಮೆಗೇ ನಡೆಸಲು ತೀರ್ಮಾನಿಸಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಅನಗತ್ಯ ವಿಳಂಬವನ್ನು ತಪ್ಪಿಸುವ ಉದ್ದೇಶದಿಂದ ಈ ಸುಧಾರಣಾ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್, ಪಶುವೈದ್ಯ, ಕೃಷಿ, ನರ್ಸಿಂಗ್, ಅರ್ಕಿಟೆಕ್ಟ್ ಹಾಗೂ ಫಾರ್ಮಸಿ ಕೋರ್ಸ್‌ಗಳ ಪ್ರವೇಶಕ್ಕೆ ಸಂಯೋಜಿತ ಸೀಟು ಹಂಚಿಕೆ (Combined Seat Allotment) ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ●8ನೇ ಪುಟಕ್ಕೆ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ, ತ್ರಿಚಕ್ರ ಸೇರಿ ಕೆಲ ವಾಹನಗಳಿಗೆ ನಿಷೇಧ

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಹೆಚ್ಚುತ್ತಿರುವ ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇಲ್ಲಿ ದ್ವಿಚಕ್ರ, ತ್ರಿಚಕ್ರ ಸೇರಿದಂತೆ ಕೆಲವು ವಾಹನಗಳ ಸಂಚಾರಕ್ಕೆ ನಿಷೇಧ ಹೇರಿದೆ. ಅಂತೆಯೇ ಬೈಕ್, ಆಟೋ, ಟ್ರಾಕ್ಟರ್ ಹಾಗೂ ಇತರ ಸಣ್ಣ ವಾಹನಗಳಿಗೆ ನಿಷೇಧ ಹೇರಿ ಜುಲೈ 12ರಂದೇ ಅಧಿಸೂಚನೆ ಹೊರಡಿಸಿದೆ.



ಯಾವೆಲ್ಲಾ ವಾಹನಗಳಿಗೆ ನಿಷೇಧ: ಮೋಟಾರ್ ಸೈಕಲ್ (ಸ್ಕೂಟರ್ ಮತ್ತು ಇತರೆ ದ್ವಿಚಕ್ರ ವಾಹನ), ತ್ರಿಚಕ್ರ ವಾಹನ (ಆಟೋ ರಿಕ್ಷಾ ಸೇರಿದಂತೆ), ಮೋಟಾರು ರಹಿತ ವಾಹನಗಳು, ಟ್ರ್ಯಾಕ್ಟರ್‌ಗಳು, ಮಲ್ಟಿ ಆಕ್ಸೆಲ್ ಹೈಡ್ರಾಲಿಕ್ ವಾಹನಗಳು, ಕ್ವಾಡ್ರಿ ಚಕ್ರ ವಾಹನಗಳು.

ವೇಗದ ಮಿತಿ 100 ಕಿಮೀ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಸಂಚರಿಸುವ ವಾಹನಗಳಿಗೆ ಗಂಟೆಗೆ ●8ನೇ ಪುಟಕ್ಕೆ

ಕೊಡಗಲ್ಲಿ ಮಳೆ ಆರ್ಭಟ

ಮನೆಗಳಿಗೆ ಹಾನಿ, ವಿದ್ಯುತ್ ಕಂಬಗಳು, ಮರಗಳು, ಧರೆಗುರುಳಿ ಹಲವೆಡೆ ವಿದ್ಯುತ್ ಕಡಿತ; ತ್ರಿವೇಣಿ ಸಂಗಮ ಜಲಾವೃತ




ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ–275ರಲ್ಲಿ ಮರಸಹಿತ ಗುಡ್ಡ ಕುಸಿತ. ಬಲಚಿತ್ರದಲ್ಲಿ ಮನೆ ಮೇಲೆ ಮರ ಬಿದ್ದಿರುವುದು.

ಮಡಿಕೇರಿ, ಜು.24– ಕೊಡಗಿನಲ್ಲಿ ಮೂರನೇ ದಿನವಾದ ಸೋಮವಾರವೂ ವರುಣನ ಅಬ್ಬರ ಮುಂದುವರೆದಿದ್ದು, ಹಲವೆಡೆ ಮನೆಗಳಿಗೆ ಹಾನಿಯಾಗಿದೆ. ಮರಗಳು ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿವೆ. ಕೆಲವೆಡೆ ರಸ್ತೆಗಳು ಜಲಾವೃತಗೊಂಡಿದ್ದು, ಹಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಭಾಗಮಂಡಲದಲ್ಲಿ ನೀರಿನ ಪ್ರಮಾಣ ಏರಿಕೆಯಾಗಿದ್ದು, ತ್ರಿವೇಣಿ ಸಂಗಮ ಸಂಪೂರ್ಣವಾಗಿ ಮುಳುಗಡೆಯಾಗಿದೆ.

ಹಾರಂಗಿ ಜಲಾಶಯಕ್ಕೆ 28,120 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, 30 ಸಾವಿರ ಕ್ಯುಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ. ಇದರ ಪರಿಣಾಮವಾಗಿ ಸಂಜೆ ಕುಶಾಲನಗರದ ಸಾಯಿ ಬಡಾವಣೆ ಸಂಪೂರ್ಣವಾಗಿ ಜಲಾವೃತವಾಗಿದ್ದು, ಅಲ್ಲಿನ ನಿವಾಸಿಗಳನ್ನು ಸ್ಥಳಾಂತರ ಮಾಡಲಾಗುತ್ತಿದೆ. ಮಳೆ ಅಬ್ಬರ ಮತ್ತೆ ಮುಂದುವರೆಯುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿರುವುದರಿಂದ ಮಂಗಳವಾರ ಬೆಳಗ್ಗೆ 8.30ರವರೆಗೆ ಜಿಲ್ಲೆಯಲ್ಲಿ ಮತ್ತೆ 'ಆರೆಂಜ್ ಅಲರ್ಟ್' ಜಾರಿಗೊಳಿಸಲಾಗಿದೆ. ಜು.25ರಂದು ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳನ್ನು ಹೊರತುಪಡಿಸಿ ಎಲ್ಲಾ ಅಂಗನವಾಡಿ, ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ 275ರ ಕರ್ತೋಜಿ ಎಂಬಲ್ಲಿ ಮರ ಸಮೇತ ಗುಡ್ಡ ಕುಸಿದು ರಸ್ತೆ ಮೇಲೆ ಬಿದ್ದ ಪರಿಣಾಮ ಕೆಲ ಗಂಟೆಗಳ ಕಾಲ ವಾಹನ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಮಳೆಯ ನಡುವೆಯೇ ಕಾರ್ಯಾಚರಣೆ ತಂಡ ಜೆಸಿಬಿ ಹಾಗೂ ಹಿಟಾಚಿ ಬಳಸಿ ಮರ ಹಾಗೂ ಮಣ್ಣನ್ನು ರಸ್ತೆಯಿಂದ ತೆರವುಗೊಳಿಸಿತಾದರೂ ಅರ್ಧದಷ್ಟು ರಸ್ತೆಯಲ್ಲಿ ಮಾತ್ರ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು. ಈ ●6ನೇ ಪುಟಕ್ಕೆ



ಭಾಗಮಂಡಲದಲ್ಲಿ ಶ್ರೀ ಭಗಂಡೇಶ್ವರಸ್ವಾಮಿ ದೇವಾಲಯ ಜಲಾವೃತಗೊಂಡಿರುವುದು.

ಇನ್ನರ್‌ವ್ಹೀಲ್ ನೂತನ ತಂಡದ ಪದಗ್ರಹಣ



ಮೈಸೂರು, ಜು. 24– ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಉತ್ತರದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಇನ್ನರ್‌ವ್ಹೀಲ್ ರೋಟರಿ ಭವನ, ಸ್ನೇಹನಿಂದು ಟ್ರಸ್ಟ್‌ನಲ್ಲಿ ಇತ್ತೀಚೆಗೆ ನಡೆಯಿತು.

2023–24ನೇ ಸಾಲಿನ ನೂತನ ಪದಾಧಿಕಾರಿಗಳಾಗಿ ಅಂತರ್ಜಾಲ ನಿರ್ವಾಹಕಿ–ಶರಣ್ಯ ಡಿ.ಚೌಟಾ, ಸಂಪಾದಕಿ–ಗೀತಾ ಪ್ರಸಾದ್, ಅಂತರರಾಷ್ಟ್ರೀಯ ಸೇವಾ ಸಂಪಾದಕಿ–ಪದ್ಮಾ ನಿರಂಜನ್, ಖಜಾಂಚಿ–ಸುಮನಾ ನಟೇಶ್, ಕಾರ್ಯದರ್ಶಿ–ಪ್ರೇಮಸ್ವಾಮಿ, ಅಧ್ಯಕ್ಷೆ–ಅಶ್ವಿನಿ ಪ್ರಶಾಂತ್ ಪದಗ್ರಹಣ ಮಾಡಿದರು.

ಈ ವೇಳೆ ಮಾಜಿ ಜಿಲ್ಲಾ ಘಟಕದ ಛೇರ್ಮನ್‌ರಾದ ಜಾಹ್ನವಿ ಮೂರ್ತಿ, ನಿಕಟಪೂರ್ವ ಅಧ್ಯಕ್ಷೆ–ರಜನಿ ಸ್ವಾಮಿ, ಮಾಜಿ ಜಿಲ್ಲಾ ಘಟಕದ ಛೇರ್ಮನ್–ರಾಜೇಶ್ವರಿ ಗೌಡ, ಉಪಾಧ್ಯಕ್ಷೆ–ವಿಮಲಾಮೂರ್ತಿ ಮತ್ತು ಕಮಿಟಿ ಛೇರ್ಮನ್–ನಂದಿನಿ ಪ್ರಭುದೇವ್, ಜಿ.ಪಿ. ಪುಷ್ಪಲತ, ನೀಲಾಂಬಿಕಾ ದೇವಿ ನಾಗರಾಜ್, ಸಂಸ್ಥೆಯ ಸದಸ್ಯರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಕಲಿ ನಂಬರ್ ಸ್ಕೂಟರ್‌ನಲ್ಲಿ ವ್ಹೀಲಿಂಗ್: ಯುವಕನ ಬಂಧನ

ಮೈಸೂರು, ಜು.24–ನಕಲಿ ನಂಬರ್ ಪ್ಲೇಟ್ ಹೊಂದಿದ ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ಆರೋಪದ ಮೇರೆಗೆ ಯುವಕನೋರ್ವನನ್ನು ಬಂಧಿಸಿರುವ ಉದಯಗಿರಿ ಠಾಣೆ ಪೊಲೀಸರು ಸ್ಕೂಟರ್ ವಶಪಡಿಸಿಕೊಂಡಿದ್ದಾರೆ.


ಮೈಸೂರಿನ ಶಾಂತಿನಗರ ನಿವಾಸಿ ಅರ್ಬಜ್ ಅಹಮದ್(19) ಬಂಧಿತನಾಗಿದ್ದು, ಈತ ಜುಲೈ 7ರಂದು ಮಧ್ಯಾಹ್ನ 3 ಗಂಟೆಯಿಂದ 3.30ರ ಸಮಯದಲ್ಲಿ ರಿಂಗ್ ರಸ್ತೆಯ ಯಾಸಿನ್ ಮಸೀದಿ ಜಂಕ್ಷನ್‌ನಿಂದ ಪುಷ್ಪಾಶ್ರಮದ ಜಂಕ್ಷನ್ ವರೆಗೆ ಕೆಎ 51–ಹೆಚ್‌ಕೆ 634 ಸಂಖ್ಯೆಯ ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡಿದ್ದಾನೆ.

ಜುಲೈ 21ರಂದು ಸೋಷಿಯಲ್ ಮೀಡಿಯಾದಲ್ಲಿ ಅಪ್‌ಲೋಡ್ ಆಗಿದ್ದ ವಿಡಿಯೋ ಆಧರಿಸಿ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ಸ್ಕೂಟರ್ ವಶಪಡಿಸಿಕೊಂಡು ಅದರ ಇಂಜಿನ್ ಹಾಗೂ ಚಾರ್ಸಿ ನಂಬರ್‌ಗಳನ್ನು ಪರಿಶೀಲಿಸಿದಾಗ ಸ್ಕೂಟರ್‌ನ ಅಸಲಿ ಸಂಖ್ಯೆ ಕೆಎ 55–ಡಬ್ಲ್ಯು 7193 ಎಂಬುದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಸಿದ್ಧಾರ್ಥನಗರ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಡಿ.ಯೋಗೇಶ್ ಅವರು ಅರ್ಬಜ್ ಅಹಮದ್ ಮತ್ತು ಸ್ಕೂಟರ್ ಅನ್ನು ಉದಯಗಿರಿ ಠಾಣೆ ಪೊಲೀಸರ ವಶಕ್ಕೆ ನೀಡಿ ಆರೋಪಿಯು ಮೋಸ ಅಥವಾ ಯಾವುದೋ ಅಪರಾಧ ಮಾಡುವ ಉದ್ದೇಶದಿಂದ ನಕಲಿ ನಂಬರ್ ಪ್ಲೇಟ್ ಅನ್ನು ಸ್ಕೂಟರ್‌ಗೆ ಅಳವಡಿಸಿಕೊಂಡಿದ್ದಾನೆ ಎಂದು ದೂರು ನೀಡಿದ್ದಾರೆ. ಉದಯಗಿರಿ ಠಾಣೆ ಪೊಲೀಸರು ಅರ್ಬಜ್ ಅಹಮದ್‌ನನ್ನು ಬಂಧಿಸಿ, ಭಾರತೀಯ ದಂಡ ಸಂಹಿತೆ 279, 420, 482ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ವಿಮಾನ ಟಿಕೆಟ್ ಬುಕ್ ಮಾಡುವುದಾಗಿ ಹೇಳಿ 2.30 ಲಕ್ಷ ವಂಚನೆ: ಟ್ರಾವೆಲ್ಸ್ ಮಾಲೀಕನ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜು. 24– ವಿಮಾನ ಟಿಕೆಟ್ ಬುಕ್ ಮಾಡುವುದಾಗಿ 2.30 ಲಕ್ಷ ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಆರೋಪದ ಮೇರೆಗೆ ಬೆಂಗಳೂರಿನ ಟ್ರಾವೆಲ್ಸ್‌ವೊಂದರ ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದೆ.

ಬೆಂಗಳೂರಿನ ಸಾಯಿ ನಗರದಲ್ಲಿರುವ ರೈಸಿಂಗ್ ಟೂರ್ ಅಂಡ್ ಟ್ರಾವೆಲ್ಸ್ ಇಂಡಿಯಾ ಮಾಲೀಕರಾದ ರೇಣುಕಾ ದೇವಿ ರಾಜನ್ ಮತ್ತು ಶಿವರಾಜು ಆರೋಪಕ್ಕೆ ಗುರಿಯಾಗಿದ್ದು, ಮೈಸೂರಿನ ದಟ್ಟಗಳ್ಳಿ ಮೂರನೇ ಹಂತದ ನಿವಾಸಿ ಎಂ.ಎ.ಶಿವಪ್ರಕಾಶ್ (43) ಎಂಬುವರನ್ನು ಮೊಬೈಲ್ ಮೂಲಕ ಸಂಪರ್ಕಿಸಿ, ಅವರ ಹಾಗೂ ಕುಟುಂಬದವರಿಗೆ ವಿಮಾನದ ಟಿಕೆಟ್ ಬುಕ್ ಮಾಡಲು 2,30,110 ರೂ.ಗಳನ್ನು ಆರ್‌ಟಿ ಜಿಎಸ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ಟಿಕೆಟ್ ಬುಕ್ ಮಾಡದೇ ವಂಚಿಸಿದ್ದಾರೆ ಎಂದು ಶಿವಪ್ರಕಾಶ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರು ನಗರ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಮೈಸೂರಿನ ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಅವರನ್ನು ಚೇತನ್ ಫೌಂಡೇಶನ್ ವತಿಯಿಂದ ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಲಾಯಿತು. ಸಮ್ಮೇಳನಾಧ್ಯಕ್ಷೆ ಡಾ.ಜಿ.ವೈ. ಪದ್ಮ ನಾಗರಾಜ್, ಸಾಹಿತಿಗಳಾದ ಡಾ.ಸಿಸಿರಾ, ಪೀರಸಾಬ ನದಾಫ್, ನಾರಾಯಣಸ್ವಾಮಿ, ಫೌಂಡೇಶನ್ ಅಧ್ಯಕ್ಷ ಚಂದ್ರಶೇಖರ ಮಾಡಲಗೇರಿ, ಕವಯತ್ರಿ ಆಶಾ, ಶಿವು ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ತಾಲೂಕಿನ ಮುದುಕಿಚಿಕ್ಕನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಜಿ.ಪಾಂಡುರಂಗ, ಉಪಾಧ್ಯಕ್ಷರಾಗಿ ಅಣ್ಣಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಿರ್ದೇಶಕರಾಗಿ ಎನ್.ರಾಮಕೃಷ್ಣ, ರಂಗಸ್ವಾಮಿ, ಶೇಷಣ್ಣ, ಎಂ.ರಾಜೇಶ್, ಅಂದಾನಿ, ಪುಟ್ಟಲಿಂಗಯ್ಯ ಪಿ.ಮಹದೇವ, ಸಿದ್ದನಾಯಕ, ಶಿವಮಲ್ಲು, ವೀರಣ್ಣ ಆಯ್ಕೆಯಾಗಿದ್ದಾರೆ.

ನಿಧನ

ಡಾ. ಎ.ಕೆ. ದಯಾನಂದ



ಮೈಸೂರು,ಜು.24–ಮೈಸೂರಿನ ಆಶಾಕಿರಣ ಚಾರಿಟಬಲ್ ಟ್ರಸ್ಟ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಹಿರಿಯ ವೈದ್ಯಕೀಯ ಅಧಿಕಾರಿ ಹಾಗೂ ಹೆಬ್ಬಾಳು ನಿವಾಸಿ ಡಾ.ಎ.ಕೆ.ದಯಾನಂದ (77) ಜು.20ರಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ಅದೇ ದಿನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಸತೀಶ್‌ಚಂದ್ರಕುಮಾರ್



ಹುಣಸೂರಿನ ಸೇಂಟ್ ಜಾನ್ಸ್ ಚರ್ಚ್‌ನ ಎಂ.ಸತೀಶ್‌ಚಂದ್ರ ಕುಮಾರ್ (63) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಸೇರಿದಂತೆ ಅಪಾರ ಸ್ನೇಹಿತರು, ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಕ್ರಿಶ್ಚಿಯನ್ ಸಿಮೆಟ್ರಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಎಸ್.ರಾಜಯ್ಯಂಗಾರ್



ಮೈಸೂರಿನ ರಾಮಕೃಷ್ಣನಗರದ 'ಅಮ್ಮ' ಕಾಂಪ್ಲೆಕ್ಸ್ ಬಳಿ ವಾಸವಿದ್ದ ನಿವೃತ್ತ ರೈಲ್ವೆ ನೌಕರ ಹೆಚ್.ಎಸ್.ರಾಜಯ್ಯಂಗಾರ್ (90) ಸೋಮವಾರ ನಿಧನರಾದರು. ಮೃತರು ಪುತ್ರಿಯರಾದ ಸುಮಾ ಹರಿನಾಥ್, ಹೇಮಾ ಸುರೇಶ್, ಅಳಿಯ ಹರಿನಾಥ್, ಮೊಮ್ಮಕ್ಕಳಾದ ವಿಭಾ ಕಾರ್ತಿಕ್, ಕ್ಷಮಾ ಹರಿನಾಥ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸೋಮವಾರ ಚಾಮುಂಡಿಬೆಟ್ಟದ ಪಾದದಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಪುರಭವನ ಆವರಣದಲ್ಲಿ 12 ವರ್ಷದಿಂದ ಮಲ್ಟಿಲೆವೆಲ್ ಪಾರ್ಕಿಂಗ್ ಕಾಮಗಾರಿ ನಡೆಯುತ್ತಿದೆ... ನಡೆಯುತ್ತಲೇ ಇರುತ್ತದೆ...!

● ಇದು ಅತ್ಯಂತ ನಾಚಿಕೆಗೇಡಿತನದ ವಿಚಾರವಲ್ಲವೇ? ● ಪಾಲಿಕೆ ಆಯುಕ್ತರು, ಉಪಆಯುಕ್ತರಿಂದ ಪರಿಶೀಲನೆ 'ಶಾಸ್ತ್ರ'





ಮೈಸೂರು,ಜು.24(ಜಿಎ)– ದಸರಾ ಬಂತೆಂದರೆ ಸಾರ್ವಜನಿಕರ ವಾಹನ ನಿಲುಗಡೆಗಾಗಿ ಮುಕ್ತವಾಗುವ ಪುರಭವನದ ಅರೆಬರೆಯಾಗಿರುವ ಪಾರ್ಕಿಂಗ್ ಸ್ಥಳ, ಮುಗಿಯುತ್ತಿದ್ದಂತೆ ಮತ್ತೆ ಬಂದ್ ಆಗುತ್ತದೆ. 2018ರಿಂದಲೂ ಮೈಸೂರು ಮಹಾನಗರ ಪಾಲಿಕೆ ಇದನ್ನೇ ಮಾಡುತ್ತಾ ಬಂದಿದೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಅ.15ರಂದು ಉದ್ಘಾಟನೆಗೊಳ್ಳಲಿದ್ದು, ಇದೇ ಮಾಸಾಂತ್ಯಕ್ಕೆ ಬೆಂಗಳೂರಿನಲ್ಲಿ ದಸರಾ ಮಹೋತ್ಸವ ಉನ್ನತ ಸಮಿತಿ ಸಭೆಯೂ ಜರುಗಲಿದೆ. ಹೀಗೆ ದಸರಾ ಮಹೋತ್ಸವದ ಪೂರ್ವ ಚಟುವಟಿಕೆಗಳು ಆರಂಭದ ಹಂತದಲ್ಲಿದ್ದು, ಇದೀಗ ಮೈಸೂರು ನಗರಪಾಲಿಕೆ ಅಧಿಕಾರಿಗಳು ಪುರಭವನ ಮಲ್ಟಿಲೆವಲ್ ಪಾರ್ಕಿಂಗ್ ಕಾಮಗಾರಿ ಪರಿಶೀಲನೆಗೆ ದೌಡಾಯಿಸಿದ್ದಾರೆ.

ಸೋಮವಾರ ಸ್ಥಳಕ್ಕೆ ಭೇಟಿ ನೀಡಿದ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ಉಪ ಆಯುಕ್ತೆ (ಅಭಿವೃದ್ಧಿ) ಸಿಂಧು, ಕಾಮಗಾರಿಯನ್ನು ಪರಿಶೀಲನೆ ನಡೆಸಿದರು. ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಿಂಧು, ಮಲ್ಟಿಲೆವೆಲ್ ಪಾರ್ಕಿಂಗ್ ಕಾಮಗಾರಿ ಸಂಬಂಧ ಕಟ್ಟಡ ನಿರ್ಮಾಣ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ರ‍್ಯಾಂಪ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, 15 ದಿನಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ಅಗ್ನಿಶಾಮಕ ಮತ್ತು ಸುರಕ್ಷತಾ ಉಪಕರಣಗಳ ಅಳವಡಿಕೆ ಹಾಗೂ ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಿದೆ. ಜೊತೆಗೆ ಶೌಚಾಲಯದ ಸಣ್ಣಪುಟ್ಟ ಕಾಮಗಾರಿಗಳು ಬಾಕಿ ಉಳಿದಿವೆ. ಈ ಕಾಮಗಾರಿಗಳನ್ನು ಶೀಘ್ರದಲ್ಲಿ ಆರಂಭಿಸಲಾಗುವುದು. ಎಲೆಕ್ಟ್ರಿಕಲ್ ಮತ್ತು ಇತರ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಕಳೆದ ದಸರಾದಲ್ಲಿ ಮೊದಲ ಮಹಡಿಯನ್ನು ಮಾತ್ರ ಬಳಸಲಾಗಿತ್ತು. ಈ ಬಾರಿ ದಸರಾಗೂ ಮುನ್ನವೇ ನೆಲಮಾಳಿಗೆ ಮತ್ತು ಮೊದಲ ಮಹಡಿ ಎರಡೂ ಲಭ್ಯವಾಗುವಂತೆ ಕ್ರಮ ವಹಿಸಲಾಗುವುದು ಎಂದರು.

ಕಳೆದ ದಸರಾ ವೇಳೆ ನೆಲಮಾಳಿಗೆಯಲ್ಲಿ ನೀರು ನಿಲ್ಲುವ ಮೂಲಕ ಸಾಕಷ್ಟು ದೂರುಗಳು ಬಂದಿದ್ದವು. ಈಗ ಅಗತ್ಯ ಸಿವಿಲ್ ಕಾಮಗಾರಿ ಮೂಲಕ ನೀರು ನಿಲ್ಲದಂತೆ ಕ್ರಮ ವಹಿಸಲಾಗಿದೆ. ನಿಲುಗಡೆಗಾಗಿ ಬರುವ ವಾಹನಗಳಿಗೆ ಗಾಂಧಿಚೌಕದ ಎದುರಿರುವ ಪುರಭವನದ ಆವರಣದ ದ್ವಾರದಿಂದ ಪ್ರವೇಶ ಕಲ್ಪಿಸಲಾಗುವುದು. ವಾಹನಗಳ ನಿರ್ಗಮನಕ್ಕೆ ಇಲ್ಲಿನ ಡಾ.ಅಂಬೇಡ್ಕರ್ ಪ್ರತಿಮೆ ಬಳಿಯ ದ್ವಾರದಲ್ಲಿ ಅವಕಾಶ ನೀಡಲಾಗುವುದು. ಸದ್ಯ ವಾಹನ ನಿಲುಗಡೆ ಸಂಬಂಧ ಶುಲ್ಕ ನಿಗದಿ ಇನ್ನೂ ನಿರ್ಧಾರವಾಗಿಲ್ಲ. ಈ ದಸರಾ ವೇಳೆಗೆ ಪಾರ್ಕಿಂಗ್ ಸೌಲಭ್ಯ ದೊರೆಯಲಿದೆ ಎಂದರು.

ಮೈಸೂರು ಮಹಾನಗರ ಪಾಲಿಕೆಯಿಂದ ಇಷ್ಟು ಸುದೀರ್ಘ ಅವಧಿಯಲ್ಲಿ ನಡೆಯುತ್ತಿರುವ ಕಾಮಗಾರಿ ಬಗ್ಗೆ ಹಿರಿಯ ನಾಗರಿಕರನ್ನು ನಮ್ಮ ವರದಿಗಾರರು ಕೇಳಿದಾಗ ಅವರು, ಈ ಹಿಂದೆ ಪಾಲಿಕೆ ಆಯುಕ್ತರಾಗಿದ್ದ ಎ.ಬಿ.ಇಬ್ರಾಹಿಂ ಮತ್ತು ಡಾ.ಸಿ.ಜಿ. ಬೆಟಸೂರಮಠ ಅವರ ಆಡಳಿತ ವೈಖರಿಯನ್ನು ನೆನಪಿಸಿಕೊಂಡರು. –ಸಂಪಾದಕರು.

ಮಹತ್ವಾಕಾಂಕ್ಷೆಯ ಈ ಪಾರ್ಕಿಂಗ್ ಕಾಮಗಾರಿಯು 2011ರಲ್ಲಿ ಪ್ರಾರಂಭವಾಯಿತು. ಇದೀಗ 12 ವರ್ಷಗಳೇ ಕಳೆದಿದ್ದು, ದಸರಾ ಸಂದರ್ಭದಲ್ಲಿ ಇದನ್ನು ತಾತ್ಕಾಲಿಕವಾಗಿ ವಾಹನ ನಿಲುಗಡೆಗೆ ಬಳಸಿಕೊಳ್ಳಲಾಗುತ್ತಿದೆ. ಈಗ ರಾಜ್ಯದಲ್ಲಿ ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಮೈಸೂರಿನವರೇ ಆದ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾರೆ. ಹಾಗಾಗಿ ಈಗಲಾದರೂ ಈ ಪಾರ್ಕಿಂಗ್ ಸೌಲಭ್ಯ ಪೂರ್ಣ ಪ್ರಮಾಣದ ಬಳಕೆಗೆ ಲಭ್ಯವಾಗಲಿದೆ ಎಂದು ನಾಗರಿಕರು ಆಶಿಸಬಹುದೇ? ಎಂಬ ಪ್ರಶ್ನೆ ಎದುರಾಗಿದೆ.



ಇತ್ತೀಚೆಗೆ ಲಯನ್ಸ್ ಕ್ಲಬ್ ಆಫ್ ಮೈಸೂರು ಕುವೆಂಪುನಗರದ ಪದಗ್ರಹಣ ಸಮಾರಂಭ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು. ನೂತನ ಅಧ್ಯಕ್ಷರಾಗಿ ವಿ.ಟಿ.ಚಂದ್ರಶೇಖರ್ ಮತ್ತು ಪದಾಧಿಕಾರಿಗಳು ಮೊದಲನೇ ಜಿಲ್ಲಾ ಉಪರಾಜ್ಯಪಾಲರಾದ ಎನ್.ಸುಬ್ರಮಣ್ಯ ಅವರಿಂದ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಈ ವೇಳೆ ಎನ್.ಶಿವರಾಮು, ಹೇಮಂತ್ ಬನ್ಸಾಲಿ, ಎನ್.ಸುಬ್ರಮಣ್ಯ, ವಿ.ಟಿ. ಚಂದ್ರಶೇಖರ್ (ಅಧ್ಯಕ್ಷ), ರೂಪಾ ಚಂದ್ರಶೇಖರ್, ರಾಜಶೇಖರ್, ನಾಗರಾಜಾಚಾರ್ (ನಿಕಟಪೂರ್ವ ಅಧ್ಯಕ್ಷ), ಸೋಮಶೇಖರ್, ಆರ್.ಎಸ್. ಪುಟ್ಟಬಸಪ್ಪ, ಎಲ್.ಶಿವಕುಮಾರ್, ಟಿ.ವಿ.ರಘೋತ್ತಮರಾವ್, ಶ್ರೀಮತಿ ನಾಗರಾಜಾಚಾರ್, ಗೀತಾ, ಡಾ. ಸಿ.ಶಿವಕುಮಾರ್, ಚೌಡಯ್ಯ, ಗಣೇಶ್, ನಂಜುಂಡೇಗೌಡ, ಶ್ರೀಶೈಲ, ತ್ಯಾಗರಾಜ್ ಹಾಜರಿದ್ದರು.

ಕ್ಯೂಟ್ ಬೇಬಿ ಶೋ, ಫ್ಯಾಷನ್ ಶೋ, ಡ್ರಾಯಿಂಗ್, ಬರವಣಿಗೆ ಸ್ಪರ್ಧೆ

ಮೈಸೂರು, ಜು. 24– ಮೈಸೂರಿನ ಸಿದ್ಧಾರ್ಥನಗರದ ಮಂಜುಶ್ರೀ ಮ್ಯಾಜಿಕ್ ಸ್ಟೆಪ್ಸ್ ವತಿಯಿಂದ ವಾರ್ಷಿಕೋತ್ಸವದ ಅಂಗವಾಗಿ ಜು.29 ಹಾಗೂ 30ರಂದು ಜಗನ್ಮೋಹನ ಅರಮನೆಯಲ್ಲಿ ಕ್ಯೂಟ್ ಬೇಬಿ ಶೋ, ಫ್ಯಾಷನ್ ಶೋ, ಡ್ರಾಯಿಂಗ್, ಬರವಣಿಗೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಜು.29ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಹುಟ್ಟಿದ ಮಗುವಿನಿಂದ ಹಿಡಿದು 6 ವರ್ಷದ ಮಕ್ಕಳವರೆಗೆ ಕ್ಯೂಟ್ ಬೇಬಿ ಸ್ಪರ್ಧೆ, ಜು.30ರಂದು ಬೆಳಗ್ಗೆ 10ರಿಂದ ಮ.1ರವರೆಗೆ ನರ್ಸರಿ ಮಕ್ಕಳಿಂದ 10ನೇ ತರಗತಿವರೆ ಕಲರಿಂಗ್ ಹಾಗೂ ಬರವಣಿಗೆ ಸ್ಪರ್ಧೆ. ಸಂಜೆ 6.30ರಿಂದ 7.30ರವರೆಗೆ 3 ವರ್ಷದ ಮಕ್ಕಳಿಂದ 12 ವರ್ಷದ ಮಕ್ಕಳಿಗೆ ಫ್ಯಾಷನ್ ಶೋ ನಡೆಯಲಿದೆ. ಮಾಹಿತಿಗೆ ಮೊ. 9880379863, 7899502261 ಸಂಪರ್ಕಿಸಬಹುದು.

ಜು.27, ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಜು.24–ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು.27 ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಮಣಿಪುರ ಘಟನೆ: ಮೈಸೂರಲ್ಲಿ ವಿವಿಧ ಸಂಘಟನೆಗಳ ಪ್ರತಿಭಟನೆ





ಮೈಸೂರು, ಜು.24(ಜಿಎ)–ಮಣಿಪುರದಲ್ಲಿ ಇಬ್ಬರು ಮಹಿಳೆಯರ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಬೆತ್ತಲೆ ಮೆರವಣಿಗೆ ಖಂಡಿಸಿ ದಿ ಆರ್ಗನೈಝೇಷನ್ ಫಾರ್ ಡೆವಲಪ್‌ಮೆಂಟ್ ಆಫ್ ಪೀಪಲ್ (ಒಡಿಪಿ) ಮಹಿಳೋದಯ ಮಹಿಳಾ ಒಕ್ಕೂಟದ ಸದಸ್ಯರು ಮತ್ತು ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ನಗರದ ಮಲೆ ಮಹದೇಶ್ವರ ರಸ್ತೆಯ ಹಳೆ ಹಾಲಿನ ಡೇರಿ ಬಳಿ ಜಮಾವಣೆಗೊಂಡ ಪ್ರತಿಭಟನಾಕಾರರು ಕೃತ್ಯ ನಡೆಸಿದವರ ಮತ್ತು ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿದರು. ಮೆರವಣಿಗೆ ಮೂಲಕ ಸಾಗಿ ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಘಟನೆ ನಡೆದು 78 ದಿನಗಳು ಕಳೆದರೂ ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರ್ಲಕ್ಷ್ಯ ಖಂಡನೀಯ. ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರಿ ನಿಭಾಯಿಸಲು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಅಪರಾಧ ಎಸಗಿದವರಿಗೆ ಮರಣ ದಂಡನೆ ವಿಧಿಸಿ ಕುಟುಂಬಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿರತೆ ನೀಡಬೇಕು. ಇಂತಹ ಘಟನೆಗಳು ಮರುಕಳಿಸದಂತೆ ತಡೆಯಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಒಡಿಪಿ ನಿರ್ದೇಶಕ ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಮಹಿಳೋದಯ ಮಹಿಳಾ ಒಕ್ಕೂಟದ ಅಧ್ಯಕ್ಷೆ ಆರೋಗ್ಯ ಮೇರಿ ಸೇರಿದಂತೆ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗಿಯಾಗಿದ್ದರು.


ಕರ್ನಾಟಕ ದಲಿತ ಪ್ಯಾಂಥರ್ ಪ್ರತಿಭಟನೆ: ಮಣಿಪುರ ಘಟನೆ, ಭೀಮ್ ಆರ್ಮಿ ಸಂಸ್ಥಾಪಕ ಚಂದ್ರಶೇಖರ್ ಆಜಾದ್ ಕೊಲೆ ಯತ್ನ ಮತ್ತು ಸೌಜನ್ಯ ಕೊಲೆ ಪ್ರಕರಣವನ್ನು ಮರು ತನಿಖೆ ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ದಲಿತ ಪ್ಯಾಂಥರ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿನಗರ ಅಂಬೇಡ್ಕರ್ ವೃತ್ತದಲ್ಲಿರುವ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಬೈಕ್ ರ‍್ಯಾಲಿ ನಡೆಸಿದ ಪ್ರತಿಭಟನಾಕಾರರು, ಕೇಂದ್ರದ ವಿರುದ್ಧ ವಿವಿಧ ಘೋಷಣೆಯನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ದಸಂಸ ಹೋರಾಟಗಾರ ಚೋರ್ನಳ್ಳಿ ಶಿವಣ್ಣ ಮಾತನಾಡಿ, ಮಹಿಳೆಯರ ಮೇಲಿನ ದೌರ್ಜನ್ಯ, ಕೊಲೆ ಯತ್ನ ಸೇರಿದಂತೆ ಇತರೆ ಸಮಸ್ಯೆಗಳ ಬಗ್ಗೆ ರಾಷ್ಟ್ರಪತಿಗಳು ಗಂಭೀರವಾಗಿ ಪರಿಗಣಿಸಬೇಕು. ರಾಷ್ಟ್ರಪತಿ ಆಡಳಿತ ಹೇರುವ ಬಗ್ಗೆಯೂ ಚಿಂತನೆ ನಡೆಸಬೇಕು. ಬಿಜೆಪಿ ಸರ್ಕಾರ ಜಾತಿ ಜಾತಿಗಳ ನಡುವೆ ಗಲಭೆಗಳನ್ನು ಹುಟ್ಟು ಹಾಕುತ್ತಿದೆ. ಈ ಹಿಂದೆ ಗುಜರಾತಿನಲ್ಲಿಯೂ ಇದೇ ರೀತಿ ಗಲಭೆ ಎಬ್ಬಿಸಿ, ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದಿಂದ ಏನೆಲ್ಲಾ ಮಾಡಿಸಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿದೆ. ಇದೇ ಅವರ ಚಾಳಿಯಾಗಿದೆ ಎಂದರು.

ಪ್ರಕರಣ ನಡೆದು 78 ದಿನಗಳು ಕಳೆದ ನಂತರ ಪ್ರಧಾನಿ ಮಾತನಾಡುತ್ತಿದ್ದಾರೆ. ದೇಶದ ಮಾನ ಮರ್ಯಾದೆ ವಿಶ್ವದ ಮಟ್ಟದಲ್ಲಿ ಹರಾಜು ಆಗಿದೆ. ಮೋದಿ ಅವರು ದೇಶದ ಮಾನ ಹರಾಜು ಹಾಕಲು ಪ್ರಧಾನಿಯಾಗಿದ್ದಾರೆ. ಜನತೆಗೆ ಒಳಿತು ಮಾಡಲು, ದೇಶದ ಅಭಿವೃದ್ಧಿ ಮಾಡಲು ಅವರಿಗೆ ಸಾಧ್ಯವಿಲ್ಲ. ಕೇವಲ ರಾಜಕೀಯ ಲಾಭಕ್ಕಾಗಿ ಗಲಭೆಗಳನ್ನು ಸೃಷ್ಟಿಸುತ್ತಿದ್ದಾರೆ. ಈ ರೀತಿ ಸರ್ಕಾರಗಳು ಅಧಿಕಾರದಲ್ಲಿ ಇರಬಾರದು. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಜನರು ಬುದ್ಧಿ ಕಲಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ದಲಿತ ಪ್ಯಾಂಥರ್‌ನ ಅಧ್ಯಕ್ಷ ಯೋಗ ನರಸಿಂಹ, ಉಪಾಧ್ಯಕ್ಷ ಗಿರೀಶ್, ಪ್ರಸಾದ್, ಕಾರ್ಯದರ್ಶಿ ಸುರೇಶ್ ಕುಮಾರ್, ಚಿಕ್ಕ ಚೆಲುವಾ ಮತ್ತು ಶಿವಣ್ಣ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.7.2023 ಮಂಗಳವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಚಿತ್ರ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಪ್ರಜ್ಞಾ ಫೌಂಡೇಷನ್, ಸಮಾಜ ಕಾರ್ಯ ಅಧ್ಯಯನ ವಿಭಾಗ:** ಪತಂಗ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ, ಬೆಳಗ್ಗೆ 9ಕ್ಕೆ

■ **ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ, ಬೆಳಗಾವಿ, ಸ್ನಾತಕೋತ್ತರ ಅಧ್ಯಯನ ಕೇಂದ್ರ, ಮೈಸೂರು** : ವಿಟಿಯು ಅಂತರ ಕಾಲೇಜು ರಾಜ್ಯ ಮಟ್ಟದ ಪುರುಷರ ಮತ್ತು ಮಹಿಳೆಯರ ಬೇಸ್‌ಬಾಲ್ ಚಾಂಪಿಯನ್‌ಶಿಪ್ ಮತ್ತು ವಿಟಿಯು ತಂಡದ ಆಯ್ಕೆ ಪ್ರಕ್ರಿಯೆ, ಮುಖ್ಯ ಅತಿಥಿಗಳು : ವಿಟಿಯು ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರ್ ಡಾ. ಎನ್. ಕೃಷ್ಣೇಗೌಡ, ಮೈಸೂರು ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಸಿ. ವೆಂಕಟೇಶ್, ಬೆಳಗಾವಿ ವಿಟಿಯು ಕುಲಪತಿ ಡಾ. ಎಸ್. ವಿದ್ಯಾಶಂಕರ್, ವಿಟಿಯು ಪ್ರಾದೇಶಿಕ ಸೆಂಟರ್‌ನ ಪ್ರಾದೇಶಿಕ ನಿರ್ದೇಶಕ ಡಾ. ಟಿ.ಪಿ. ರೇಣುಕಾಮೂರ್ತಿ, ಮೈಸೂರು ವಿಭಾಗದ ರೀಜನಲ್ ಡೈರೆಕ್ಟರ್ ಡಾ. ಎಂ.ಪಿ. ಮುರಳೀಧರ್, ವಿಟಿಯು ದೈಹಿಕ ಶಿಕ್ಷಣ ನಿರ್ದೇಶಕ ಡಾ. ಪಿ. ಪುಟ್ಟಸ್ವಾಮಿಗೌಡ, ಡಾ. ಕೆ.ಎಂ. ಚಿರಂತ್, ಜಿ.ಎಲ್. ರಘುನಾಥ, ಸ್ಥಳ: ಮಹಾರಾಜ ಕಾಲೇಜು ಕ್ರಿಕೆಟ್ ಮೈದಾನ, ಬೆಳಗ್ಗೆ 9ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ:** ಐದು ದಿನಗಳ ರಾಷ್ಟ್ರೀಯ ಮಟ್ಟದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ, ಅಧ್ಯಕ್ಷತೆ: ಮುಕ್ತವಿವಿ ಕುಲಪತಿ ಪ್ರೊ. ಶರಣಪ್ಪ ಹಲಸೆ, ಮುಖ್ಯ ಅತಿಥಿಗಳು: ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಉಪಸ್ಥಿತರು: ಕರಾಮುವಿವಿ ಕುಲಸಚಿವ ಪ್ರೊ. ಮೂರ್ತಿ, ಕರಾಮುವಿ ಡೀನ್ ಪ್ರೊ.ಎನ್.ಲಕ್ಷ್ಮಿ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10ಕ್ಕೆ.

■ **ದೀಪಾ ಪದವಿ ಪೂರ್ವ ಕಾಲೇಜು:** ಫ್ರೆಶರ್ಸ್ ಡೇ, ಅತಿಥಿಗಳು: ಮಾನಸ ಆರ್ಥೋಪೆಡಿಕ್ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಟಿ.ಮಂಜುನಾಥ್, ಬಿ.ರಾಮು, ಅಧ್ಯಕ್ಷತೆ: ದೀಪಾ ಎಜುಕೇಷನ್ ಅಂಡ್ ಸರ್ವೀಸ್ ಟ್ರಸ್ಟ್ ಅಧ್ಯಕ್ಷ ಎಂ.ರಾಮಪ್ಪ, ಸ್ಥಳ: ವಿವೇಕಾನಂದ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ವ್ಯಾಸರಾಜಪುರ ಮಠ, ಸೋಸಲೆ (ಮುನಿತ್ರಮ ಪೀಠ), ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿ. ಶ್ರೀನಿಧಿ ಆಚಾರ್ಯ ಪ್ಯಾಟಿ ಅವರಿಂದ ಬಾಲಕಾಂಡ ಕುರಿತು ಪ್ರವಚನ, ಸ್ಥಳ: ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ 7ರವರೆಗೆ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ, ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಗಾನಭಾರತೀ :** ವಿದುಷಿ ತೇಜಸ್ವಿನಿಯವರ ಶಿಷ್ಯರಿಂದ ಸುಗಮ ಸಂಗೀತ ಕಾರ್ಯಕ್ರಮ, ಸಂಜೆ 6ರಿಂದ ವಿದ್ವಾನ್ ಪಾಟೀಲ್ ಅವರಿಂದ ಕೀಬೋರ್ಡ್, ವಿದ್ವಾನ್ ಮಹದೇವಪ್ಪ–ತಬಲಾ, ಸಂಜೆ 7ರಿಂದ ವಿದುಷಿ ಕೆ. ಭಾಗ್ಯಲಕ್ಷ್ಮಿ ಅವರಿಂದ ಗಾಯನ, ವಿದ್ವಾನ್ ತ್ಯಾಗರಾಜನ್–ಪಿಟೀಲು, ವಿದ್ವಾನ್ ವಿ.ಎಸ್. ರಮೇಶ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ದೇವರಾಜ ಮಾರುಕಟ್ಟೆ ಸ್ನೇಹ ಬಳಗ :** ಶಾಸಕ ಕೆ. ಹರೀಶ್‌ಗೌಡ ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷ ಎಸ್. ಮಹದೇವ್, ಅಭಿನಂದಿಸುವವರು : ಸಾಹಿತಿ ಬನ್ನೂರು ಕೆ. ರಾಜು, ಅಭಿನಂದಿತರು : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಇತಿಹಾಸ ತಜ್ಞ ಪಿ.ವಿ. ನಂಜರಾಜ ಅರಸ್, ಪಾರಂಪರಿಕ ತಜ್ಞ ಎನ್.ಎಸ್. ರಂಗರಾಜು, ಬಿ. ಬಸವರಾಜು, ಆಯೂಬ್ ಖಾನ್, ಡಿ. ನಾಗಭೂಷಣ, ಸಂಘದ ಅಧ್ಯಕ್ಷ ಕೆ. ದಿನೇಶ್, ಎಸ್.ಹೆಚ್. ಸುಜೀತ್‌ಕುಮಾರ್, ರವಿ ರಾಜಕೀಯ, ಅಬ್ದುಲ್, ಸ್ಥಳ: ತರಕಾರಿ ಆವರಣ, ದೇವರಾಜ ಮಾರುಕಟ್ಟೆ, ಸಂಜೆ 5.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ.ಸತ್ಯನಾರಾಯಣ, 7.15 ಕಾದಂಬರಿ ವಿಹಾರ–ನಾ ಕಸ್ತೂರಿಯವರ ರಂಗನಾಯಕಿ ಕಾಂದಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್.ಎಸ್.ಎಸ್., 8.30 ಕರೆಗೊಂದು ಗೀತೆ, 9.05 ವಸುದೈವ ಕುಟುಂಬಕಂ–ಭಾರತ ಜಿ–20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ನೈವೇಲಿ ಸಂತಾನ ಗೋಪಾಲನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.00 ವನಿತಾ ವಿಹಾರ, 12.30 ದೇವರನಾಮ–ವಿ.ವಂದನಾ, 12.45 ಆಕಾಶವಾಣಿ ಕೇಳುದೆಂದರೆ ಕಾಳಿಹುಂಡಿ ಶಿವಕುಮಾರ್ ಅವರೊಡನೆ ಸಂದರ್ಶನ, ಸಂದರ್ಶಕರು ದಿವಾಕರ ಹೆಗಡೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20ಭಾವಗೀತೆಗಳು–ಎಂ.ಆರ್. ಶ್ರೀಹರ್ಷ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಟಿ.ಆರ್. ಮಹಾಲಿಂಗಂ–ವೇಣು ವಾದನ, 4.00 ಕಥಾ ಕಾಲಕ್ಷೇಪ–ಗಜಗೌರಿ ವ್ರತ, ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಮುಂಗಾರಿಗೆ ಸೂಕ್ತವಾದ ಭತ್ತದ ತಳಿಗಳು ಕುರಿತು ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕರಾದ ಡಾ.ಎನ್.ಶಿವಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 9.30 ಎಂ.ಎಲ್ ವಸಂತಕುಮಾರಿ–ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ

ಮೈಸೂರು ಮಿತ್ರ

ಮಂಗಳವಾರ 25 ಜುಲೈ 2023

ಮೈಸೂರು ದಸರಾದಲ್ಲಿ ಪ್ರವಾಸಿಗರ ನೆರವಿಗೆ ಟೂರಿಸ್ಟ್ ಪೊಲೀಸ್ ವ್ಯವಸ್ಥೆ

- ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್
- ದಸರಾ ವಸ್ತುಪ್ರದರ್ಶನದ ಅಭಿವೃದ್ಧಿಗೆ ಸಮಿತಿ ರಚನೆ
- ಜಂಗಲ್ ಲಾಡ್ಜಸ್ ವಾಸ್ತವ್ಯಕ್ಕೆ ರಿಯಾಯಿತಿ ದರದ ಪ್ಯಾಕೇಜ್

ಮೈಸೂರು, ಜು.24(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ವೇಳೆ ಪ್ರವಾಸಿಗರ ನೆರವಿಗಾಗಿ ಟೂರಿಸ್ಟ್ ಪೊಲೀಸ್ ವ್ಯವಸ್ಥೆ ಮಾಡಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಮೈಸೂರು ಅರಮನೆ ಸಭಾಂಗಣದಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ವಿಶ್ವ ವಿಖ್ಯಾತ ಮೈಸೂರು ದಸರಾ ವೀಕ್ಷಣೆಗಾಗಿ ದೇಶ–ವಿದೇಶದ ಲಕ್ಷಾಂತರ ಜನರು ಬರುತ್ತಾರೆ. ಕೆಲವು ತೊಂದರೆಗಳು ಎದುರಾದಾಗ ಯಾರ ಬಳಿ ಹೋಗಿ ದೂರು ನೀಡಬೇಕು ಎಂಬುದು ಅವರಿಗೆ ಅರಿವಾಗುವುದಿಲ್ಲ. ಆ ಬಗ್ಗೆ ಮಾಹಿತಿ ಕೂಡ ಅವರಿಗೆ ಇರುವುದಿಲ್ಲ. ಇಂತಹ ವೇಳೆ ಪ್ರವಾಸಿಗರ ಅನುಕೂಲಕ್ಕಾಗಿ ತೊಂದರೆಯಾದಾಗ ಅವರ ನೆರವಿಗೆ ಬರಲು ಟೂರಿಸ್ಟ್ ಪೊಲೀಸ್ ವ್ಯವಸ್ಥೆ ಮಾಡಲು ಚಿಂತನೆ ನಡೆಸಿದ್ದೇವೆ ಎಂದು ಹೇಳಿದರು.

ದಸರಾ ತಯಾರಿ: ವಿಶ್ವ ಪ್ರಸಿದ್ಧ ದಸರಾ ಆಚರಣೆಗಾಗಿ ಈಗಾಗಲೇ ತಯಾರಿಗಳು ಆರಂಭವಾಗಿದೆ. ಪ್ರವಾಸೋದ್ಯಮ ಇಲಾಖೆಯಿಂದ ಆಗಬೇಕಾದ ವ್ಯವಸ್ಥೆಗಳ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದೇನೆ. ಮೈಸೂರು ದಸರಾ ಪ್ರಾಧಿಕಾರ ರಚನೆ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಸಮಾಲೋಚನೆ ನಡೆಸುತ್ತೇನೆ ಎಂದು ತಿಳಿಸಿದರು.

ಮೈಸೂರಿನಲ್ಲಿ ದೇಶ–ವಿದೇಶದ ಪ್ರವಾಸಿಗರನ್ನು ಆಕರ್ಷಿಸುವ ಹತ್ತಾರು ಪ್ರವಾಸಿ ತಾಣಗಳಿವೆ. ಇದರಿಂದ ವರ್ಷಕ್ಕೆ 50 ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರವಾಸಿಗರ ಸ್ನೇಹಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಲಾಗುವುದು ಎಂದರು.

ಅರಮನೆ ಖಜಾನೆಯಲ್ಲಿ ಅಪರೂಪದ ವಸ್ತುಗಳು: ಮೈಸೂರು ಅರಮನೆಯಲ್ಲಿರುವ ಪ್ರಾಚ್ಯವಸ್ತು ಸಂಗ್ರಹಾಲಯದ ಖಜಾನೆಯನ್ನು ಈ ತನಕ ತೆಗೆದಿರಲಿಲ್ಲ. ಹತ್ತು ವರ್ಷದ ನಂತರ ತೆರೆಯಲಾಗಿದೆ. ಕರ್ನಾಟಕದಲ್ಲಿ ದೊರೆತ 369 ಅಪರೂಪದ ವಸ್ತುಗಳು ಖಜಾನೆಯಲ್ಲಿವೆ. ನಾಣ್ಯಗಳು, ತಾಮ್ರಪತ್ರಗಳು, ನಟರಾಜನ ವಿಗ್ರಹಗಳು ಸೇರಿದಂತೆ ಹಲವು ವಿಶಿಷ್ಟ ರೀತಿಯ ಅಪರೂಪದ ವಸ್ತುಗಳು ಅಲ್ಲಿವೆ. ಆದರೆ ಅವುಗಳನ್ನು ನೋಡುವ ಅವಕಾಶ ಜನಸಾಮಾನ್ಯರಿಗೆ ಈ ತನಕ ದೊರೆತಿಲ್ಲ. ಈಗ ಅವುಗಳನ್ನು ವೀಕ್ಷಿಸುವ ಅವಕಾಶ ಜನರಿಗೂ ಸಿಗಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ ಎಂದು ಹೆಚ್.ಕೆ.ಪಾಟೀಲ್ ತಿಳಿಸಿದರು.

ಹಳೇ ಡಿಸಿ ಕಚೇರಿ ಮ್ಯೂಸಿಯಂ: ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿಯನ್ನು ಹೊಸ ಜಿಲ್ಲಾ ಕಚೇರಿಗಳ ಸಂಕೀರ್ಣಕ್ಕೆ ಸ್ಥಳಾಂತರ ಮಾಡಲಾಗಿದೆ. ಹೇಗಿದ್ದರೂ ಪಾರಂಪರಿಕ ಶೈಲಿಯ ಹಳೆ ಜಿಲ್ಲಾಧಿಕಾರಿ ಕಚೇರಿ ಕೂಡ ಖಾಲಿ ಇದೆ. ಹಾಗಾಗಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಅಪರೂಪದ ವಸ್ತುಗಳನ್ನು ಹಳೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಟ್ಟು ಮ್ಯೂಸಿಯಂ ಮಾಡಲಾಗುವುದು. ಅಪರೂಪದ ವಸ್ತುಗಳನ್ನು ಜನರು ನೋಡಲು ಅವಕಾಶ ಕಲ್ಪಿಸಲಾಗುವುದು ಎಂದರು.

ವಿಶೇಷ ಪ್ಯಾಕೇಜ್: ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್‌ಗೆ ಬಹಳಷ್ಟು ಪ್ರವಾಸಿಗರು ಬರುತ್ತಾರೆ. 2020–21ರ ಸಾಲಿನಲ್ಲಿ 61 ಕೋಟಿ ರೂಪಾಯಿ ವ್ಯವಹಾರ ಮಾಡಿತ್ತು. ಅದು 2022–23 ರ ಸಾಲಿಗೆ 111 ಕೋಟಿಗೆ ವಿಸ್ತಾರವಾಗಿದೆ. ದುಬಾರಿ ಬೆಲೆಯ ಕಾರಣ ಜಂಗಲ್ ಲಾಡ್ಜಸ್‌ಗೆ ಬರುವ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ. ಈಗ ಶೇಕಡಾ 47ರಷ್ಟು ಕೋಣೆಗಳು ಭರ್ತಿಯಾಗುತ್ತಿವೆ. ಆದರೆ ಇದು 70ರಷ್ಟು ಗುರಿ ಮುಟ್ಟಬೇಕಿದೆ. ಈ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಸರ್ಕಾರ ಕೈಗೊಂಡಿದೆ ಎಂದು ಹೆಚ್.ಕೆ.ಪಾಟೀಲ್ ತಿಳಿಸಿದರು.

ಹಿರಿಯ ನಾಗರಿಕರು, ಪಿಯುಸಿ ಮತ್ತು ಪದವಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿಶೇಷ ಪ್ಯಾಕೇಜ್ ನೀಡಲಾಗುವುದು. ರಿಯಾಯಿತಿ ದರದ ಈ ಪ್ಯಾಕೇಜ್‌ನಿಂದ ಜಂಗಲ್ ಲಾಡ್ಜಸ್‌ಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತದೆ. ಆಗ ನಾವು ನಿಗದಿ ಮಾಡಿರುವ ಶೇಕಡಾ 70ರಷ್ಟು ಗುರಿ ತಲುಪಬಹುದು. ಈ ಮೂಲಕ ಕರ್ನಾಟಕಕ್ಕೆ ಪ್ರವಾಸಿಗರನ್ನು ಮತ್ತಷ್ಟು ಆಕರ್ಷಿಸಲಾಗುವುದು ಎಂದು ಹೆಚ್.ಕೆ.ಪಾಟೀಲ್ ಹೇಳಿದರು.

ಇದಕ್ಕೂ ಮೊದಲು ಸಚಿವ ಹೆಚ್.ಕೆ.ಪಾಟೀಲ್ ಅವರು ಮೈಸೂರಿನ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್‌ನಲ್ಲಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್‌ನ ಬೋರ್ಡ್ ಮೀಟಿಂಗ್ ನಡೆಸಿದರು. ಪ್ರವಾಸೋದ್ಯಮ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ನ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಕೆಎಸ್ ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಜಿ.ಜಗದೀಶ್, ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ.ರಾಮ್ ಪ್ರಶಾಂತ್ ಮನೋಹರ್, ಡಿಸಿ ಡಾ.ರಾಜೇಂದ್ರ ಉಪಸ್ಥಿತರಿದ್ದರು.



ಪ್ರವಾಸಿ ತಾಣಗಳಿಗೆ ಕ್ಯೂಆರ್ ಕೋಡ್‌ವುಳ್ಳ ಒಂದೇ ಟಿಕೆಟ್ ವ್ಯವಸ್ಥೆ

"ಮೈಸೂರಿನ ಪ್ರವಾಸಿ ತಾಣಗಳ ವೀಕ್ಷಣೆಗೆ ಬರುವ ಪ್ರವಾಸಿಗರು ಆಯಾಯ ಪ್ರವಾಸಿ ತಾಣಗಳ ಪ್ರವೇಶ ದ್ವಾರದಲ್ಲಿ ಟಿಕೆಟ್‌ಗಾಗಿ ಸರದಿ ಸಾಲಿನಲ್ಲಿ ನಿಲ್ಲಬೇಕಿದೆ. ಇದರಿಂದ ಅವರ ಸಮಯ ವ್ಯರ್ಥವಾಗುತ್ತದೆ. ಹಾಗಾಗಿ ಎಲ್ಲಾ ಪ್ರವಾಸಿ ತಾಣಗಳನ್ನು ವೀಕ್ಷಣೆ ಮಾಡುವ ಕ್ಯೂ ಆರ್ ಕೋಡ್ ಇರುವ ಒಂದೇ ಟಿಕೆಟ್ ಪರಿಚಯಿಸಲಾಗುವುದು. ಒಂದು ಟಿಕೆಟ್ ಖರೀದಿಸಿದರೆ ಎಲ್ಲಾ ಪ್ರವಾಸಿ ತಾಣಗಳಿಗೆ ನೇರ ಪ್ರವೇಶ ಕಲ್ಪಿಸುವ ವ್ಯವಸ್ಥೆ ಮಾಡಲಾಗುವುದು. ರಿಯಾಯಿತಿ ದರದ ಈ ಟಿಕೆಟ್‌ನಲ್ಲಿ ಪಾರ್ಕಿಂಗ್ ಶುಲ್ಕ ಕೂಡ ಸೇರಿಸಲಾಗುವುದು. ಇದರಿಂದ ಪ್ರವಾಸಿಗರು ಪ್ರತಿಯೊಂದು ಪ್ರವಾಸಿ ತಾಣದಲ್ಲಿ ಗಂಟೆ ಗಟ್ಟಲೆ ಸರದಿ ಸಾಲಿನಲ್ಲಿ ನಿಲ್ಲುವುದು, ಪ್ರತಿ ಪ್ರವಾಸಿ ತಾಣದಲ್ಲಿ ಟಿಕೆಟ್ ಖರೀದಿಸುವುದು ತಪ್ಪುತ್ತದೆ. ರಿಯಾಯಿತಿ ದರದಲ್ಲಿ ಕ್ಯೂ ಆರ್ ಕೋಡ್ ಟಿಕೆಟ್ ದೊರೆಯುವ ಕಾರಣ ಪ್ರವಾಸಿಗರಿಗೆ ಯಾವ ಕಿರಿಕಿರಿ ಇರುವುದಿಲ್ಲ.

–ಹೆಚ್.ಕೆ.ಪಾಟೀಲ್, ಪ್ರವಾಸೋದ್ಯಮ ಸಚಿವ

ದಸರಾ ವಸ್ತುಪ್ರದರ್ಶನ ಅಭಿವೃದ್ಧಿ ಸಂಬಂಧ ಸಮಿತಿ ರಚನೆ



ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ 80 ಎಕರೆ ಪ್ರದೇಶವಿದೆ. ಇಷ್ಟೊಂದು ವಿಶಾಲವಾದ ಜಾಗ ಇಟ್ಟುಕೊಂಡು ಅದರ ಅಭಿವೃದ್ಧಿ ಮಾಡದಿರುವುದು ಬೇಸರದ ಸಂಗತಿ. ಹಿರಿಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಮೈಸೂರು ದಸರಾ ವಸ್ತು ಪ್ರದರ್ಶನವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲು ತೀರ್ಮಾನ ಮಾಡಲಾಗಿದೆ. ಈ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡುವಂತೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಮೂವರ ಸಮಿತಿ ರಚನೆ ಮಾಡಲಾಗಿದೆ. ಇನ್ನು 20 ದಿನದಲ್ಲಿ ವರದಿ ನೀಡುವಂತೆ ಸೂಚಿಸಲಾಗಿದೆ. ವರದಿ ನಂತರ ದಸರಾ ವಸ್ತು ಪ್ರದರ್ಶನವನ್ನು ಯಾವ ರೀತಿ ಅಭಿವೃದ್ಧಿ ಮಾಡಬೇಕು ಎಂಬ ಬಗ್ಗೆ ಚರ್ಚೆ ನಡೆಸಲಾಗುವುದು. **–ಹೆಚ್.ಕೆ.ಪಾಟೀಲ್.**

ಹಳೆ ಡಿಸಿ ಕಚೇರಿ, ವೆಲ್ಲಿಂಗ್ಟನ್ ಭವನ ಪರಿಶೀಲಿಸಿದ ಸಚಿವ ಹೆಚ್.ಕೆ.ಪಾಟೀಲ್



ಮೈಸೂರು, ಜು.24 (ಎಂಟಿವೈ)– ಮೈಸೂರಿನ ಹಳೆ ಜಿಲ್ಲಾಧಿಕಾರಿಗಳ ಕಟ್ಟಡ ಹಾಗೂ ಇರ್ವಿನ್ ರಸ್ತೆಯಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯ ವೆಲ್ಲಿಂಗ್ಟನ್ ಭವನಕ್ಕೆ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಸೋಮವಾರ ಭೇಟಿ ನೀಡಿ ವೀಕ್ಷಿಸಿದರು.



ಎರಡು ದಿನಗಳ ಪ್ರವಾಸಕ್ಕೆಂದು ಮೈಸೂರಿಗೆ ಆಗಮಿಸಿದ್ದ ಸಚಿವ ಹೆಚ್.ಕೆ. ಪಾಟೀಲ್ ಅವರು ಚಾಮುಂಡಿಬೆಟ್ಟಕ್ಕೆ ತೆರಳಿ ದರ್ಶನ ಪಡೆದ ಬಳಿಕ, ಹಳೆ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಜಿ.ಜಗದೀಶ್, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಜಗನ್ನಾಥ್ ಸೇರಿದಂತೆ ಇನ್ನಿತರ ಅಧಿಕಾರಿಗಳೊಂದಿಗೆ ಹಳೆ ಡಿಸಿ ಕಚೇರಿ ವೀಕ್ಷಿಸಿದರು. ಈ ವೇಳೆ ಕಟ್ಟಡ ಇತಿಹಾಸ ಹಾಗೂ ಭದ್ರತೆ ಬಗ್ಗೆ ಅವಲೋಕಿಸಿದರು. ಸುಂದರ ವಿನ್ಯಾಸದಲ್ಲಿರುವ ಕಟ್ಟಡ ವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ವಸ್ತುಸಂಗ್ರಹಾಲಯವಾಗಿ ಮಾರ್ಪಡಿಸುವ ಅಭಿಪ್ರಾಯ ವ್ಯಕ್ತಪಡಿಸಿದರು.

ವೆಲ್ಲಿಂಗ್ಟನ್ ಭವನ: ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡ ವೀಕ್ಷಣೆ ಬಳಿಕ ಇರ್ವಿನ್ ರಸ್ತೆಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯದ ವೆಲ್ಲಿಂಗ್ಟನ್ ಭವನಕ್ಕೆ ಭೇಟಿ ನೀಡಿದರು. ಅತ್ಯಮೂಲ್ಯ ವಸ್ತುಗಳನ್ನು ಸಂಗ್ರಹಿಸಿಟ್ಟಿರುವ ವೆಲ್ಲಿಂಗ್ಟನ್ ಭವನದ ನವೀಕರಣ ಕಾಮಗಾರಿ ಪರಿಶೀಲಿಸಿದರು. ವಸ್ತು ಸಂಗ್ರಹಾಲಯದ ನವೀಕರಣ ಕಾಮಗಾರಿ ಪೂರ್ಣಗೊಂಡಿದ್ದು, ವಸ್ತು ಪ್ರದರ್ಶನ ವೀಕ್ಷಣೆ ಬರಲು ಜಾಗೃತಿ ಮೂಡಿಸುವಂತೆ ಸಲಹೆ ನೀಡಿದರು. ಈ ವೇಳೆ ವೆಲ್ಲಿಂಗ್ಟನ್ ಭವನದಲ್ಲಿ ಸಂಗ್ರಹಿಸಿಡಲಾಗಿರುವ ವಿವಿಧ ಅತ್ಯಮೂಲ್ಯ ವಸ್ತುಗಳನ್ನು ವೀಕ್ಷಿಸಿ, ಪ್ರಶಂಸೆ ವ್ಯಕ್ತಪಡಿಸಿದರು.



ಮೈಸೂರಿಗೆ ಭೇಟಿ ನೀಡಿದ್ದ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಹಾನಗರಪಾಲಿಕೆ ಮಾಜಿ ಸದಸ್ಯ ಸುನಂದಕುಮಾರ್ ಇತರರು ಇದ್ದರು.

ಮಳೆ ಕಾಟ: ಭಾರತ–ವಿಂಡೀಸ್ ಪಂದ್ಯ ಡ್ರಾ



ಸ್ಕೋರ್ ವಿವರ

ಭಾರತ: ಪ್ರಥಮ ಇನಿಂಗ್ಸ್ 438
ವೆಸ್ಟ್ ಇಂಡೀಸ್: ಪ್ರಥಮ ಇನಿಂಗ್ಸ್ 255
ಭಾರತ: ದ್ವಿತೀಯ ಇನಿಂಗ್ಸ್ 181–2 (ಡಿ)
ವೆಸ್ಟ್ ಇಂಡೀಸ್: ದ್ವಿತೀಯ ಇನಿಂಗ್ಸ್ 32 ಓವರ್‌ಗಳಿಗೆ 76–2

ಪೋರ್ಟ್ ಆಫ್ ಸ್ಪೇನ್: ಭಾರತ ಹಾಗೂ ವೆಸ್ಟ್ ಇಂಡೀಸ್ ನಡುವಣ 2ನೇ ಟೆಸ್ಟ್ ಪಂದ್ಯದ ಐದನೇ ಹಾಗೂ ಅಂತಿಮ ದಿನಕ್ಕೆ ಮಳೆ ಅಡ್ಡಿಯಾಗಿದೆ. ಒಂದೇ ಒಂದು ಎಸೆತ ಕಾಣದೇ ದಿನದಾಟ ರದ್ದಾಗಿದೆ. ಇದರೊಂದಿಗೆ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿದೆ.

ಭಾರತ ತಂಡ ನೀಡಿದ್ದ 365 ರನ್‌ಗಳ ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ ನಾಲ್ಕನೇ ದಿನದಾಟದ ಅಂತ್ಯಕ್ಕೆ ಎರಡು ವಿಕೆಟ್ ವಿಕೆಟ್ ನಷ್ಟಕ್ಕೆ 76 ರನ್ ಕಲೆ ಹಾಕಿತ್ತು. 5ನೇ ದಿನವಾದ ಸೋಮವಾರ ಆತಿಥೇಯ ವೆಸ್ಟ್‌ಇಂಡೀಸ್ ತಂಡಕ್ಕೆ ಗೆಲ್ಲಲು 289 ರನ್‌ಗಳ ಅಗತ್ಯವಿತ್ತು. ಆದರೆ ಸಂಪೂರ್ಣ ಮಳೆಯ ಒಂದೇ ಒಂದು ಎಸೆತ ಕೂಡ ಸಾಧ್ಯ ವಾಗಲಿಲ್ಲ. ದಿನದಾಟ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿತು. ಮೊದಲನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ಇನಿಂಗ್ಸ್ ಹಾಗೂ 141 ರನ್‌ಗಳಿಂದ ಭರ್ಜರಿ ಗೆಲುವು ಪಡೆದಿತ್ತು.

ಚುನಾವಣೆ ಗೆಲ್ಲಲು ಶಾಸಕ ಮುನಿರತ್ನ ಹನಿಟ್ರ್ಯಾಪ್; ಅದಕ್ಕೆಂದೆ ಸ್ಟುಡಿಯೋ ಇದೆ

ವಿಕಾಸಸೌಧ, ವಿಧಾನಸೌಧದಲ್ಲೆಲ್ಲಾ ಬರೀ ಆಂಟಿಗಳೇ!



ಬೆಂಗಳೂರು: ಮಾಜಿ ಸಚಿವ, ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ಹನಿಟ್ರ್ಯಾಪ್ ಕುರಿತು ಗಂಭೀರ ಆರೋಪ ಕೇಳಿ ಬಂದಿದೆ. ಮುನಿರತ್ನ ಬೆಂಬಲಿಗರಾಗಿದ್ದ ವೇಲು ನಾಯ್ಕರ್, ಈ ಗಂಭೀರ ಆರೋಪ ಮಾಡಿದ್ದಾರೆ.


ಸಚಿವರಾಗಿದ್ದಾಗ ಮುನಿರತ್ನ ಹನಿಟ್ರ್ಯಾಪ್ ಮಾಡಿಸುತ್ತಿದ್ದರು. ಹನಿಟ್ರ್ಯಾಪ್ ಮಾಡಲೆಂದೇ ಸ್ಟುಡಿಯೋ ಇಟ್ಟುಕೊಂಡಿದ್ದಾರೆ ಎಂದು ಅವರ ಬೆಂಬಲಿಗ, ಬಿಬಿಎಂಪಿ ಮಾಜಿ ಕಾರ್ಪೊರೇಟರ್ ವೇಲು ನಾಯ್ಕರ್ ಗಂಭೀರ ಆರೋಪ ಮಾಡಿದ್ದಾರೆ.

ಶಾಸಕ ಮುನಿರತ್ನ ಬೆಂಬಲಿಗರಾಗಿದ್ದ ವೇಲು ನಾಯ್ಕರ್ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು. ಈ ವೇಳೆ ಮಾತನಾಡಿದ ವೇಲು ನಾಯ್ಕರ್, ಹನಿಟ್ರ್ಯಾಪ್ ಮಾಡಲು ಹೆದರಿಸಲು, ಜೆ.ಪಿ. ಪಾರ್ಕ್, ಡಾಲರ್ಸ್ ಕಾಲೋನಿಯಲ್ಲಿ ಇದಕ್ಕಾಗಿ ಸ್ಟುಡಿಯೋ ಇಟ್ಟಿದ್ದಾರೆ. ಅವರು ಸಿನಿಮಾ ನಿರ್ಮಾಪಕರಲ್ಲವೇ. ಹೀಗಾಗಿ ಹನಿಟ್ರ್ಯಾಪ್ ಮಾಡಿಸಿ ಹೆದರಿಸುತ್ತಾರೆ ಎಂದರು.

ಮುನಿರತ್ನಗೆ ಚುನಾವಣೆ ಎದುರಿಸುವುದು ಹೇಗೆ ಎಂದು ಕೇಳಿದೆವು. ನಿಮ್ಮದು ಈಸ್ಟ್‌ಮನ್ ಕಲರ್ ಪಿಕ್ಚರ್ ಇದೆ ತೋರಿಸಲಾ, ಇಲ್ಲ ಕೆಲಸ ಮಾಡುತ್ತೀರಾ ಅಂತಾ ಮುನಿರತ್ನ ಹೆದರಿಸುತ್ತಿದ್ದರು. ಮುನಿರತ್ನ ನಿರ್ಮಾಪಕನಾಗಿ ಮಾಡಿದ ಮೊದಲ ಚಿತ್ರ ಆಂಟಿ ಪ್ರೀತ್ಸೆ. ಹೀಗಾಗಿ ಮುನಿರತ್ನ ಸಚಿವರಾದ ಮೇಲೂ ಬರೀ ಆಂಟಿಗಳೇ ಇರುತ್ತಿದ್ದರು. ವಿಕಾಸಸೌಧ, ವಿಧಾನಸೌಧ ಚೇಂಬರ್ ನಲ್ಲೆಲ್ಲಾ ಬರೀ ಆಂಟಿಗಳೇ ಇರುತ್ತಿದ್ದರು ಎಂದು ಆರೋಪಿಸಿದರು.

ನಾವು ಮುನಿರತ್ನ ಅವರಿಗೆ ಚುನಾವಣೆ ಎದುರಿಸುವುದು ಹೇಗೆ ಎಂದು ಕೇಳಿದೆವು. ಅದಕ್ಕೆ ಮುನಿರತ್ನ, ನಿಮ್ಮಗಳದ್ದು ಈಸ್ಟ್‌ಮನ್ ಕಲರ್ ಪಿಚ್ಚರ್ ಇದೆ ತೋರಿಸ್ಲಾ ಇಲ್ಲ ಕೆಲಸ ಮಾಡ್ತೀರಾ ಎಂದು ಹೆದರಿಸುತ್ತಿದ್ದರು. ಹನಿಟ್ರ್ಯಾಪ್ ಮಾಡುವುದಕ್ಕೆಂದೇ ಮುನಿರತ್ನ ಸ್ಟುಡಿಯೋ ಇಟ್ಟುಕೊಂಡಿದ್ದಾರೆ. ಕರೆಸುವುದು, ಹನಿಟ್ರ್ಯಾಪ್ ಮಾಡುವುದು, ಅದನ್ನು ಇಟ್ಟುಕೊಂಡು ಹೆದರಿಸುವುದು ಮಾಡುತ್ತಾರೆ ಎಂದು ವೇಲು ಆರೋಪಿಸಿದರು.

ರಾಜೀನಾಮೆ ಕೊಡಿಸುವುದೇ ಅವರ ಉದ್ದೇಶ



ಬೆಂಗಳೂರು: ನಾನು ಶಾಸಕನಾಗಿ ಇರುವವರೆಗೆ ನನ್ನ ವಿರುದ್ಧ ಇಂತಹ ಆರೋಪಗಳು ಬರುತ್ತಲೇ ಇರುತ್ತವೆ. ರಾಜಕೀಯದಲ್ಲಿ ಇದೇನು ಹೊಸದಲ್ಲ, ಒಂದೂವರೆ ವರ್ಷದ ಹಿಂದೆ ಡಿ.ಕೆ. ಸುರೇಶ್ ವಿರುದ್ಧ ಮಾತನಾಡಿದರು. ಈಗ ನನ್ನ ವಿರುದ್ಧ ಮಾತನಾಡುತ್ತಿದ್ದಾರೆ. ಇದು ತಮ್ಮ ವಿರುದ್ಧ ಕೇಳಿಬಂದಿರುವ ಹನಿಟ್ರ್ಯಾಪ್ ಆರೋಪದ ಬಗ್ಗೆ ಮಾಜಿ ಸಚಿವ ಬೆಂಗಳೂರಿನ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಪ್ರತಿಕ್ರಿಯೆ.

ಶಾಸಕ ಸ್ಥಾನಕ್ಕೆ ನಾನು ರಾಜೀನಾಮೆ ನೀಡುವುದೇ ಅವರ ಉದ್ದೇಶವಾಗಿದೆ, ನನ್ನ ತೇಜೋವಧೆ ಮಾಡ ಬೇಕೆಂದು ಹೀಗೆಲ್ಲಾ ಮಾಡುತ್ತಿದ್ದಾರೆ, ರಾಜಕೀಯದಲ್ಲಿರುವವರಿಗೆ ಇದು ಹೊಸದಲ್ಲ ಎಂದರು.

ವೇಲು ನಾಯ್ಕರ್ ನನ್ನ ಆಪ್ತವಲಯದಲ್ಲಿಯೇ ಗುರುತಿಸಿಕೊಂಡಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ, ಸಹಜವಾಗಿಯೇ ಒಂದಿಷ್ಟು ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಸೇರಿರುತ್ತಾರೆ. ಈ ಹಿಂದೆ ವೇಲು ನಾಯ್ಕರ್ ನನ್ನ ಮುಂದೆ ಸಂಸದ ಡಿಕೆ ಸುರೇಶ್ ಮತ್ತು ಕಾಂಗ್ರೆಸ್ ಮುಖಂಡೆ ಕುಸುಮಾ ಹನುಮಂತರಾಯಪ್ಪ ಬಗ್ಗೆ ತುಂಬಾ ಮಾತನಾಡಿದ್ದಾರೆ. ಕಾಂಗ್ರೆಸ್ ಸೇರಿರುವ ಅವರು ಇನ್ಮುಂದೆ ಡಿ.ಕೆ.ಸುರೇಶ್, ಕುಸುಮಾ ಬಗ್ಗೆ ಮಾತಾಡದಿದ್ರೆ ಸಾಕು.

ಮಣಿಪುರ ಘಟನೆ ಖಂಡಿಸಿ ಮೈಸೂರಲ್ಲಿ ರೈತಸಂಘ ಪ್ರತಿಭಟನೆ

ಮೈಸೂರು, ಜು.24(ಸಿಎನ್)–ಮಣಿಪುರದಲ್ಲಿ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ಪ್ರಕರಣ ದೇಶದ ಜನರನ್ನ ದಿಗ್ಭ್ರಮೆಗೊಳಿಸಿದೆ. ನಿಜವಾದ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು. ಮಣಿಪುರ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು, ರಾಷ್ಟ್ರಪತಿ ಆಡಳಿತ ಹೇರಬೇಕು ಎಂದು ರೈತ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.



ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಅವರಿಗೆ ಒತ್ತಾಯ ಪತ್ರ ಸಲ್ಲಿಸಿದ ನಂತರ ಮಾತನಾಡಿದ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಹೊಸಕೋಟೆ, ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ದ್ವೇಷದ ಹಿಂಸಾಚಾರ, ಮಹಿಳೆಯರನ್ನು ವಿವಸ್ತ್ರಗೊಳಿಸಿ ನಡೆಸಿದ ಅತ್ಯಾಚಾರದ ಘಟನೆ ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂಥದ್ದು, ಕಳೆದ 83 ದಿನಗಳಿಂದಲೂ ಮಣಿಪುರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಮಣಿಪುರದ ಜನಾಂಗೀಯ ದಳ್ಳುರಿಯನ್ನು ಶಮನಮಾಡುವ ಬದಲು ನಮ್ಮ ಕೇಂದ್ರ ಸರ್ಕಾರ ಮತ್ತು ಅಲ್ಲಿನ ರಾಜ್ಯ ಸರ್ಕಾರ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದೆ ಎಂದರು.


ಮಣಿಪುರ ಘಟನೆ ಕುರಿತು ಸುಪ್ರೀಂಕೋರ್ಟ್ ಮಧ್ಯೆ ಪ್ರವೇಶಿಸಿದ ನಂತರ ಪ್ರಧಾನಿಗಳು ಬಾಯಿ ಬಿಟ್ಟಿದ್ದಾರೆ. ಮಣಿಪುರದಲ್ಲಿ ಮಾನವ ಹಕ್ಕುಗಳ ಘೋರ ಉಲ್ಲಂಘನೆಯಾಗಿದೆ ಎಂದರು. ರಾಷ್ಟ್ರಪತಿಗಳು ಈ ಸಂಬಂಧ ಮಧ್ಯೆ ಪ್ರವೇಶಿಸಿ ಅಲ್ಲಿನ ಸರ್ಕಾರವನ್ನು ವಜಾ ಮಾಡಬೇಕು. ಶಾಂತಿ ಸ್ಥಾಪಿಸಿ ದೇಶದ ಘನತೆ ಗೌರವ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಬೇಕು. ಇಲ್ಲಿ ರಾಷ್ಟ್ರಪತಿಗಳ ಆಡಳಿತ ಹೇರಬೇಕೆಂದು ಒತ್ತಾಯ ಪತ್ರವನ್ನು ಸಲ್ಲಿಸುತ್ತಿದ್ದೇವೆ ಎಂದರು.

ಈ ವೇಳೆ ರಾಜ್ಯ ರೈತ ಸಂಘದ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ನೇತ್ರಾವತಿ ಹಾಗೂ ಮತ್ತಿತರರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜು.24– ಜು.26ರ ಬುಧವಾರ ಬೆಳಗ್ಗೆ 10ರಿಂದ ಸಂಜೆ 5:30ವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ದೂರ, ತಳೂರು, ಮುರುಡಗಳ್ಳಿ, ದೊಡ್ಡಕಾಟೂರು, ಚಿಕ್ಕ ಕಾಟೂರು, ಸಿಂಧುವಳ್ಳಿ, ನಂಜುಂಡೇಶ್ವರ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ನಂಜನಗೂಡು ವಿಭಾಗ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಾದ ಹಳ್ಳಿಕೆರೆಹುಂಡಿ, ಬಿದರಗೂಡು, ಮೂಡಲಹುಂಡಿ (ಕಾಟೂರು) ನೀರು ಸರಬರಾಜು ಕೇಂದ್ರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದೆ.

ಹೈಕೋರ್ಟ್‌ನ 6 ಜಡ್ಜ್‌ಗಳು, ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಜೀವ ಬೆದರಿಕೆ



ಬೆಂಗಳೂರು: ಹೈಕೋರ್ಟ್‌ನ ಆರು ನ್ಯಾಯಾಧೀಶರು ಮತ್ತು ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಜೀವ ಬೆದರಿಕೆ ಹಾಕಿರುವ ಆರೋಪಿಗಳಿಗಾಗಿ ಕೇಂದ್ರ ಸಿಇಎನ್ ಕ್ರೈಂ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಹೈಕೋರ್ಟ್‌ನ ಸಾರ್ವಜನಿಕ ಸಂಪರ್ಕ ಅಧಿಕಾರಿ ವಾಟ್ಸಾಪ್ ಸಂಖ್ಯೆಗೆ ಆರೋಪಿ ಬೆದರಿಕೆ ಸಂದೇಶ ಕಳುಹಿಸಿದ್ದಾನೆ.

ಜುಲೈ 12 ರಂದು ಸಂಜೆ 7 ಗಂಟೆ ಸುಮಾರಿಗೆ ಪಿಆರ್‌ಒ ಕೆ. ಮುರಳೀಧರ್ ಬೆದರಿಕೆ ಕರೆ ಸ್ವೀಕರಿಸಿದ್ದು, ಹೈಕೋರ್ಟ್‌ನಿಂದ ನೀಡಲಾದ ಪಿಆರ್‌ಒ ಅವರ ಅಧಿಕೃತ ಮೊಬೈಲ್ ನಂಬರ್‌ಗೆ ಮೇಸೆಜ್ ಬಂದಿದೆ. ಈ ಸಂಬಂಧ ಜುಲೈ 14 ರಂದು ಸೆಂಟ್ರಲ್ ಸಿಇಎನ್ ಕ್ರೈಂ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಆರು ನ್ಯಾಯಾಧೀಶರು ಮತ್ತು ಪಿಆರ್‌ಒಗೆ ಜೀವ ಬೆದರಿಕೆ ಹಾಕಿ, 50 ಲಕ್ಷ ರೂ.ಗೆ ಬೇಡಿಕೆ ಇಟ್ಟಿರುವ ಅಪರಿಚಿತ ವ್ಯಕ್ತಿಯ ವಿರುದ್ಧ ದೂರು ದಾಖಲಿಸಲಾಗಿದೆ. ಪಾಕಿಸ್ತಾನದಲ್ಲಿರುವ ಎಬಿಎಲ್ ಅಲೈಡ್ ಬ್ಯಾಂಕ್ ಲಿಮಿಟೆಡ್‌ಗೆ ರೂ. 50 ಲಕ್ಷ ಹಣವನ್ನು ಜಮಾ ಮಾಡಬೇಕೆಂದು ಪಿಆರ್‌ಒ ವಾಟ್ಸಾಪ್‌ಗೆ ಮೆಸೇಜ್ ಕಳುಹಿಸಲಾಗಿದೆ. ಅಲ್ಲದೇ ಹಣ ಜಮಾ ಮಾಡಬೇಕಾದ ಬ್ಯಾಂಕ್ ಖಾತೆಯ ಸಂಖ್ಯೆಯನ್ನು ಆರೋಪಿ ಕಳುಹಿಸಿದ್ದಾನೆ. 1929237–1677 ಸಂಖ್ಯೆಯಿಂದ ಸಂದೇಶವನ್ನು ಕಳುಹಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಎಫ್‌ಐಆರ್ ಪ್ರತಿಯಲ್ಲಿ ನ್ಯಾಯಾಧೀಶರಾದ ನ್ಯಾಯಮೂರ್ತಿ ಮೊಹಮ್ಮದ್ ನವಾಜ್, ಎಚ್.ಟಿ. ನರೇಂದ್ರ ಪ್ರಸಾದ್, ಅಶೋಕ್ ಜಿ.ನಿಜಗನ್ನವರ್, ಎಚ್.ಪಿ.ಸಂದೇಶ್, ಕೆ.ನಟರಾಜನ್ ಮತ್ತು ವೀರಪ್ಪ ಅವರ ಹೆಸರನ್ನು ಉಲ್ಲೇಖಿಸಿದ್ದಾರೆ. ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡದಿದ್ದಲ್ಲಿ 'ದುಬೈ ಗ್ಯಾಂಗ್' ಮೂಲಕ ಕೊಲ್ಲುವುದಾಗಿ ಆರೋಪಿಗಳು ಬೆದರಿಕೆ ಹಾಕಿದ್ದಾರೆ.

ಲೋಕಸಭೆಯಲ್ಲಿ ದಂತವೈದ್ಯ, ನರ್ಸಿಂಗ್ ಆಯೋಗ ರಚನೆಗೆ ಮಸೂದೆ ಮಂಡನೆ

ನವದೆಹಲಿ: ಪ್ರಸ್ತುತ ಜಾರಿಯಲ್ಲಿರುವ 1948ರ ದಂತವೈದ್ಯ ಕಾಯ್ದೆ ರದ್ದು ಮಾಡಿ ರಾಷ್ಟ್ರೀಯ ದಂತ ಆಯೋಗ (ಎನ್‌ಡಿಸಿ) ರಚನೆಗೆ ಅವಕಾಶ ನೀಡುವ ರಾಷ್ಟ್ರೀಯ ದಂತ ಆಯೋಗ ಮಸೂದೆ–2023 ಅನ್ನು ಕೇಂದ್ರ ಸರ್ಕಾರ ಸೋಮವಾರ ಲೋಕಸಭೆಯಲ್ಲಿ ಮಂಡನೆ ಮಾಡಿತು.



ಇದೇ ವೇಳೆ, 1947ರ ಭಾರತೀಯ ನರ್ಸಿಂಗ್ ಮಂಡಳಿ ಕಾಯ್ದೆ ರದ್ದು ಮಾಡಿ, ರಾಷ್ಟ್ರೀಯ ನರ್ಸಿಂಗ್ ಮತ್ತು ಪ್ರಸೂತಿ ಆಯೋಗ ರಚನೆ ಮಾಡುವ ಗುರಿ ಹೊಂದಿರುವ ರಾಷ್ಟ್ರೀಯ ನರ್ಸಿಂಗ್ ಮತ್ತು ಪ್ರಸೂತಿ ಆಯೋಗ ಮಸೂದೆ–2023 ಮಂಡಿಸಿತು. ಎನ್‌ಡಿಸಿ ಮಸೂದೆಯು ದೇಶದ ದಂತ ವೈದ್ಯಕೀಯ ಶಿಕ್ಷಣ ಮತ್ತು ವೃತ್ತಿಯನ್ನು ನಿಯಂತ್ರಿಸಲು ಎನ್‌ಎಂಸಿ ರಚನೆಗೆ ಶಿಫಾರಸು ಮಾಡುತ್ತದೆ. ಕೈಗೆಟಕುವ ದರದಲ್ಲಿ ದಂತವೈದ್ಯ ಶಿಕ್ಷಣ ನೀಡುವ ಮತ್ತು ಗುಣಮಟ್ಟದ ದಂತ ಚಿಕಿತ್ಸೆ ಒದಗಿಸುವ ಗುರಿ ಹೊಂದಿದೆ. ಎನ್‌ಎನ್‌ಎಂಸಿ ಮಸೂದೆಯು ಗುಣಮಟ್ಟದ ಶಿಕ್ಷಣ ಹಾಗೂ ನರ್ಸಿಂಗ್ ಮತ್ತು ಪ್ರಸೂತಿಶಾಸ್ತ್ರ ಕಲಿತ ವೃತ್ತಿಪರರ ಸೇವೆಗಳು, ಸಂಸ್ಥೆಗಳ ಮೌಲ್ಯಮಾಪನ, ರಾಷ್ಟ್ರೀಯ ಮತ್ತು ರಾಜ್ಯ ರಿಜಿಸ್ಟರ್‌ಗಳ ನಿಯಂತ್ರಣ ಮತ್ತು ನಿರ್ವಹಣೆ ಗುರಿ ಹೊಂದಿದೆ.



ಮೈಸೂರು ತಾಲೂಕು ಜಯಪುರ ಹೋಬಳಿ ದೂರ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ದೂರ ಗ್ರಾಮದ ಎಂ.ನಾಗರಾಜು, ಉಪಾಧ್ಯಕ್ಷರಾಗಿ ದೊಡ್ಡಕಾಟೂರಿನ ಪುಟ್ಟಮಾದಮ್ಮ ತಲಾ 13 ಮತಗಳನ್ನು ಪಡೆದು ಆಯ್ಕೆಯಾದರು. ಗ್ರಾಪಂ ಸದಸ್ಯರಾದ ಡಿ.ಮಹದೇವಸ್ವಾಮಿ, ಶಿವಮಲ್ಲಪ್ಪ, ಡಿ.ಎ.ಮಹದೇವಸ್ವಾಮಿ ದೂರ, ರಾಜಮ್ಮ, ಸವಿತ, ಸೌಮ್ಯ, ತಳೂರು ಮಹೇಶ್, ಮಹದೇವಮ್ಮ, ಪುಟ್ಟದೇವಮ್ಮ, ವಿಜಯ ಕಾಳಸ್ವಾಮಿ ಅವರನ್ನು ಜಯಪುರ ಹೋಬಳಿ ವಿಕಾಸ ವೇದಿಕೆ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ತಳೂರು ಲಿಂಗರಾಜು, ಗೆಜ್ಜಗಳ್ಳಿ ಮಹೇಶ್ ಇನ್ನಿತರರು ಹಾಜರಿದ್ದರು.

ಮಣಿಪುರ ಹಿಂಸಾಚಾರ: ಇಂದು ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಎಎಪಿ ಕರೆ

ನವದೆಹಲಿ: ಮಣಿಪುರ ಹಿಂಸಾಚಾರ ಮತ್ತು ಅನಿಶ್ಚಿತ ಪರಿಸ್ಥಿತಿಯನ್ನು ಖಂಡಿಸಿ ಆಮ್ ಆದ್ಮಿ ಪಕ್ಷ ಮಂಗಳವಾರ ದೇಶಾದ್ಯಂತ ಪ್ರತಿಭಟನೆ ನಡೆಸಲಿದೆ ಎಂದು ಪಕ್ಷದ ಮುಖಂಡರು ಸೋಮವಾರ ತಿಳಿಸಿದ್ದಾರೆ.

ಮಣಿಪುರ ಹಿಂಸಾಚಾರ ಖಂಡಿಸಿ ದೆಹಲಿಯಲ್ಲಿ, ಜಂತರ್ ಮಂತರ್‌ನಲ್ಲಿ ನಡೆಯುವ ಪ್ರತಿಭಟನೆಯಲ್ಲಿ ಪಕ್ಷದ ಉನ್ನತ ನಾಯಕರು ಭಾಗವಹಿಸಲಿದ್ದಾರೆ ಎಂದು ಹೇಳಿದ್ದಾರೆ. ಮಣಿಪುರ ವಿಷಯದ ಕುರಿತು ಪ್ರಧಾನಿ ಮೋದಿ ಸದನದಲ್ಲಿ ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿ ಹಲವು ವಿರೋಧ ಪಕ್ಷಗಳ ನಾಯಕರು ಸೋಮವಾರ ಸಂಸತ್ತಿನ ಒಳಗೆ ಮತ್ತು ಹೊರಗೆ ಪ್ರತಿಭಟನೆ ನಡೆಸಿದರು. ಮೇ 3ರಂದು ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ಭುಗಿಲೆದ್ದ ನಂತರ 160ಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ. ಮೇ 4ರಂದು ಚಿತ್ರೀಕರಿಸಲಾಗಿದೆ ಎಂದು ಹೇಳಲಾದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ವಿಡಿಯೋವೊಂದು ಕಳೆದ ವಾರ ಆನ್‌ಲೈನ್‌ನಲ್ಲಿ ಕಾಣಿಸಿಕೊಂಡ ನಂತರ ಮಣಿಪುರದಲ್ಲಿ ಉದ್ವಿಗ್ನತೆ ಹೆಚ್ಚಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆ ಏರಿಕೆ ರಾಜ್ಯ ಸರ್ಕಾರಕ್ಕೆ ಹೊಸ ಆತಂಕ

ಬೆಂಗಳೂರು: ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಮತ್ತು ಎಪಿಎಲ್ ಕಾರ್ಡುದಾರರಿಗೆ ಅಕ್ಕಿ ಸಿಗದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪ್ರತಿ ಫಲಾನುಭವಿಗೆ 5 ಕೆಜಿ ಅಕ್ಕಿ ಬದಲಿಗೆ ನಗದು ನೀಡುತ್ತಿದೆ. ತಲಾ 10 ಕೆಜಿ ಅಕ್ಕಿ ಒದಗಿಸಲು ಸರ್ಕಾರವು ವಿಭಿನ್ನ ಮೂಲಗಳನ್ನು ಹುಡುಕುತ್ತಿದೆ. ಈ ನಡುವೆ ಅಕ್ಕಿಯ ಜಾಗತಿಕ ಬೆಲೆ ಏರಿಕೆಯ ಹೊಸ ಸಮಸ್ಯೆಯನ್ನು ತರುತ್ತಿದೆ. ಭಾರತದ ರಫ್ತು ನೀತಿಯಲ್ಲಿ ಬದಲಾವಣೆ ಮಾಡಿದ್ದು ಬಾಸ್ಮತಿಯೇತರ ಬಿಳಿ ಅಕ್ಕಿಯ ರಫ್ತಿನ ಮೇಲೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ. ಭಾರತೀಯ ಮಾರುಕಟ್ಟೆಗಳಲ್ಲಿ ಸಾಕಷ್ಟು ಅಕ್ಕಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ದೇಶದಲ್ಲಿ ಹೆಚ್ಚುತ್ತಿರುವ ಬೆಲೆಗೆ ಕಡಿವಾಣ ಹಾಕಲು ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯವು ಬಾಸ್ಮತಿಯೇತರ ಬಿಳಿ ಅಕ್ಕಿಯ ರಫ್ತನ್ನು ನಿಷೇಧಿಸಿ ಗುರುವಾರ ಆದೇಶವನ್ನು ಹೊರಡಿಸಿದೆ.



ಸದ್ಯದ ಪರಿಸ್ಥಿತಿಯಿಂದಾಗಿ ಹೆಚ್ಚುವರಿ 5 ಕೆಜಿ ಉಚಿತ ಅಕ್ಕಿಗೆ ನಗದು ವರ್ಗಾವಣೆಗೆ ಕರ್ನಾಟಕದ ನಿರ್ಧಾರ ಸೂಕ್ತವಾಗಿದೆ. ಫಲಾನುಭವಿಗಳು ಈಗಾಗಲೇ ಕೇಂದ್ರ ಸರ್ಕಾರದ ಕಾರ್ಯಕ್ರಮದ ಮೂಲಕ 5 ಕೆಜಿ ಪಡೆಯುವುದರಿಂದ, ಫಲಾನುಭವಿಗಳಿಗೆ ಇತರ ಅಗತ್ಯ ವಸ್ತುಗಳನ್ನು ಖರೀದಿಸಲು ಸ್ವಾತಂತ್ರ್ಯ ನೀಡುವುದರಿಂದ ನಗದು ವರ್ಗಾವಣೆ ಮುಂದುವರಿಸುವುದು ಸೂಕ್ತ ಎಂದು ಭಾರತೀಯ ಆಹಾರ ನಿಗಮದ ಮಾಜಿ ಅಧ್ಯಕ್ಷ ಡಿ.ವಿ.ಪ್ರಸಾದ್ ತಿಳಿಸಿದ್ದಾರೆ.

ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಮಾತನಾಡಿ, ಅಂತಾರಾಷ್ಟ್ರೀಯ ಬೆಳವಣಿಗೆಗಳಿಂದ ನಾವು ವಿಚಲಿತರಾಗಿಲ್ಲ. ಒಂದು ತಿಂಗಳಲ್ಲಿ ಸಮಸ್ಯೆ ಬಗೆಹರಿಸಲಾಗುತ್ತದೆ. ನಾನು ಎಲ್ಲ ಪಾಲುದಾರರೊಂದಿಗೆ ಮೂರು ಸಭೆಗಳನ್ನು ನಡೆಸಿದ್ದೇನೆ. ಸೆಪ್ಟೆಂಬರ್ ವೇಳೆಗೆ, ನಾವು ನಗದು ವಿತರಣೆ ನಿಲ್ಲಿಸಿ, ಮೂಲತಃ ಯೋಜಿಸಿದಂತೆ ಅಕ್ಕಿ ವಿತರಿಸಲು ಸಾಧ್ಯವಾಗುತ್ತದೆ. ಅಕ್ಕಿ ಬದಲಿಗೆ, ನಾವು ರಾಜ್ಯದ ದಕ್ಷಿಣ ಭಾಗಗಳಲ್ಲಿ ರಾಗಿ ಮತ್ತು ಉತ್ತರ ಭಾಗದಲ್ಲಿ ಜೋಳ ನೀಡಲು ಪ್ರಯತ್ನಿಸುತ್ತಿದ್ದೇವೆ ಎಂದು ಮುನಿಯಪ್ಪ ಹೇಳಿದರು.

ಅಕ್ಟೋಬರ್–ನವೆಂಬರ್ ವೇಳೆಗೆ ತಾಜಾ ಖಾರಿಫ್ ಅಕ್ಕಿ ಬೆಳೆ ಬರಲಿದ್ದು, ಆಗ ಮಾತ್ರ ರಾಜ್ಯ ಸರ್ಕಾರ ಸರಬರಾಜನ್ನು ಪೂರೈಸಬಹುದು. ಉಚಿತ ಅಕ್ಕಿ ಬೆಲೆ ಇನ್ನು ಮುಂದೆ 34 ರೂ. ಇರುವುದಿಲ್ಲ, ಮುಂದಿನ ಕೆಲವು ತಿಂಗಳುಗಳಲ್ಲಿ ಈ ಅಕ್ಕಿಯ ಬೆಲೆ 42–44 ರೂ.ಗೆ ಏರಬಹುದು ಎಂದು ಡಿ.ವಿ. ಪ್ರಸಾದ್ ಹೇಳಿದ್ದಾರೆ. ಇದು ರಾಜ್ಯದ ಬೊಕ್ಕಸಕ್ಕೆ ಹೊರೆ ಹೆಚ್ಚಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಪಕ್ಕದ ಮನೆಯಲ್ಲಿ ಬೆಳಗ್ಗೆಯಿಂದ ಗಂಡ-ಹೆಂಡತಿ ಜಗಳ ಆಡ್ತಾ ಇದ್ದಾರೆ. ನೀವು ಒಮ್ಮೆ ಹೋಗಿ ನೋಡಬಾರದ?

ಗಂಡ : ಒಮ್ಮೆ ನಾನು ಹೋಗಿದ್ದಕ್ಕೆ ಈ ಜಗಳ...!

ಮೈಸೂರು ಮಿತ್ರ

ಮಂಗಳವಾರ, 25 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸ್ವಯಂ ಶಿಸ್ತು ಎಂದರೆ ನ್ಯಾಯಗಳಿದ್ದಂತೆ, ಹೆಚ್ಚು ಅಭ್ಯಾಸ ಮಾಡಿದಷ್ಟು ಹೆಚ್ಚು ದೃಢವಾಗುತ್ತವೆ. –ಡೇನಿಯಲ್ ಗೋಲ್ಡ್‌ಸ್ಮಿತ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆರಂಭದ ಬುಡ ಕಷ್ಟ, ಅಧಿಕಾರದ ತುದಿ ಕಷ್ಟ

ನಿಮ್ಮ ಪತ್ರಗಳು

ಉಚಿತವಂತೂ ಬೇಡಪ್ಪಾ ಬೇಡ; ಖಚಿತವಾದ ಯೋಜನೆಯೊಂದು ಬೇಕಿದೆ ಅನ್ನಬ್ರಹ್ಮನಿಗೆ



ಮಾನ್ಯರೆ,

ಪ್ರಕೃತಿಯ ಚೆಲ್ಲಾಟ ಅನ್ನದಾತನೊಂದಿಗೆ ನಿರುತ್ತು ತಾನು ಹಸಿದು ವಿಶ್ವಕ್ಕೆ ಅನ್ನ ನೀಡುವ ಅವನ ಬದುಕು ಅರೆಬರೆಯಾಗಿದೆ. ಕೈಕೊಟ್ಟ ಮಳೆಯಿಂದಾಗಿ ಎರಡು ಬಾರಿ ಚೆಲ್ಲಿದ ಕಾಳುಗಳು ಮಣ್ಣಿನಿಂದ ಹೊರಕ್ಕೆ ಬಾರಲೇ ಇಲ್ಲ. ಅತಿವೃಷ್ಟಿ ಹಾಗೂ ಅನಾವೃಷ್ಟಿಗಳು ಅನ್ನದಾತನನ್ನು ಸದಾ ಕಾಡುವ ರಕ್ಕಸರು. ಜೀವನಪೂರ ಮಣ್ಣಿನೊಂದಿಗೆ ಸೆಣಸಾಡುವ ಪೈಲ್ವಾನ್. ವ್ಯವಸ್ಥೆಯ ಹಿಡಿತದಲ್ಲಿ ಸಿಲುಕಿ ಸಮೃದ್ಧಿಯಾಗಿ ಬೆಳೆ ಬಂದಾಗಲೂ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲ!. ರೈತರು ಹಾಗೂ ಜಾತಿ-ಧರ್ಮಗಳ ಹೆಸರಿನಲ್ಲಿ ಪ್ರಜಾಪ್ರಭುತ್ವ ಎಲ್ಲಿಯವರೆಗೆ ನಿಂತಿ ರುತ್ತದೆ ಬಹುಶಃ ಅಲ್ಲಿಯವರೆಗೂ ಅನ್ನಬ್ರಹ್ಮನ ಮುಖದಲ್ಲಿ ನಗು ಕಾಣದೇನೋ!?.

ರೈತ ತನ್ನ ಬದುಕು, ದೇಹ ಹಾಗೂ ಹೃದಯಗಳನ್ನು ಭೂಮಿಗೆ ಅಡವಿಟ್ಟವನು, ಅವನು ಹಲವಾರು ಬೆಳೆಗಳನ್ನು ಬೆಳೆಯುತ್ತಾನೆ, ಆದರೆ ಅವನು ಮಾತ್ರ ಬೆಳೆಯುವುದೇ ಇಲ್ಲ!. ಗಾದೆ ಮಾತೊಂದಿದೆ "ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು". ಜಗವನ್ನು ಬಿಕ್ಕುವುದಕ್ಕೆ ಬಿಡದೆ ತಾನೇ ಬಿಕ್ಕುತ್ತಿದ್ದಾನೆ.

ಈಗ ವರುಣ ಸಂತುಷ್ಟಿಯಾಗಿ ಮಳೆ ಸುರಿಸುತ್ತಿದ್ದಾನೆ, ವಿಳಂಬವಾದರೂ ಕೆಲವು ದಿನಗಳಿಂದ ವಾಡಿಕೆಗಿಂತ ಹೆಚ್ಚು ಮಳೆಯಾಗಿ ನದಿ-ತೊರೆಗಳು ಮೈದುಂಬಿ ರಾಜ್ಯದ ಅಣೆಕಟ್ಟೆಗಳು ತುಂಬುತ್ತಿವೆ. ರೈತರೊಂದಿಗೆ ತ್ವರಿತವಾಗಿ ಸಮಾಲೋಚಿಸಿ ನಿರ್ಣಯ ಕೈಗೊಂಡು ನಾಲೆಗಳಿಗೆ ನೀರು ಬಿಡುವುದು ಸೂಕ್ತ. ಹಾಗೆಯೇ ಉಚಿತ ವಾಗಿ ಕೊಡುತ್ತಿರುವ ಐದು ಗ್ಯಾರಂಟಿಗಳ ಜೊತೆಗೆ ವಿಶೇಷವಾಗಿ ನಮ್ಮ ರೈತರಿಗೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುವಂತೆ ಖಚಿತವಾಗಿ(ಉಚಿತವಾಗಿ ಏನೂ ಬೇಡುವುದಿಲ್ಲ ಶ್ರಮಜೀವಿ) ಲಾಭ ಸಿಗುವ ಯೋಜನೆಯನ್ನು ಅನುಷ್ಠಾನಕ್ಕೆ ತರಬಾರದೇಕೆ?

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಮ್ಯಾನ್‌ಹೋಲ್ ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರು ನಗರದ ಹೃದಯ ಭಾಗದ ದೇವರಾಜ ಮೊಹಲ್ಲಾದ ಡೋಲ್ವೇನ್ ಕಾಂಪ್ಲೆಕ್ಸ್ ಹತ್ತಿರ, ಹಳೇ ಸಂತೇಪೇಟೆ ಒಂದನೇ ಕ್ರಾಸ್ ಗಲ್ಲಿಯಲ್ಲಿ ಯುಜಿಡಿ ಮ್ಯಾನ್‌ಹೋಲ್ ಕುಸಿದು ಹಲವು ತಿಂಗಳುಗಳಾಗಿವೆ. ಈ ಗಲ್ಲಿಯ ರಸ್ತೆ ಕಿರಿದಾಗಿದೆ. ಹೇಳಿ ಕೇಳಿ ಇದು ವಾಣಿಜ್ಯ ಪ್ರದೇಶವಾಗಿದೆ. ಈ ಗಲ್ಲಿಯಲ್ಲಿ ಸದಾ ದ್ವಿಚಕ್ರ ವಾಹನ ಸವಾರರು ಹಾಗೂ ಸಾರ್ವಜನಿಕರು ಓಡಾಡುತ್ತಾರೆ. ದ್ವಿಚಕ್ರ ವಾಹನ ಸವಾರರು ಚಾಲನೆ ಮಾಡುವಾಗ ಆಯತಪ್ಪಿ ಬಿದ್ದಿರುವ ನಿದರ್ಶನಗಳು ಬೇಕಾದಷ್ಟಿವೆ. ಸಾರ್ವಜನಿಕರು ಎಡವಿ ಬಿದ್ದಿರುವುದುಂಟು. ಕೂಡಲೇ ನಗರಪಾಲಿಕೆ ಆಯುಕ್ತರು ಹಾಗೂ ಸ್ಥಳೀಯ ಪಾಲಿಕೆ ಸದಸ್ಯರು ಸೂಕ್ತ ಕ್ರಮ ವಹಿಸಿ ಕುಸಿದು ಬಿದ್ದಿರುವ ಯುಜಿಡಿ ಮ್ಯಾನ್‌ಹೋಲ್ ದುರಸ್ತಿಗೊಳಿಸಿ ಮುಂದಾಗುವ ಅಪಾಯವನ್ನು ತಪ್ಪಿಸಬೇಕಾಗಿ ಮನವಿ.

–ಡಿ. ರಘು, ಡಿ. ದೇವರಾಜ ಅರಸು ರಸ್ತೆ, ಮೈಸೂರು.

ರೈಲ್ವೆ ನಿಲ್ದಾಣದ ಹಿಂಬದಿ ದ್ವಾರದಲ್ಲಿ ಆಟೋ ಗೋಜಲು

ಮಾನ್ಯರೇ,

ರೈಲ್ವೆ ನಿಲ್ದಾಣದ ಹಿಂಬದಿಯ ದ್ವಾರದಲ್ಲಿ ರೈಲು ಬಂದಾಗ ಕೆಲಕಾಲ ಗೊಂದಲದ ಗೂಡಾಗುತ್ತದೆ. ತಮ್ಮವರನ್ನು ಕರೆತರಲು ಬಂದ ವಾಹನ ಚಾಲಕರು ತಾತ್ಕಾಲಿಕ ನಿಲುಗಡೆ ಹಾಗೂ ಚಲಿಸಲು ಸಾಹಸ ಪಡುತ್ತಾರೆ. ಇದಕ್ಕೆ ದ್ವಾರದಲ್ಲೇ ಅಲ್ಲಲ್ಲಿ ಬೇಕಾಬಿಟ್ಟಿ ನಿಲ್ಲಿಸುವ ಆಟೋಗಳು ಕಾರಣವಾಗಿವೆ. ಇವರು ತಮಗೆ ಬೇಕಾದ ಸ್ಥಳ ಹಾಗೂ ದರ ಕೊಡುವ ಗ್ರಾಹಕರಿಗಾಗಿ ಪೈಪೋಟಿಯಲ್ಲಿರುತ್ತಾರೆ.

ಇಲ್ಲಿ ಪ್ರೀ ಪೇಯ್ಡ್ ಆಟೋ ಸೇವೆಯನ್ನು ನಿಲ್ಲಿಸಿ ವರ್ಷಗಳೇ ಆಗಿದೆ. ಆದರೂ ಒಂದಿಷ್ಟು ಜವಾಬ್ದಾರಿಯುತ ಆಟೋ ಚಾಲಕರು ನಿಗದಿತ ಸ್ಥಳದಲ್ಲಿ, ಸರದಿ ಸಾಲಿನಲ್ಲಿ ಆಟೋ ನಿಲ್ಲಿಸಿಕೊಂಡು ಅತೀ ಹೆಚ್ಚು ದರ ಕೇಳದೆ ಸೇವೆ ನೀಡುತ್ತಿದ್ದಾರೆ. ಅನೇಕ ಹಿರಿಯ ಪ್ರಯಾಣಿಕರಿಗೆ ಪ್ರೀ ಪೇಯ್ಡ್ ಆಟೋ ವ್ಯವಸ್ಥೆ ಸರಳ ಹಾಗೂ ಸುರಕ್ಷಿತ. ಸಂಚಾರಿ ಪೊಲೀಸರು ಈ ಬಗ್ಗೆ ಗಮನಹರಿಸಿ ಪರಿಹಾರ ನೀಡಲು ಮನವಿ.

–ಅನಿಲ್‌ಕುಮಾರ್ ನಾಡಿಗೇರ್, ಮೈಸೂರು.

ಭಾಗ್ಯ ವಿಶೇಷ!

ಮಾನ್ಯರೆ,

ಕುವೆಂಪು ತಮ್ಮ 'ಅಖಂಡ ಕರ್ಣಾಟಕ' ಕವನದಲ್ಲಿ ಹೇಳುತ್ತಾರೆ: "ನೃಪತುಂಗನೆ ಚಕ್ರವರ್ತಿ, ಪಂಪನಲ್ಲಿ ಮುಖ್ಯಮಂತ್ರಿ".

ಸ್ವಾರಸ್ಯವೆಂದರೆ, ನನಗೆ ನೃಪತುಂಗ ಸಾಹಿತ್ಯ ಪ್ರಶಸ್ತಿ, (ಇದೀಗ) ಪಂಪ ಪ್ರಶಸ್ತಿ ಎರಡೂ ಪ್ರಾಪ್ತವಾಗಿವೆ; ಎಂದರೆ, ಚಕ್ರವರ್ತಿ, ಮುಖ್ಯಮಂತ್ರಿ ಇಬ್ಬರ ಹೆಸರಿನ ಪ್ರಶಸ್ತಿಗಳೂ! ಸದ್ಯಕ್ಕೆ ಈ ಭಾಗ್ಯ ವಿಶೇಷ ಕನ್ನಡದಲ್ಲಿ ಮತ್ತಾರಿಗೂ ಇಲ್ಲ! (ಇದು ವಿನಯೋಕ್ತಿ).

ತಾಯಿ ಸರಸ್ವತಿಗೆ ನಮಸ್ಕಾರ. (ಆದರೆ "ಸರಸ್ವತಿ ಸಮ್ಮಾನ್" ಬಹುಶಃ ಬರಲಿಕ್ಕಿಲ್ಲ!)

ಸೀಮಿತ : ಶ್ರೇಷ್ಠ, ವಸ್ತುನಿಷ್ಠ-ಕೆಲವೊಮ್ಮೆ ನಿಷ್ಠುರ 'ವಿಮರ್ಶಕ ನಾಯಕ'ರು (ಜಿಎಚ್) ನಿಧನರಾದುದು ಖೇದಕರ. ಅವರಂತೆ ಏಕೈಕ ಸಾಹಿತ್ಯ ಪ್ರಕಾರಕ್ಕೆ ತಮ್ಮನ್ನು ಸೀಮಿತ ಮಾಡಿಕೊಂಡವರು ವಿರಳ. ಅವರೊಡನೆ ಪ್ರೊ. ಎಚ್.ಎಂ. ಚನ್ನಯ್ಯನವರನ್ನು ಯಾರೂ ಸ್ಮರಿಸದಿದ್ದುದು ಆಶ್ಚರ್ಯ. ಇಬ್ಬರೂ- ಅದರಲ್ಲೂ ನಾಯಕರು-ಅಡಿಗರ ಕಟ್ಟಾ ಅಭಿಮಾನಿಗಳಾಗಿದ್ದರು. (ಅಂದ ಹಾಗೆ, ನಾನೂ ಜಿ.ಹೆಚ್. ನಾಯಕರೂ 2014ರಲ್ಲಿ ಒಟ್ಟಿಗೇ ಮುಕ್ತ ವಿ.ವಿ.ನಿಲಯದ ಗೌರವ ಡಾಕ್ಟರೇಟ್ ಪಡೆದೆವು).

'ಚಿಂತನ ಚಿಂತಾಮಣಿ': "ಪುಸ್ತಕಗಳು... ಕೈ ದೀವಿಗೆಗಳು..." ಎಂಬ ಸಿ.ಎಸ್. ರಾಘವೇಂದ್ರ ಅವರ ಲೇಖನ (ಮೇ 30) ಮನನೀಯವಾಗಿತ್ತು. ಆದರೆ ಅವರು ನನ್ನ ಸಾವಿರ ಪುಟಗಳ 'ಚಿಂತನ ಚಿಂತಾಮಣಿ' ಎಂಬ ಹೆಬ್ಬೊತ್ತಗೆಯನ್ನು (ಪ್ರಕಾಶನ : ಚೇತನ ಬುಕ್ ಹೌಸ್, ಮೈಸೂರು) ಗಮನಿಸಿದಂತಿಲ್ಲ. ಅದರಲ್ಲಿ 800 ಚಿಂತನ ಬರಹಗಳಿವೆ.

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429-34512

ದೀಪ ಸಾಲು

ಅಂಗೈಯ್ಯಲ್ಲೇ ಅದೃಶ್ಯ ಆಪ್ತನ ಅದ್ಭುತ ಚಮತ್ಕಾರ!

ನಾವೇ ಕಲಿತು ಬಲಿತು ದೊಡ್ಡವರಾದ ಮೇಲೆ ಮನುಷ್ಯನ ನವನಾಗರಿಕ ತಂತ್ರಾಗಮನದ ತಾಂತ್ರಿಕ ವಿಜ್ಞಾನ ರಾಕೆಟ್ ವೇಗದಲ್ಲಿ ಓಡಲು ಶುರು ಮಾಡಿತು. ಅದಕ್ಕೇ ಹೇಳಿದ್ದು ಇವತ್ತು ಕೈಯಲ್ಲಿ ಒಂದು ಮೊಬೈಲಿದ್ದು ಹತ್ತಾರು ಆ್ಯಪುಗಳಿದ್ದರೆ ಜೀವನ ಸಲೀಸು, ನಿಮಗೇನು ಬೇಕೋ ಕೇಳಿ, ನಿಮ್ಮ ಅಕೌಂಟಿನಲ್ಲಿ ದುಡ್ಡಿದ್ದು ಕೈಯಲ್ಲಿ ಮೊಬೈಲಿದ್ದು, ತಂತ್ರಾಂಶದ ಬಳಕೆ ಗೊತ್ತಿದ್ದರೆ, ಜಗತ್ತು ನಿಮ್ಮ ಅಂಗೈಯಲ್ಲಿ ಕಾನಿ ತಂದಾನ ಹಾಡುತ್ತದೆ.

ಮನುಷ್ಯನ ಆವಿಷ್ಕಾರಗಳು ಯಾವುದೂ ರಾತ್ರೋರಾತ್ರಿ ಉದ್ಭವವಾದವುಗಳಲ್ಲ; ಅವೆಲ್ಲಾ ನಮ್ಮ ನಮ್ಮ ಅವಶ್ಯಕತೆಗಳನ್ನು ಅವಲಂಬಿಸಿ ಕಾಲಾನು ಕಾಲದಲ್ಲಿ ನಮ್ಮ ಉಪಯೋಗಕ್ಕೆ ದಕ್ಕುವಂತಹವು. ಅಚ್ಚಿನ ಮಣೆಯಲ್ಲಿ ಮೊಳೆ ಜೋಡಿಸಿ ಪತ್ರಿಕೆ ಪ್ರಿಂಟ್ ಮಾಡಿ ಪ್ರಸಾರವಾಗುತ್ತಿದ್ದ ಕಾಲದಲ್ಲೂ ಪತ್ರಿಕೆ ಓದುತ್ತಿದ್ದ ಓದುಗರಿದ್ದರು. ಡಿ.ಟಿ.ಪಿ ಮೂಲಕ ಟೈಪ್ ಮಾಡಿ ಕಂಪ್ಯೂಟರ್‌ನಿಂದ ನೇರ ಪ್ರಿಂಟಿಂಗ್ ಟೆಕ್ನಾಲಜಿಯ ಕಾಲದಲ್ಲೂ ಪತ್ರಿಕೆ ಓದುವವರಿದ್ದಾರೆ. ಅಂದ ಮೇಲೆ ಟೆಕ್ನಾಲಜಿ ಬದಲಾದಂತೆ ಓದುಗರ ತಲೆಮಾರು ಕೂಡ ಬದಲಾಗುತ್ತಿರುತ್ತದೆ. ಬರೆಯುವವರೂ ಬದಲಾಗುತ್ತಿರುತ್ತಾರೆ. ಅಂದರೆ ಬದಲಾವಣೆ ಜಗದನಿಯಮ. ಆವಿಷ್ಕಾರ ಮತ್ತು ತಂತ್ರಜ್ಞಾನಗಳ ಏರುಗತಿಯ ಪ್ರಮಾಣದಲ್ಲಿ ನಾವಂದುಕೊಂಡಂತೆ ಈ ಟೆಕ್ನಾಲಜಿಯ ಪ್ರಯಾಣಕ್ಕೆ ನಿಲ್ದಾಣವೇ ಇಲ್ಲ ಎನ್ನಿಸುತ್ತದೆ. ನಾವೆಲ್ಲಾ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಬಾಹ್ಯಾಕಾಶದ ಗಗನನೌಕೆಯಲ್ಲಿ ಚಂದಿರನ ಬಳಿ ಹೋಗಿ ಚಂದಿರನ ಮೇಲೆ ನಿಂತ ಗಗನಯಾತ್ರಿಯ ಫೋಟೋ ತೋರಿಸಿ ಇವನೇ 'ಯಂತ್ರ ಮಾನವ' ಎಂದು ಹೇಳುತ್ತಿದ್ದರು. ನಾವೇ ಕಲಿತು ಬಲಿತು ದೊಡ್ಡವರಾದ ಮೇಲೆ ಮನುಷ್ಯನ ನವನಾಗರಿಕ ತಂತ್ರಾಗಮನದ ತಾಂತ್ರಿಕ ವಿಜ್ಞಾನ ರಾಕೆಟ್ ವೇಗದಲ್ಲಿ ಓಡಲು ಶುರು ಮಾಡಿತು. ಅದಕ್ಕೇ ಹೇಳಿದ್ದು ಇವತ್ತು ಕೈಯಲ್ಲಿ ಒಂದು ಮೊಬೈಲಿದ್ದು ಹತ್ತಾರು ಆ್ಯಪುಗಳಿದ್ದರೆ ಜೀವನ ಸಲೀಸು, ನಿಮಗೇನು ಬೇಕೋ ಕೇಳಿ, ನಿಮ್ಮ ಅಕೌಂಟಿನಲ್ಲಿ ದುಡ್ಡಿದ್ದು ಕೈಯಲ್ಲಿ ಮೊಬೈಲಿದ್ದು, ತಂತ್ರಾಂಶದ ಬಳಕೆ ಗೊತ್ತಿದ್ದರೆ, ಜಗತ್ತು ನಿಮ್ಮ ಅಂಗೈಯಲ್ಲಿ ಕಾನಿ ತಂದಾನ ಹಾಡುತ್ತದೆ. ಇದು ಅತಿಯಾದ ವಿಜ್ಞಾನದ ಬೆಳವಣಿಗೆ. ತಾಂತ್ರಿಕ ಶಕ್ತಿಯ ತಂತ್ರಜ್ಞಾನದ ಕೊಡುಗೆ! ಇಂಥ ತಂತ್ರಜ್ಞಾನದ ಆ್ಯಪ್‌ಗಳು ಅಸಂಖ್ಯಾತ, ಬೇಕಾದಷ್ಟಿವೆ. ನಾನಿವತ್ತು ಹೇಳ ಹೊರಟಿದ್ದು ಅಂತಹದೊಂದು ಆ್ಯಪ್ ಬಗ್ಗೆ, ಅದರ ಹೆಸರು ಚಾಟ್ ಜಿ.ಪಿ.ಟಿ ಅಂತ ಅದನ್ನು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಥವಾ ಎ.ಐ.(A.I) ಎಂದು ಕರೆಯಲಾಗುತ್ತಿದೆ ಅದೊಂದು ಪ್ರಾಡಕ್ಟ್ ಅಲ್ಲ ಅದೊಂದು ಕಾನ್ಸೆಪ್ಟ್! ಮನುಷ್ಯ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕಂಡುಕೊಂಡ ತಾಂತ್ರಿಕ ಚಮತ್ಕಾರದ ಹೊಸ ಸಾಧ್ಯತೆ. ಅಂದರೆ ನಿಮ್ಮ ಮೊಬೈಲ್‌ಗಳಲ್ಲಿ A.I ಸೃಷ್ಟಿಸಿದ ಚಾಟ್ ಜಿ.ಪಿ.ಟಿ.ಯನ್ನು ನೀವು ಆಪರೇಟ್ ಮಾಡುತ್ತಾ ಹೋದಂತೆ ಅದು ನಿಮ್ಮ ವಾಯ್ಸ್ ಮೆಸೇಜಿಗೆ ಥೇಟ್ ನಿಮ್ಮ ಸಹಾಯಕನ ರೀತಿ ವರ್ತಿಸುತ್ತದೆ. ನಿಮಗೆ ಬೇಕಾದ, ನೀವು ಕೇಳಿದ ವಿಷಯ ಜ್ಞಾನವನ್ನು, ಮಾಹಿತಿಯನ್ನು ಕ್ಷಣ ಮಾತ್ರದಲ್ಲಿ ನಿಮ್ಮ ಅಂಗೈಯ್ಯ ಮೇಲೆ ಒಬ್ಬ ಗೆಳೆಯನ ಹಾಗೆ ಮುಂಗೈಯನ್ನಿರಿಸಿ ಪ್ರಸ್ತುತಪಡಿಸುತ್ತದೆ.

ಇದು A.I ನ ಚಮತ್ಕಾರ. ಈಗೇನು ಆಟೋ ಮೊಬೈಲ್ ತಂತ್ರಜ್ಞಾನವೇ ಈ ವಾಯ್ಸ್ ಮೆಸೇಜುಗಳಿಗೆ ತಕ್ಕಂತೆ ಕುಣಿಯುತ್ತವೆ. ಕಾರು ಜೀಪುಗಳೆಲ್ಲಾ ಸ್ಕ್ರೀನ್‌ಟಚ್ ಟೆಕ್ನಾಲಜಿ ವಾಯ್ಸ್ ಮೆಸೇಜುಗಳಿಗೇ ಪ್ರತಿಬಿಂಬಿಸುತ್ತವೆ. ಅಂಥದ್ದರಲ್ಲಿ A.I ತಂತ್ರಜ್ಞಾನಕ್ಕೆ ಹುಬ್ಬೇರಿಸುವಂಥದ್ದೇನಿದೆ? ಎಂದು ಕೊಳ್ಳಬಹುದು. ಈಗಾಗಲೇ ನಮ್ಮ ಕೈಯ್ಯಲ್ಲಿ ಕೆಲಸ ಮಾಡುತ್ತಿರುವ ತಂತ್ರಾಂಶಗಳ ತಾಂತ್ರಿಕ ನೈಪುಣ್ಯತೆಗಳೆಲ್ಲಾ ಗೂಗಲ್ ಸರ್ಚ್‌ನಲ್ಲಿ ಈಗಾಗಲೇ submit ಆಗಿರುವ stock roomನ ಮಾಹಿತಿಗಳನ್ನು ಪಿಕ್ ಮಾಡಿ ಯಥಾವತ್ತಾಗಿ ಕಣ್ಮುಂದೆ ರಾಚುತ್ತವೆ. ನಮಗೆ ಮಾಹಿತಿಗಳ ಹುಡುಕಾಟ ತಪ್ಪುತ್ತದೆ. ಆದರೆ ಮಾಡಬಹುದಾದ ಕ್ರಿಯಾತ್ಮಕ ಕೆಲಸಗಳನ್ನು ಅದು ತನ್ನ ನೈಪುಣ್ಯತೆ ಬಳಸಿ ಕಚ್ಚಾ ಸಾಮಗ್ರಿಯೊಂದನ್ನು ನಿಮಗೆ ಸಿದ್ಧ ಮಾಡಿಕೊಡುತ್ತದೆ. ಉದಾಹರಣೆಗೆ ನೀವಂದುಕೊಳ್ಳಬಹುದು. ಅಂಕಿಅಂಶಗಳು ತಾನೇ ಯಾವ ತಂತ್ರಜ್ಞಾನವಾದರೂ ಅದನ್ನು ತಂದು ಆ ವಿಷಯದ ಮೇಲೆ ಒಂದು ಪದ್ಯ ಬರೆದುಕೊಡು, ಒಂದು ಗದ್ಯ ಬರೆದುಕೊಡು, ಒಂದು ಚಿತ್ರ ಬರೆದುಕೊಡು ಎಂದು ಕೇಳಿದರೆ ಅದು ಬರೆದುಕೊಡುತ್ತದೆ. ಈ A.I ಟೆಕ್ನಾಲಜಿಯ ಅಂತರ್ಗತ ಅಸ್ತಿತ್ವದಿಂದಲೇ ಜಗತ್ತಿನಾದ್ಯಂತ ಇಂದು ರೋಬೋ ಟೆಕ್ನಾಲಜಿ ಕೆಲಸ ಮಾಡುತ್ತಿರುವುದು. ಈ ತಂತ್ರಜ್ಞಾನ ಹಾಲಿವುಡ್, ಬಾಲಿವುಡ್, ಟಾಲಿವುಡ್‌ಗಳಲ್ಲೆಲ್ಲಾ ಸಿನಿಮಾ ಪರದೆಯ ಮೇಲೆ ಹೀರೋ ಆಗಿ ರಾರಾಜಿಸಿಬಿಟ್ಟ ಸಂಗತಿಗಳನ್ನು ನಾವು ನೋಡಿದ್ದೇವೆ. ರಜನಿಕಾಂತ್ ನಟಿಸಿದ 'ಚಟ್ಟಿ ದಿ ರೋಬೋ' ಬೆಳ್ಳಿ ಪರದೆಯ ಮೇಲೆ ಬಂದಾಗ ನಾವೆಲ್ಲಾ ರೋಬೋಟಿಕ್ ಟೆಕ್ನಾಲಜಿಯನ್ನು ಫ್ಯಾಂಟಸಿ ಪ್ರಪಂಚದ ಫ್ಯಾಂಟಂ ಮತ್ತು ಸಂಗಡಿಗರ ಕತೆಯಂತೆ enjoy ಮಾಡಿದ್ದು ನಿಜ. ಅಂಗೈಯಲ್ಲಿರುವ ಮೊಬೈಲ್ ಆ್ಯಪುಗಳಲ್ಲಿ ತನ್ನ ಕೈಚಳಕ ತೋರಿಸುತ್ತಿದೆ. ವೈದ್ಯರು ರೋಬೋ ತಂತ್ರಜ್ಞಾನದಲ್ಲಿ ಮಂಡಿ ಚಿಪ್ಪು ಅಳವಡಿಸಿಕೊಡಲಾಗುವುದು



ಎಂದು ತಮ್ಮ ಅತ್ಯಾಧುನಿಕ ಶಸ್ತ್ರಚಿಕಿತ್ಸೆಗೆ ಹೊಸ ಸ್ಪೆಷಾಲಿಟಿ ಬೋರ್ಡು ತಗುಲಿಸಿಕೊಂಡು ಅಪ್‌ಡೇಟ್ ಮಾದರಿಯ ಶಸ್ತ್ರಚಿಕಿತ್ಸೆಗೆ ಈ ತಂತ್ರಜ್ಞಾನದ ಬಳಕೆದಾರರಾಗಿದ್ದಾರೆ. ಅಂದ ಮೇಲೆ ಸಾಮಾನ್ಯರ ಕೈಯ್ಯಲ್ಲಿನ ಮೊಬೈಲ್ ಆ್ಯಪ್‌ನಲ್ಲಿ A.I ಎಂಬ ಚಾಟ್ ಜಿ.ಪಿ.ಟಿ. ಏನೆಲ್ಲಾ ಚಮತ್ಕಾರ ಮಾಡುತ್ತದೆ ಎಂದರೆ ಆಶ್ಚರ್ಯಪಡಬೇಕೋ ಬೇಡವೋ? ನನಗಂತೂ ಆಶ್ಚರ್ಯವೇ? ಯುವ ಸಮುದಾಯ ತಮ್ಮ ಅವಶ್ಯಕತೆಗಳನ್ನು ಈ A.I ಎಂಬ ಕೃತಕಬುದ್ಧಿಮತ್ತೆಯ ಸಹಾಯದಿಂದ ಏನೆಲ್ಲಾ ಆಗಬೇಕೋ ಆ ಎಲ್ಲಾ ಕೆಲಸಗಳನ್ನು ಮಾಡಿಸುತ್ತಾರೆ. ಆದರೆ ಬಹಳ ದೊಡ್ಡ ಅಪಾಯವೇನೆಂದರೆ, 'ಕೃತಕ ಬುದ್ಧಿಮತ್ತೆ' ಎಂಬ ಈ A.I ಇಂದು ಎಲ್ಲಾ ಕ್ಷೇತ್ರಗಳಲ್ಲೂ ಮನುಷ್ಯನಿಗಿಂತಲೂ ವೇಗವಾಗಿ ಕೆಲಸ ಮಾಡಬಲ್ಲ ಸಾಮರ್ಥ್ಯ ತೋರಿಸುತ್ತದೆ. ಇದರ ಪರಿಣಾಮ ಜಗತ್ತಿನ ಬೇರೆ ಬೇರೆ ಕ್ಷೇತ್ರಗಳ ಸೇವೆ ಸೌಲಭ್ಯಗಳನ್ನು ಜನರೇಟ್ ಮಾಡುವ ಕಂಪನಿಗಳು ಇದರ ಉಪಯೋಗ ಪಡೆದುಕೊಳ್ಳಲು ನಿಂತರೆ, ಮನುಷ್ಯನ ಜಾಗದಲ್ಲಿ ಈ A.I ನಿಲ್ಲುತ್ತದೆ. ವಿಶಾಲ ಸಾಮರ್ಥ್ಯದ ಈ A.I ತನ್ನ ಎಲ್ಲೆ ಮೀರಿ ಮನುಷ್ಯ ಕೆಲಸ ಮಾಡುವ ಎಲ್ಲ ಕ್ಷೇತ್ರಗಳಿಗೂ ಲಗ್ಗೆಯಿಡುತ್ತಿರುವ ಲಕ್ಷಣಗಳನ್ನು ಗಮನಿಸಿದರೆ, ಮುಂದೊಂದು ದಿನ ಜಗತ್ತು ಎಲ್ಲಾ ಕೆಲಸಗಳಿಗೆ ಮನುಷ್ಯನ ಜಾಗದಲ್ಲಿ A.I ಯೇ ಸಾಕು ಎಂದು ತೀರ್ಮಾನಿಸಿದರೆ ಹೇಗೆ? ಆಗ ಅಪಾಯ ಕಟ್ಟಿಟ್ಟಬುತ್ತಿ. ಮೊನ್ನೆ ಮೊನ್ನೆ ತಾನೆ ಹಾಲಿವುಡ್‌ನ ಖ್ಯಾತನಟ ಟಾಮ್ ಹ್ಯಾಂಕ್ಸ್ 'ಆಡಂ ಬಕ್ಸ್‌ಟನ್ ಪಾಡ್ ಕಾಸ್ಟ್'ನಲ್ಲಿ ಈ A.I ಕುರಿತಂತೆ ಹೇಳಿದ ಮಾತೊಂದಿದೆ. ಅದೇನೆಂದರೆ ನಾನು ನಾಳೆ ಬಸ್ ಡಿಕ್ಕಿಯಾಗಿ ಸಾವಿಗೀಡಾದರೆ, ನನ್ನ ಸಾವು ನನ್ನ ಕಾರ್ಯಕ್ರಮಗಳಿಗೇನೂ ಬಾಧಿಸುವುದಿಲ್ಲ. ನಾನಿಲ್ಲದಿದ್ದರೂ ಅದು ನಿರಂತರವಾಗಿ ನಡೆಯುತ್ತಿರುತ್ತದೆ. ಅಂದರೆ ಈ ಮಾತು ಇದರ ಅವಲಂಬನೆಯನ್ನು ಎತ್ತಿ ತೋರಿಸುತ್ತಿದ್ದರೂ, ಆಳದಲ್ಲಿ ಮಾತ್ರ ಅಪಾಯದ ಗಂಟೆ ಬಾರಿಸುತ್ತಿದೆ. ತದ್ರೂಪು ತಂತ್ರಜ್ಞಾನ ಬಂದಾಗಲೂ ಸರೋಗಸಿ ಜಗತ್ತಿನಾದ್ಯಂತ ತಲೆ ಎತ್ತಿದಾಗಲೂ ಮನುಷ್ಯ ತಲೆ ಕೆಡಿಸಿಕೊಳ್ಳಲಿಲ್ಲ. Enjoy ಮಾಡಿದ. ಪ್ರಯೋಗ ಶಾಲೆಗಳು ಅಸ್ತಿತ್ವಕ್ಕೆ ಬಂದು ಬಿನ್ನಾಣಗಿತ್ತಿಯಂತೆ ಸಿಂಗಾರಗೊಂಡವು. ಹೊಸ ತಂತ್ರಜ್ಞಾನದ ಚಮತ್ಕಾರಗಳಿಗೆ ರೆಡ್‌ಕಾರ್ಪೆಟ್ ಹಾಕಿ ಸ್ವಾಗತಿಸಿದವು. ಆದರೆ ಮನುಷ್ಯ father's day, mother's dayಗಳ ಹಾಗೆ ಮಿದುಳಿಗೂ ಒಂದು ದಿನ ಮೀಸಲಿಟ್ಟು 'ವಿಶ್ವ ಮೆದುಳು ದಿನ' ಆಚರಿಸಿಕೊಳ್ಳುತ್ತಿರುವ ನಮ್ಮ ತಲೆಮಾರಿನ ಈ ಯುಗದಲ್ಲಿ A.I ಎಂಬ ಈ ಚಾಟ್ ಜಿ.ಪಿ.ಟಿ. ಮನುಷ್ಯನ ಮಿದುಳಿಗೇ ಸವಾಲೊಡ್ಡುವ ಸಾಮರ್ಥ್ಯ ತೋರಿಸುತ್ತದೆ. ಇದು ಒಳ್ಳೆಯ ಬೆಳವಣಿಗೆ ಅಥವಾ ಸಾಧಕ-ಬಾಧಕಗಳ ಬಗ್ಗೆ ಕಾಲವೇ ನಿರ್ಧರಿಸಬೇಕು. ಅಪಾಯದ ಮುನ್ಸೂಚನೆಯ ಹಾಗೆ ಕಾಲ ನಿರ್ಧರಿಸುವ ತನಕ ಕಾಯದೆ ಈ A.I.ನ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆ ನೇರವಾಗಿ hit ಮಾಡುತ್ತಿರುವ ಮನರಂಜನಾ ಕ್ಷೇತ್ರ ಈ ಹೊತ್ತಿಗಾಗಲೇ ಕಂಗಾಲಾಗಿ ಹೋಗಿದೆ. ಕಾರಣ ಇಷ್ಟೆ, ಮನರಂಜನೆಯೇ ಪ್ರಧಾನ ಆಶಯವಾಗಿರುವ ಬೆಳ್ಳಿತೆರೆ, ಈಗಾಗಲೇ ಹತ್ತಾರು ತಾಂತ್ರಿಕ ಕೌಶಲ್ಯಗಳನ್ನು ಅಳವಡಿಸಿಕೊಂಡು ಬೆಳ್ಳಿತೆರೆಯ ಮೇಲೆ ಬೆರಗು ಹುಟ್ಟಿಸಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿ ತಾರೆಯರು ತಾರಾಮೌಲ್ಯಗಿಟ್ಟಿಸಿ ಮಿಂಚುತ್ತಾರೆ. ಇಲ್ಲೆ ಬಂದಿರುವುದು ಕಷ್ಟ. ಸಿನಿಮಾ ಇಂಡಸ್ಟ್ರಿಗೆ ಒಂದು ಚಿತ್ರ ತಯಾರಿಸಲು ಕಥೆ-ಚಿತ್ರಕತೆ, ನಟ-ನಟಿಯರು ಬೇಕೇ ಬೇಕು. ಆದರೆ ಈ A.I ಮನಸ್ಸು ಮಾಡಿದರೆ ಒಬ್ಬ ನಟ ಅಥವಾ ನಟಿಯರ ಮುಖಭಾವಗಳನ್ನು ಅರ್ಧ ಗಂಟೆ ರೆಕಾರ್ಡ್ ಮಾಡಿಟ್ಟುಕೊಂಡರೆ ಸಾಕು ಅಥವಾ ಅವರ ಡಿಜಿಟಲ್ ಪ್ರತಿರೂಪ ಒಂದಿದ್ದರೆ ಸಾಕು, ಆ ನಟ-ನಟಿಯರು ಇಲ್ಲದೆಯೂ ಅವರ ಡಿಜಿಟಲ್ ಪ್ರತಿರೂಪ ಅಥವಾ ಈಗಾಗಲೇ ಮಾಡಿಟ್ಟುಕೊಂಡು ಅವರ ಮುಖಭಾವಗಳ ಪೂರ್ವಾಪರಗಳನ್ನು ಬಳಸಿಕೊಂಡು A.I ನಿಮಗೆ ನಿಮ್ಮದೇ ಕಥಾಹಂದರದ ಹೊಸ ಚಿತ್ರವೊಂದನ್ನು ಶೂಟ್ ಮಾಡಿಕೊಡುತ್ತದೆ. ಅಲ್ಲಿಗೆ ನಟ-ನಟಿಯರು ಮಾಡಬೇಕಾದ ಕೆಲಸವನ್ನು ಈ A.I ಮಾಡಿಕೊಡುತ್ತದೆ. ಅದರಲ್ಲೂ 80ರ ವಯಸ್ಸಿನವರನ್ನೂ 35ರ ಮಧ್ಯವಯಸ್ಕರನ್ನಾಗಿ ಬದಲಾಯಿಸಿ, ಅನುಮಾನ ಬಾರದಂತೆ ಚಿತ್ರಿಸಿಕೊಡುವ ಸಾಮರ್ಥ್ಯ ಈ A.I ಗೆ ಇದೆ. ಅಷ್ಟೇ ಅಲ್ಲ; ಡಬ್ಬಿಂಗ್‌ನಲ್ಲೂ ಇದು ಕೆಲಸ ಪೂರೈಸಿ ಯಶಸ್ವಿಯಾಗುತ್ತಿದೆ. ಎಲ್ಲಕ್ಕಿಂತ ಮಿಗಿಲಾಗಿ ಸ್ಕ್ರಿಪ್ಟ್‌ರೈಟರ್‌ಗಳು ಕಥೆಯ ಥ್ರೆಡ್‌ಗಳನ್ನು ಮುಂದುವರಿಸಲು ಆಲೋಚಿಸಲು ತೊಡಗುವಷ್ಟರಲ್ಲೇ ಅದನ್ನು ಕಥಾಹಂದರಕ್ಕೆ ತಂದು ನಿಲ್ಲಿಸಬಲ್ಲ ಸಾಮರ್ಥ್ಯ ಈ A.I ಗೆ ಇದೆ. ಬರವಣಿಗೆ ಕ್ಷೇತ್ರದಲ್ಲೇ ಇದು ತನ್ನ ಕೈಚಳಕ ತೋರಿಸುತ್ತಿದೆ ಎಂದರೆ ಇನ್ನು ಸಿನಿಮಾ ಕ್ಷೇತ್ರದ ವಿಡಿಯೋ ಎಡಿಟಿಂಗ್, ವಿಷುವಲ್ ಎಫೆಕ್ಟ್ ಮುಂತಾದ ತಾಂತ್ರಿಕ ಕ್ಷೇತ್ರಕ್ಕೆ ಇದು ಕಾಲಿಟ್ಟರೆ ಸಿನಿಮಾ ತಂತ್ರಜ್ಞರ ಉದ್ಯೋಗಕ್ಕೇ ಕತ್ತರಿ ಬೀಳುತ್ತದೆ. ನಟ-ನಟಿಯರು, ಬರಹಗಾರರು, ತಂತ್ರಜ್ಞರ ಕೆಲಸದ ಬಳಕೆಯನ್ನೇ ತಿರಸ್ಕರಿಸಿ ಒಂದು A.I ಅವರೆಲ್ಲರ ಜಾಗದಲ್ಲಿ ನಿಂತು ಕೆಲಸ ಮಾಡುತ್ತದೆ ಎಂದರೆ ಜಗತ್ತಿನ 'ಎಂಟರ್‌ಟೈನ್‌ಮೆಂಟ್ ಸೆಕ್ಷನ್' ಇನ್ನಾವ ಪರಿದಿಗಿಲು ಬಿದ್ದಿರಬೇಕು ಹೇಳಿ!

ನಿಮಗೆ ಗೊತ್ತಿರಲಿ ಈ A.I ನ ಕಾರಣದಿಂದ ಇಂದು ಹಾಲಿವುಡ್ ಸ್ತಬ್ಧಗೊಂಡಿದೆ. ಹಾಲಿವುಡ್‌ನ ತಾರೆಯರು ಮತ್ತು ಬರಹಗಾರರ ಯೂನಿಯನ್‌ಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ A.I ವಿರುದ್ಧ ಮುಷ್ಕರಕ್ಕೆ ಇಳಿದಿವೆ. ಹಾಲಿವುಡ್‌ನಲ್ಲಿ ಚಿತ್ರಗಳ ಶೂಟಿಂಗ್‌ಗಳು ಅರ್ಧಕ್ಕೆ ನಿಂತಿವೆ. ಟೆಲಿವಿಷನ್ ಶೋಗಳೂ ಚಿತ್ರೀಕರಣಗೊಳ್ಳುತ್ತಿಲ್ಲ. ಹೊಸ ಸೀರಿಯಲ್‌ಗಳು, ಸಿನಿಮಾಗಳ ನಿರ್ಮಾಣದಲ್ಲಿ A.I ನಿಷೇಧಿಸುವವರೆಗೆ ತಾವು ಚಿತ್ರೀಕರಣದಲ್ಲಿ ಭಾಗಿಯಾಗುವುದಿಲ್ಲವೆಂದು ಪ್ಲೇಕಾರ್ಡ್ ಹಿಡಿದು ಬೀದಿಗಿಳಿದಿದ್ದಾರೆ. ಕಳೆದ ಅರವತ್ತು ವರ್ಷಗಳಲ್ಲಿ ನಡೆದಿರದಂಥ ಅತ್ಯಂತ ದೊಡ್ಡ ಮುಷ್ಕರಕ್ಕೆ ಹಾಲಿವುಡ್‌ನಲ್ಲಿ ಕಲಾವಿದರು ವೇದಿಕೆ ನಿರ್ಮಿಸಿದ್ದಾರೆ. ಮನರಂಜನಾ ಕ್ಷೇತ್ರ ಅಕ್ಷರಶಃ ನಿಷ್ಕ್ರಿಯಗೊಂಡಿದೆ. ಹಾಲಿವುಡ್ ಇಂಡಸ್ಟ್ರಿಯಲ್ಲಿ ಕೋಟಿ ಕೋಟಿ ಡಾಲರ್ ನಷ್ಟದ ಲೆಕ್ಕದಲ್ಲಿದೆ. ಜುಲೈ 13ರ ಮಧ್ಯರಾತ್ರಿಯಿಂದಲೇ ಮುಷ್ಕರಕ್ಕಿಳಿದಿರುವ ಹಾಲಿವುಡ್‌ನ ತಾರೆಯರು ಮತ್ತು ಬರಹಗಾರರ ಒಕ್ಕೂಟ ಯಾವುದೋ ವ್ಯಕ್ತಿಯ ವಿರುದ್ಧ ಅಥವಾ ಸರ್ಕಾರದ ವಿರುದ್ಧ ಹೀಗೆ ಹೋರಾಟ ನಡೆಸುತ್ತಿಲ್ಲ. A.I ಎಂಬ ಒಂದು 'ತಾಂತ್ರಿಕ ಶಕ್ತಿ'ಯ ವಿರುದ್ಧ ತಮ್ಮ ಮುಷ್ಕರದ ಮುಖಮುದ್ರೆ ಒತ್ತಿ ತಮ್ಮ ಪ್ರತಿಭಟನೆಯನ್ನು ದಾಖಲಿಸುತ್ತಿದ್ದಾರೆ. ಅಲ್ಲಿನ ಕಲಾವಿದರ, ತಂತ್ರಜ್ಞರ, ಬರಹಗಾರರ ಬೇಡಿಕೆ ಇಷ್ಟೆ. ಸಿನಿಮಾ ನಿರ್ಮಾಣದಲ್ಲಿ A.I ಪಾತ್ರವನ್ನು ನಿರ್ಬಂಧಿಸಬೇಕು. ಕಲಾವಿದರ ಚಿತ್ರಗಳು ಮತ್ತು ಧ್ವನಿಯನ್ನು A.I ಮೂಲಕ ಬಳಸುವಾಗ ಕಲಾವಿದರ ಸಮ್ಮತಿ ಪಡೆಯಬೇಕು. ಒಂದು ವೇಳೆ ಬಳಸಿದಲ್ಲಿ ಅದಕ್ಕೆ ಸಂಭಾವನೆ ಕೊಡಬೇಕು. ಸಿನಿಮಾ ನಿರ್ಮಾಣ ಸಂಸ್ಥೆಗಳು ತಮ್ಮ ಆದಾಯದ ಸ್ವಲ್ಪ ಭಾಗವನ್ನು ಕಾರ್ಮಿಕರು, ಕಲಾವಿದರ ವಲಯಕ್ಕೂ ಸ್ವಲ್ಪ ಹಂಚಿಕೆ ಮಾಡಬೇಕು. ಇದಿಷ್ಟು ಅವರ ಬೇಡಿಕೆಗಳು. ಇದೇ ರೀತಿಯ ಸಮಾನವಾದ ಬೇಡಿಕೆಗಳನ್ನಿಟ್ಟುಕೊಂಡು ಅಮೆರಿಕಾದ ಸ್ಕ್ರಿಪ್ಟ್ ರೈಟರ್ಸ್ ಅಸೋಸಿಯೇಷನ್ ರೈಟರ್ಸ್ ಗಿಲ್ಡ್ ಆಫ್ ಅಮೆರಿಕಾ ಕೂಡ ತಮ್ಮ ಲೇಖನಿ ಕೆಳಗಿಟ್ಟು ಕಳೆದ ಮೇ 2ನೇ ತಾರೀಖಿನಿಂದ ಮುಷ್ಕರ ಆರಂಭಿಸಿದೆ. 1.6 ಲಕ್ಷದಷ್ಟು ನಟ-ನಟಿಯರು ನೋಂದಾಯಿತ ಸಂಸ್ಥೆಯಾದ ಅಮೆರಿಕಾದ ಸ್ಕ್ರೀನ್ ಆಕ್ಟರ್ಸ್ ಗಿಲ್ಡ್, ಕೂಡ ಮುಷ್ಕರದಲ್ಲಿ ಭಾಗಿಯಾಗಿದೆ. ಇದೂ ಸಾಲದೆಂಬಂತೆ ಅಮೆರಿಕನ್ ಫೆಡರೇಷನ್ ಆಫ್ ಟೆಲಿವಿಷನ್ ಅಂಡ್ ರೇಡಿಯೋ ಆರ್ಟಿಸ್ಟ್ ಸಂಘಟನೆಗಳೂ ಮುಷ್ಕರಕ್ಕೆ ಬೆಂಬಲ ಸೂಚಿಸಿವೆ. ಬರಹಗಾರರು, ತಂತ್ರಜ್ಞರು, ರೇಡಿಯೋ ಜಾಕಿಗಳು, ಟೆಲಿವಿಷನ್ ಆ್ಯಂಕರ್‌ಗಳು, ವಿಡಿಯೋ ಎಡಿಟರ್‌ಗಳು, ಸ್ಪೆಷಲ್ ಎಫೆಕ್ಟ್ ತಂತ್ರಜ್ಞರು – ಹೀಗೆ ಇಡೀ ಎಂಟರ್‌ಟೈನ್‌ಮೆಂಟ್ ಇಂಡಸ್ಟ್ರಿಯೇ A.I ವಿರುದ್ಧ ಮುಷ್ಕರಕ್ಕಿಳಿದಿದೆ. ಹಾಲಿವುಡ್ ಅಕ್ಷರಶಃ ನಿಷ್ಕ್ರಿಯಗೊಂಡಿದೆ.

ಹಾಲಿವುಡ್‌ನ ಪ್ರಮುಖ ನಿರ್ಮಾಣ ಸಂಸ್ಥೆಗಳಾದ ವಾಲ್ಟ್‌ಡಿಸ್ನಿ, ನೆಟ್‌ಫ್ಲಿಕ್ಸ್, ಪ್ಯಾರಾಮೌಂಟ್ ಮುಂತಾದವುಗಳನ್ನೊಳಗೊಂಡ ಅಲಯನ್ಸ್ ಆಫ್ ಮೋಷನ್ ಪಿಕ್ಚರ್ಸ್ ಮತ್ತು ಟೆಲಿವಿಷನ್ ಪ್ರೊಡ್ಯೂಸರ್ಸ್ (ಎ.ಎಂ.ಪಿ.ಟಿ.ಪಿ) ಸಂಘಟನೆಗಳ ಜೊತೆಗೆ ಕಲಾವಿದರ ಒಕ್ಕೂಟ ಮಾತುಕತೆ ನಡೆಸಿಯಾಗಿದೆ. ಆದರೂ ಬಿಕ್ಕಟ್ಟು ಬಗೆಹರಿದಿಲ್ಲ. ಜಗತ್ತಿನ ಸಿನಿಮಾ ಪ್ರೇಮಿಗಳ ಕಣ್ಣುಗಳೆಲ್ಲಾ ಮುಂದೇನಾಗಬಹುದೆಂಬ ಕುತೂಹಲದೊಂದಿಗೆ ಜುಲೈ 13 ರಿಂದ ಆರಂಭಗೊಂಡಿರುವ ಹಾಲಿವುಡ್‌ನ ಈ ರೋಚಕ ಟ್ವಿಸ್ಟ್‌ನ ಕಡೆ ದೃಷ್ಟಿ ಹರಿಸಿವೆ. ವಿಶೇಷವೆಂದರೆ ಬರಹಗಾರರು ಹೋರಾಟಕ್ಕಿಳಿದಾಗ ಕಲಾವಿದರು ಸುಮ್ಮನಿರುತ್ತಿದ್ದರು. ಕೆಲವೊಮ್ಮೆ ಕಲಾವಿದರ ಸಂಘ ಹೊರಗಿನಿಂದ ಬೆಂಬಲ ಕೊಡುತ್ತಿತ್ತು. ತಾರೆಯರು ಮುಷ್ಕರಕ್ಕಿಳಿದರೆ ಬರಹಗಾರರೂ ಹೀಗೆಯೇ ಬೆಂಬಲಿಸುತ್ತಿದ್ದರು. 1960ರ ನಂತರ ಇದೇ ಮೊದಲ ಬಾರಿಗೆ ಅಮೆರಿಕಾದಲ್ಲಿ ತಾರೆಯರು ಮತ್ತು ಬರಹಗಾರರು ಹಾಲಿವುಡ್‌ನ ಅಂಗಳದಲ್ಲಿ A.I ನ ಚಮತ್ಕಾರದ ಮುಂದೆ ಒಟ್ಟಿಗೇ ಮುಷ್ಕರಕ್ಕೆ ಇಳಿದಿದ್ದಾರೆ. ಹೇಗಿದೆ ನೋಡಿ ಮನುಷ್ಯನ ಅತಿಯಾದ ವಿಜ್ಞಾನದ ಬೆಳವಣಿಗೆಯ ತಾಂತ್ರಿಕತೆಯ ಪರಿಣಾಮ. ಯಾವ ರೋಬೋಗಳ ಕಥೆಗಳನ್ನಿಟ್ಟುಕೊಂಡು ಕಲಾವಿದರು ಸಿನಿಮಾ ಮಾಡಿ ಗೆದ್ದರೋ, ಆ ರೋಬೋಗಳ ಆತ್ಮದಂತಿರುವ ಈ A.I ಟೆಕ್ನಾಲಜಿ ಅದರದ್ದೇ ಕಥೆ ಮಾಡಿ ಗೆದ್ದವರ ನಿದ್ದೆ ಕೆಡಿಸಿದೆ. ಡಿಸ್ನಿಯಂಥ ವಿಶ್ವಪ್ರಸಿದ್ಧ ಸ್ಟುಡಿಯೋ ಕೂಡ ತಾರೆಯರ ಮತ್ತು ಬರಹಗಾರರ ಬೇಡಿಕೆಯ ಪರವಾಗಿ ಇಲ್ಲ. ಅಂದರೆ ಡಿಸ್ನಿ ಸ್ಟುಡಿಯೋ ಕೂಡ A.I ತಂತ್ರಜ್ಞಾನದ ಪರವಾಗಿದೆ. ಇಷ್ಟಾಗಿಯೂ ಈ A.I ನ ಮುಂದೆ ಸಮಾಧಾನ ಪಟ್ಟುಕೊಳ್ಳಬಹುದಾದ ಅಂಶವೇನೆಂದರೆ ಮನುಷ್ಯನ ಸಿನಿಮಾ ಕಥಾಹಂದರಗಳಿಗೆ, ಚಿಂತನೆಗಳಿಗೆ, ಭಾವನೆಗಳಿಗೆ ಸರಿಗಟ್ಟುವಂತೆ ಚಿಂತಿಸಲು ಹಾಗೂ ಸಿನಿಮಾ ನಿರ್ಮಿಸಲು A.I ಸೃಷ್ಟಿಸಿದ ಕಥೆಗಳಿಗಾಗಲಿ, ಸಿನಿಮಾಗಳಿಗಾಗಲೀ ಅಸಹಜತೆ ಇರುವುದಿಲ್ಲ. ಕಾರಣ ಅಭಿನಯದಲ್ಲಿ, ಭಾವಕೌಶಲದಲ್ಲಿ, ಜೀವಬಂಧುರದಲ್ಲಿ ಕಲಾಪ್ರೌಢಿಮೆಯಲ್ಲಿ ಮನುಷ್ಯ ಸಂಬಂಧಿ ಭಾವಬಂಧಗಳಲ್ಲಿ ವ್ಯಕ್ತವಾಗುವ ತಾಜಾತನವನ್ನು ವ್ಯಕ್ತಪಡಿಸಲು ಕಲಾವಿದರೇ ಆಗಬೇಕು. ಬರಹಗಾರರೇ ಬರೆಯಬೇಕು ಎಂಬುದನ್ನು ಪ್ರೇಕ್ಷಕ ಪ್ರಭು ಬಯಸುತ್ತಾನೆ. ಇದೇ ಸದ್ಯದ ಸಮಾಧಾನ! ಇಷ್ಟಾಗಿಯೂ, ಮುಂದೊಂದು ದಿನ ಮನುಷ್ಯ ಚಿತ್ರಿತ ಪರಿಕಲ್ಪನೆಗಳೆಲ್ಲವೂ, ಮುಂದೊಂದು ದಿನ ತನ್ನಿಂದಲೂ ಸಾಧ್ಯ ಎಂಬುದನ್ನು ಈ A.I ಸಾಬೀತುಪಡಿಸಿದರೆ ಏನು ಮಾಡುವುದು.


ಇದು ಚಾಟ್ ಜಿಪಿಟಿ ಅಂದರೆ ತಾಯಂದಿರ ದಿನ ಕುರಿತಂತೆ ಎಐ ಅಂದರೆ ಕೃತಕ ಬುದ್ಧಿಮತ್ತೆ ಬರೆದ ಪದ್ಯ ಇದು ನಾನು ಬರೆದುದಲ್ಲ ಈ ಎಐ ಇನ್ನೂ ಪ್ರಾಥಮಿಕ ಹಂತದಲ್ಲಿರುವಾಗಲೇ ಈ ಪರಿ ಕೆಲಸ ಮಾಡುತ್ತಿದೆ ಎಂದರೆ ಮುಂದಿನ ಹಂತಗಳಲ್ಲಿ ಇದು ಮತ್ತಷ್ಟು ಅಪ್ಡೇಟ್ ಆದರೆ ಗತಿ ಏನು ಎಂಬುದೇ ಸದ್ಯದ ಪ್ರಶ್ನೆ?

ಅಮ್ಮನೇ ಎಂದೆಂದಿಗೂ ನೆನೆಸುತ್ತೇವೆ ನಿನ್ನನ್ನು ನಿನ್ನ ನೆನೆಸುವುದೇ ನಮಗೆ ಪವಿತ್ರ ಭಾವನೆ ನಮ್ಮ ಮೊಗವನ್ನು ಸುಗಂಧ ಮಾಡುವ ಅವಳು ಮೆಲ್ಲನೆ ನೇರ ನೋಟವ ಎಣಿಸುವಳು ಹೃದಯದಲ್ಲಿ ಪ್ರೀತಿಯ ಹೂವ ಅರಳಿಸುವಳು ನಮ್ಮ ಬಾಳಿಗೆ ಬೆಳಕನ್ನು ನೀಡುವ ಸೂರ್ಯ ಅವಳು ಅಮ್ಮ ಎಂಬ ಹೆಸರಿನಲ್ಲಿ ಸಿಗುವ ಆಶೀರ್ವಾದ ಅವಳು ಅವಳೇ ನಮ್ಮ ಜೀವನದ ಆದರ್ಶ ಪ್ರೀತಿಯ ಕಾರಣ ಜಗಕೆ ಅವಳ ಹೃದಯ ನೀಡುವುದು ಹರ್ಷ ಕರುಣೆಯಲ್ಲಿ ತುಂಬುವಳು ಮಕ್ಕಳ ಸಂತಸ ತಾಯಿ ದಿನದ ಈ ಸುದಿನ ನೆನೆಸುತ್ತೇವೆ ಅವಳನ್ನು ವಂದಿಸುತ್ತೇವೆ. ಅವಳಿಗೆ ಅಮ್ಮನೇ ನೀವು ಅನಂತ ಆಶೀರ್ವಾದದ ಬುಗ್ಗೆ ನಿಮ್ಮನು ಸದಾ ಪ್ರೀತಿಸುತ್ತೇವೆ ಎಂದು ಸಾರುತ್ತೇವೆ. ಜೀವನದಲ್ಲಿ ನೀವು ನಮ್ಮ ಸಾರಥಿ ನೀವು ಸದಾ ನಮ್ಮ ಪಾಲಿನ ಅಮೂಲ್ಯ ಸಂಗತಿ. ನೀವು ನಮ್ಮ ಹೃದಯದ ಅಮರತಾರೆ ನಿಮ್ಮ ಕುರಿತ ನಮ್ಮ ಭಾವನೆ ಸದಾ ಪವಿತ್ರ ನಿಮ್ಮ ಪ್ರೀತಿ ಸದಾ ಜೀವಂತ. 'ಕಾಲಾಯ ತಸ್ಮೈ ನಮಃ' ಏನಂತೀರಿ?

ಗೃಹಲಕ್ಷ್ಮಿ ನೋಂದಣಿಗೆ ಹಣ ಪಡೆದರೆ ಕ್ರಿಮಿನಲ್ ಕೇಸ್

ಬೆಳಗಾವಿ: ಗೃಹಲಕ್ಷ್ಮಿ ಯೋಜನೆ ನೋಂದಣಿ ಪ್ರಕ್ರಿಯೆಗೆ ಜನರಿಂದ ಹಣ ಪಡೆದರೆ ಅಥವಾ ಯೋಜನೆ ಅನುಷ್ಠಾನಕ್ಕೆ ನಿರ್ಲಕ್ಷ್ಯ ತೋರಿದರೆ, ಅಂತಹವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೋಂದಣಿ ಪ್ರಕ್ರಿಯೆಗೆ ಜನರಿಂದ ಹಣ ಪಡೆಯುತ್ತಿದ್ದ ಮೂರು ಕೇಂದ್ರಗಳ ಲಾಗಿನ್ ಐಡಿ ಹಿಂಪಡೆಯಲಾಗಿದೆ. ಯೋಜನೆ ದುರ್ಬಳಕೆ ತಡೆಯಲು ಸರ್ಕಾರ ಸುಮ್ಮನೆ ಕುಳಿತಿಲ್ಲ ಎಂದು ಸ್ಪಷ್ಟಪಡಿಸಿದರು. ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿಗೆ ಫಲಾನುಭವಿಗಳಿಂದ ಹಣ ಪಡೆಯುವುದು ಕಂಡು ಬಂದರೆ, ಅಂತಹವರ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಹಿಂದಕ್ಕೆ ಪಡೆಯಬೇಕು. ನಿಯಮ ಗಾಳಿಗೆ ತೂರಿದವರ ವಿರುದ್ಧ ಪ್ರಕರಣವನ್ನೂ ದಾಖಲಿಸಬೇಕೆಂದು ಸೂಚಿಸಲಾಗಿದೆ.



ಎಲ್ಲಿಯೇ ಹಣ ಪಡೆಯುತ್ತಿರುವುದು ಕಂಡು ಬಂದರೆ ತಹಶೀಲ್ದಾರರು, ಪಿಡಿಒಗಳು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕು. ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ಕೊಡಬೇಕು ಎಂದರು.

ಗೃಹಲಕ್ಷ್ಮಿ ಯೋಜನೆ ನೋಂದಣಿ ಕಾರ್ಯವನ್ನು ನಾವು ಉಚಿತವಾಗಿ ಮಾಡಿಸಿಕೊಳ್ಳುತ್ತಿಲ್ಲ. ಪ್ರತಿ ಅರ್ಜಿ ಅಪ್‌ಲೋಡ್ ಮಾಡುವವರಿಗೆ ಸರ್ಕಾರದಿಂದಲೇ 12 ರೂ. ಕೊಡುತ್ತಿದ್ದೇವೆ. ಹಾಗಾಗಿ ಜನರು ಯಾರಿಗೂ ಹಣ ಕೊಡಬೇಕಿಲ್ಲ ಎಂದರು. ರಾಜ್ಯ ಸರ್ಕಾರದ ಪತನಕ್ಕೆ ಸಿಂಗಾಪುರದಲ್ಲಿ ತಂತ್ರ ರೂಪಿಸಲಾಗುತ್ತಿದೆಯೇ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಹೆಬ್ಬಾಳ್ಕರ್, ನಾನು ಗೃಹಲಕ್ಷ್ಮಿ ಯೋಜನೆ ಜಾರಿ ಬಗ್ಗೆ ಗಮನಹರಿಸಿದ್ದೇನೆ. ಕೆಡಿಪಿ ಸಭೆಯಲ್ಲಿ ಭಾಗವಹಿಸಿದ್ದೇನೆ. ನನಗೆ ಆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಪ್ರತಿಕ್ರಿಯಿಸಿದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.24- 2023-24ನೇ ಸಾಲಿನ ಕೇಂದ್ರ ಪುರಸ್ಕೃತ ಟಾಪ್ ಕ್ಲಾಸ್ ವಿದ್ಯಾರ್ಥಿ ವೇತನವನ್ನು ಪಡೆಯಲು ರಾಜ್ಯದ ಟಾಪ್ ಸ್ಕೂಲ್ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹಿಂದುಳಿದ ವರ್ಗ, ಆರ್ಥಿಕವಾಗಿ ಹಿಂದುಳಿದ ವರ್ಗಗಳು ಮತ್ತು ಡಿ-ನೋಟಿಫೈಡ್, ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟು ವರ್ಗಗಳಿಗೆ ಸೇರಿರಬೇಕು, ಪೋಷಕರ ವಾರ್ಷಿಕ ಆದಾಯವು 2.50 ಲಕ್ಷದೊಳಗಿರಬೇಕು. 9ನೇ ಮತ್ತು 11ನೇ ತರಗತಿಯಲ್ಲಿ ಉನ್ನತ ದರ್ಜೆಯ ಶಾಲೆಯಲ್ಲಿ ಓದುತ್ತಿರಬೇಕು ಹಾಗೂ 9 ಮತ್ತು 10ನೇ ತರಗತಿಗೆ 75 ಸಾವಿರ ರೂ. ಮತ್ತು 11 ಮತ್ತು 12ನೇ ತರಗತಿಗೆ 1 ಲಕ್ಷ 25 ಸಾವಿರ ರೂ.ಗಳ ಶಾಲಾ ಬೋಧನಾ ಮತ್ತು ಹಾಸ್ಟೆಲ್ ಶುಲ್ಕವನ್ನು ಒಳಗೊಂಡಿರುತ್ತದೆ. ಅರ್ಜಿ ಸಲ್ಲಿಸಲು ಆಗಸ್ಟ್ 10 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಯನ್ನು https://yet.nta.ac.in ಮತ್ತು https://socialjustice.gov.in/schmesನಲ್ಲಿ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಜ್ಯದಲ್ಲಿ ವ್ಯಾಪಕ ಮಳೆ ಕಟ್ಟೆಚ್ಚರ ವಹಿಸಲು ಜಿಲ್ಲಾಧಿಕಾರಿಗಳಿಗೆ ಸರ್ಕಾರದ ಸೂಚನೆ

● ಇನ್ನೂ ನಾಲ್ಕು ದಿನ ಭಾರೀ ಮಳೆ ಮುನ್ಸೂಚನೆ ● ಪ್ರತಿ ಜಿಲ್ಲೆಯಲ್ಲಿ ಡಿಸಿಗಳು, ತಾಲೂಕಲ್ಲಿ ತಹಸೀಲ್ದಾರ್‌ಗಳು ತುರ್ತು ಪರಿಹಾರಕ್ಕೆ ಕ್ರಮ ಕೈಗೊಳ್ಳಲು ಕಂದಾಯ ಸಚಿವ ಕೃಷ್ಣ ಭೈರೇಗೌಡ ನಿರ್ದೇಶನ


ಉಡುಪಿ



ಕುಕ್ಕೆ ಸುಬ್ರಮ್ಹಣ್ಯ


ಸೂಳ್ಯ


ದಾರವಾಡ

ಬೆಂಗಳೂರು, ಜು.24(ಕೆಎಂಶಿ)–ರಾಜ್ಯದ ನದಿ ಪಾತ್ರಗಳಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಕಟ್ಟೆಚ್ಚರ ವಹಿಸುವಂತೆ ಆದೇಶಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ಇಂದಿಲ್ಲಿ ತಿಳಿಸಿದರು.

ರಾಜ್ಯದಲ್ಲಿ ಉಂಟಾಗಿರುವ ಅತಿವೃಷ್ಟಿಗೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಚಿವರು, ರಾಜ್ಯದಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಭಾರೀ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಇಂತಹ ಕ್ರಮ ಕೈಗೊಂಡಿದ್ದೇವೆ ಎಂದರು. ಕಾವೇರಿ–ಕೃಷ್ಣಾ ಕೊಳ್ಳ ಸೇರಿದಂತೆ ರಾಜ್ಯದ ಎಲ್ಲಾ ಪ್ರಮುಖ ಜಲಾನಯನ ಭಾಗದಲ್ಲಿ ಭಾರೀ ಮಳೆಯಾಗುತ್ತಿದೆ. ಕರಾವಳಿ ಮತ್ತು ಮಲೆನಾಡಿನಲ್ಲೂ ಬಿರುಸಿನಿಂದ ಮಳೆಯಾಗಿ ಕೆಲವೆಡೆ ಜನ–ಜೀವನ ಅಸ್ತವ್ಯಸ್ತಗೊಂಡಿದೆ. ನಮ್ಮ ರಾಜ್ಯದ ಜಲಾನಯನ ಹಾಗೂ ನೆರೆಯ ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಭಾರೀ ಮಳೆಯಿಂದಾಗಿ ನಮ್ಮ ರಾಜ್ಯದ ಕೆಲವೆಡೆ ಪ್ರವಾಹ ಉಂಟಾಗಿದ್ದು, ಮುನ್ನೆಚ್ಚರಿಕೆ ಕ್ರಮಕ್ಕೆ ಜಿಲ್ಲಾಡಳಿತಕ್ಕೆ ಸೂಚಿಸಿದ್ದೇವೆ. ಅಣೆಕಟ್ಟು ಗಳಿಗೆ ನಾಲ್ಕರಿಂದ ನಾಲ್ಕೂವರೆ ಲಕ್ಷ ಕ್ಯುಸೆಕ್ ನೀರು ಹರಿದು ಬರುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಜಿಲ್ಲಾಧಿಕಾರಿಗಳು ಜಿಲ್ಲಾ



ಕೇಂದ್ರಗಳಲ್ಲಿ ಹಾಗೂ ತಹಸೀಲ್ದಾರ್‌ಗಳು ತಾಲೂಕು ಕೇಂದ್ರಗಳಲ್ಲಿದ್ದು, ಅಗತ್ಯಬಿದ್ದರೆ ತುರ್ತು ಪರಿಹಾರ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ ಎಂದರು. ಜಿಲ್ಲಾಧಿಕಾರಿಗಳ ಬಳಿ 540 ಕೋಟಿ ರೂ. ಹಣವಿದೆ. ಸರ್ಕಾರದ ಬಳಿಯೂ ಹಣವಿದ್ದು, ಪ್ರವಾಹ ನಿರ್ವಹಣೆಗೆ ಹಣದ ಕೊರತೆ ಇಲ್ಲ ಎಂದು ಹೇಳಿದರು. ಕೃಷ್ಣಾ ನದಿಯ 12 ಸೇತುವೆಗಳ ಮೇಲೆ ನೀರು ಹರಿಯುತ್ತಿದೆ. ಜನ ವಸತಿ ಪ್ರದೇಶಗಳಿಗೆ ನೀರು ನುಗ್ಗಿಲ್ಲ. ಉತ್ತರ ಒಳನಾಡಿನಲ್ಲಿ ಕಳೆದ 15 ದಿನಗಳಿಂದ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ರಾಜ್ಯದ ಪ್ರಮುಖ ಜಲಾಶಗಳಲ್ಲಿ ಶೇ. 50ರಷ್ಟು ನೀರು ಸಂಗ್ರಹವಾಗಿದೆ. ಕೃಷ್ಣಾ ಮತ್ತು ಕಾವೇರಿ ಕೊಳ್ಳದ ಜಲಾಶಗಳಿಗೂ ಒಳಹರಿವು ಹೆಚ್ಚಾಗಿದೆ. ಇದರಿಂದ ನೀರಿನ ಸಂಗ್ರಹ ಪರಿಸ್ಥಿತಿ ಸುಧಾರಿಸಿದೆ ಎಂದು ಹೇಳಿದರು. ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಮಂಡ್ಯ, ಮೈಸೂರು ಭಾಗದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಜೂನ್ ಒಂದರಿಂದ ಇವತ್ತಿನವರೆಗೆ ರಾಜ್ಯದಲ್ಲಿ ವಾಡಿಕೆಗಿಂದ ಶೇ.14 ರಷ್ಟು ಮಳೆ ಕೊರತೆಯಾಗಿದೆ.

ದಕ್ಷಿಣ ಕನ್ನಡದ ಕಡಬದಲ್ಲಿನ ಕಾಳಜಿ ಕೇಂದ್ರದಲ್ಲಿ 35 ಜನರಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ 4 ಕಾಳಜಿ ಕೇಂದ್ರಗಳನ್ನು ತೆರೆದಿದ್ದು, 45 ಜನರು ಆಶ್ರಯ ಪಡೆದಿದ್ದಾರೆ. ಜೂನ್‌ನಿಂದ ಗುಡುಗು–ಸಿಡಿಲು ಸಹಿತ ಮಳೆ ಸಂಬಂಧ ಅನಾಹುತದಲ್ಲಿ 27ಜನರು ಮೃತಪಟ್ಟಿದ್ದಾರೆ.

ಒಟ್ಟಾರೆ ಜನರ ಪ್ರಾಣ, ಆಸ್ತಿ–ಪಾಸ್ತಿ ರಕ್ಷಣೆಗೆ ಆದ್ಯತೆ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ನಾಳೆ ನಡೆಯಬೇಕಿದ್ದ ಮೈಸೂರು ವಿಭಾಗದ ಸಭೆಯನ್ನು ಮುಂದೂಡಿರುವುದಾಗಿ ಹೇಳಿದರು.

ಕಬ್ಬು ಬೆಳೆಗಾರರ ಸಮಸ್ಯೆ ಆಲಿಸಿದ ಜಿಲ್ಲಾಧಿಕಾರಿ

ಮೈಸೂರು, ಜು.24(ಸಿಎನ್)–ರೈತ ಮುಖಂಡರ ಒಪ್ಪಿಗೆ ಮೇರೆಗೆ ಕಬ್ಬಿನ ಇಳುವರಿ ಮತ್ತು ತೂಕದಲ್ಲಿ ವ್ಯತ್ಯಾಸ ಆಗದ ರೀತಿ, ರೊಟೇಶನ್ ಬೇಸಿಸ್ ಮೇಲೆ ಮಾನಿಟರಿಂಗ್ ಕಮಿಟಿ ಹಾಗೂ ಕಾರ್ಖಾನೆಯಲ್ಲಿ ಕಬ್ಬಿನ ಲೋಡ್ ತೂಕ ಪರಿಶೀಲನೆಗೆ ಜಿಲ್ಲಾಡಳಿತದಿಂದ ವೇ ಬಿಡ್ಜ್ ನಿರ್ಮಾಣದ ಪ್ರಸ್ತಾವನೆಯನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ, ಸಕ್ಕರೆ ಸಚಿವರಿಗೆ ಹಾಗೂ ಕಬ್ಬಿನ ಆಯೋಗಕ್ಕೆ ಪತ್ರ ಬರೆಯುವ ಮೂಲಕ ಮನವಿ ಮಾಡಲಾಗುತ್ತದೆ ಎಂದು ಮೈಸೂರು ಜಿಲ್ಲಾಧಿಕಾರಿ ಕೆ.ವಿ ರಾಜೇಂದ್ರ ಮಾಹಿತಿ ನೀಡಿದರು.



ಸಿದ್ಧಾರ್ಥನಗರದ ನೂತನ ಡಿಸಿ ಕಚೇರಿ ಜಿಲ್ಲಾಧಿಕಾರಿಗಳ ನ್ಯಾಯಾಲಯ ವಿಭಾಗದಲ್ಲಿ ರೈತ ಸಂಘಟನೆಗಳಾದ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ (ಮೂಲ), ರಾಜ್ಯ ರೈತ ಸಂಘ, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ, ಅಖಿಲ ಕರ್ನಾಟಕ ಕಬ್ಬು ಬೆಳೆಗಾರರ ಸಂಘ (ಕೆಆರ್‌ನಗರ), ಹಾಗೂ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಅಧಿಕಾರಿಗಳೊಂದಿಗೆ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿ, ಕಬ್ಬಿಗೆ ಎಫ್‌ಆರ್‌ಪಿ ದರ ನಿಗದಿ ಪ್ರಕ್ರಿಯೆ ಜಿಲ್ಲಾಡಳಿತದ ಕೈಯಲ್ಲಿಲ್ಲ, ರೈತರ ಹಿತದೃಷ್ಟಿಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಎಫ್‌ಆರ್‌ಪಿ ದರ ನಿಗದಿಗೆ ಮನವಿ ಮಾಡುತ್ತೇವೆ ಎಂದು ಭರವಸೆ ನೀಡಿದರು.

ರೈತರ ಪ್ರಶ್ನೆಗೆ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಅಧಿಕಾರಿ ವೇಣುಸ್ವಾಮಿ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರ ಎಫ್‌ಆರ್‌ಪಿ ದರ ನಿಗದಿ ಮಾಡಿರುವುದು 2845 ರೂಪಾಯಿಗಳು. ಸರ್ಕಾರದಿಂದ 15 ಲಕ್ಷ 70 ಸಾವಿರ ಕೊಡಲಾಗಿದೆ ಯಾವುದೇ ಬಾಕಿ ಉಳಿಸಿಕೊಳ್ಳದೇ, ಎಲ್ಲವನ್ನು ರೈತರಿಗೆ ಹಂಚುವ ಕಾರ್ಯ ನಡೆಯುತ್ತಿದೆ. ಅದಲ್ಲದೇ ಎಥೆನಾಲ್ ಘಟಕದವರು 50 ರೂ. ಕೊಡಬೇಕು, ಎಥೆನಾಲ್ ಇದ್ದರೂ ಇಲ್ಲದಿದ್ದರೂ 100 ರೂ. ಕೊಡಬೇಕು ಎಂದು ರಾಜ್ಯ ಸರ್ಕಾರ ಹೇಳಿದೆ. ಎರಡು ಸೇರಿ 150 ರೂ. ನೀಡಬೇಕು ಎಂದು ಸರ್ಕಾರ ತಿಳಿಸಿತ್ತು, ಆದರೆ ಎಥೆನಾಲ್ ಘಟಕ ಇಲ್ಲವೆಂದು ಜಿಲ್ಲಾಡಳಿತಕ್ಕೆ ತಿಳಿಸಿದ್ದೆವು. ಒತ್ತಡ ಹೇರಿದ ಕಾರಣ ಸುಪ್ರೀಂಕೋರ್ಟ್‌ನಿಂದ ಆದೇಶಕ್ಕೆ ತಡೆ ತಂದಿದ್ದೇವೆ. 2016ರ ಕಾಯ್ದೆ ಪ್ರಕಾರ 70% ರೈತರಿಗೆ, 30% ಕಾರ್ಖಾನೆಗೆ ಹಣ ಹಂಚಿಕೆಯಾಗಿದೆ ಪ್ರಸ್ತುತ ರಿಕವರಿ ಈಗ 9.59 ರಷ್ಟು ಬಂದಿದೆ ಎಂದು ಮಾಹಿತಿ ನೀಡಿದರು.

ಬಳಿಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಮಾತನಾಡಿ, ಕಳೆದ ವರ್ಷ ಮುಂಗಡ ಹಣ ನೀಡಿ ರಿಕವರಿ ಮಾಡುತ್ತಿದ್ದರು. ಆದರೆ ಈಗ ಗೊಂದಲ ಸೃಷ್ಟಿಸಿದ್ದಾರೆ. 9.25 ರಿಂದ 9.59 ಕ್ಕೆ ಇಳಿಕೆಯಾಗಿದೆ ವ್ಯತ್ಯಯ ಹಣ ಇವರೇ ಕೊಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿ ಮಾತನಾಡಿ, ವರ್ಷದ ಕೊನೆಯಲ್ಲೇ ಇಳುವರಿ ಮಾಡುತ್ತಾರೆ ಎಂದು ನಿಮಗೆ ಹೇಗೆ ತಿಳಿಯುತ್ತದೆ. ಜೊತೆಗೆ 9.5 ರಷ್ಟೇ ರಿಕವರಿ ಬರುತ್ತದೆ ಎಂದು ಹೇಗೆ ಅಂದಾಜಿಸುತ್ತೀರಿ? ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಅಧಿಕಾರಿ ವೇಣು, ಬೇಸಿಗೆಯಲ್ಲಿ ಕಬ್ಬು ಇಳುವರಿ ಪ್ರಮಾಣ ಹೆಚ್ಚು, ಮಳೆಗಾಲದಲ್ಲಿ ಕಡಿಮೆಯಾಗುತ್ತದೆ. ಜೊತೆಗೆ ಕಳೆದ ಬಾರಿ ರಿಕವರಿ ಕಳುಹಿಸಿರುವ ಆಧಾರದ ಮೇಲೆ ಈಗಿನ ರಿಕವರಿ ಅಂದಾಜಿಸಲಾಗುತ್ತದೆ. ನೇರವಾಗಿ ರಿಕವರಿ ಮಾಡಲಾಗಲ್ಲ. ಕೋಲ್ ರಿಕವರಿ ಮಾಡಬಹುದು ಎಂದರು.

ರೈತ ಮುಖಂಡ ಭಾಗ್ಯರಾಜ್ ಮಾತನಾಡಿ, ಕಳೆದ ಬಾರಿ 1 ಟನ್ ಕಬ್ಬು ಕಟಾವಿಗೆ 450 ರೂ. ಆಗುತ್ತಿತು. ಆದರೆ ಈಗ ಒಂದು ಟನ್ ಕಬ್ಬಿಗೆ 500–1200 ದಾಟುತ್ತಿದೆ. ಸಮರ್ಪಕವಾಗಿ ಕೂಲಿ ಕಾರ್ಮಿಕರು ಸಿಗುತ್ತಿಲ್ಲ. ಕೂಲಿಕಾರರನ್ನು ಕಾರ್ಖಾನೆ ಫೀಲ್ಡ್ ಆಫೀಸರ್‌ಗಳೇ ಕಂಟ್ರೋಲ್ ಮಾಡುತ್ತಾರೆ. 150 ರೂ. ಬೆಂಬಲ ಬೆಲೆ ನೀಡಬೇಕು. ಇಲ್ಲವಾದಲ್ಲಿ ನಾವು ಕಬ್ಬು ಕಟಾವು ಮಾಡಲು ಬಿಡಲ್ಲ ಎಂದು ಎಚ್ಚರಿಕೆ ನೀಡಿದರು.

ಕೆಪಿಸಿಸಿ ಶಿಸ್ತು ಪಾಲನಾ ಸಮಿತಿ ನೋಟಿಸ್‌ಗೆ ಹೆದರಲ್ಲ



ಮೈಸೂರು, ಜು.24(ಬಿಎಲ್‌ಯು)– ಕೆಪಿಸಿಸಿ ಶಿಸ್ತು ಪಾಲನಾ ಸಮಿತಿ ನೀಡಿರುವ ನೋಟಿಸ್‌ಗೆ ನಾನು ಹೆದರುವುದಿಲ್ಲ ಎಂದು ಮಾಜಿ ಶಾಸಕ ವಾಸು ತಿಳಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಯಾರು ಬೇಕಾದರೂ ಹೈಕಮಾಂಡ್‌ಗೆ ದೂರು ನೀಡಬಹುದು. ಆದರೆ ನನ್ನ ವಿರುದ್ಧ ದೂರು ನೀಡಿದವರ ಹಿನ್ನೆಲೆ ಏನೆಂದು ಎಲ್ಲರಿಗೂ ಗೊತ್ತಿದೆ. ಅವರು ಕೊಟ್ಟ ದೂರಿನ ಮೇರೆಗೆ ನೀಡಿರುವ ಇಂತಹ ನೋಟಿಸ್‌ಗೆಲ್ಲಾ ನಾನು ಹೆದರುವುದಿಲ್ಲ ಎಂದರು.

ಸೊಸೆ ಬಂದ ನಂತರ ಅತ್ತೆಗೆ ಪ್ರಾಮುಖ್ಯತೆ ಕಡಿಮೆ ಆಗುತ್ತದೆ. ಬೇರೆಯವರು ಪಕ್ಷಕ್ಕೆ ಬಂದ ನಂತರ ನನಗೂ ಅದೇ ಪರಿಸ್ಥಿತಿ ಆಗಿದೆ. ನಾನು ಹಲವು ದಶಕಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಇದ್ದೇನೆ. ಕಾಂಗ್ರೆಸ್ ವರಿಷ್ಠರು ಏನೇ ತೀರ್ಮಾನ ಕೈಗೊಂಡರೂ ಅದನ್ನು ನಾನು ಸ್ವಾಗತಿಸುತ್ತೇನೆ ಎಂದು ವಾಸು ಸ್ಪಷ್ಟಪಡಿಸಿದರು. ನೋಟಿಸ್‌ನಲ್ಲಿರುವ ವಿಚಾರ ಏನು ಅಂತ ಈ ತನಕ ನಾನು ನೋಡಿಯೇ ಇಲ್ಲ. ಮುಂದಿನ ದಿನದಲ್ಲಿ ಅದಕ್ಕೆ ಸೂಕ್ತ ಉತ್ತರ ನೀಡುತ್ತೇನೆ. ನನ್ನ ಮೇಲೆ ಇಂತಹ ಟಾರ್ಗೆಟ್ ಬಹಳ ಹಿಂದೆಯೇ ನಡೆದಿದೆ. ಇದಕ್ಕೆಲ್ಲಾ ನಾನು ಹೆದರುವವನಲ್ಲ ಎಂದು ತಿಳಿಸಿದರು. ಇದೆಲ್ಲಾ ನನಗೆ ಕಿರುಕುಳ ಎಂದು ಭಾವಿಸುವುದಿಲ್ಲ. ನನ್ನ ಅನುಭವದಲ್ಲಿ ಇದು ಒಂದು ಭಾಗ ಎಂದು ತಿಳಿಯುತ್ತೇನೆ. ಪಕ್ಷ ಬಯಸಿದರೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೇನೆ. ಇಲ್ಲದಿದ್ದರೆ ಸುಮ್ಮನಿರುತ್ತೇನೆ. ಮಾಡಲು ಬಹಳಷ್ಟು ಸಾಮಾಜಿಕ ಕೆಲಸಗಳಿವೆ ಅದನ್ನೆ ಮುಂದುವರೆಸುತ್ತೇನೆ ಎಂದು ವಾಸು ಹೇಳಿದರು.

ಕಾರ್ಗಿಲ್ ವಿಜಯ ದಿವಸ; ಜೈ ಹಿಂದ್ ಕಾರ್ಯಕ್ರಮ

ಮೈಸೂರು, ಜು. 24– ಯುವ ಭಾರತ್ ಸಂಘಟನೆ ವತಿಯಿಂದ ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಜೈ ಹಿಂದ್ ಕಾರ್ಯಕ್ರಮವನ್ನು ಜುಲೈ 26ರಂದು ಬೆಳಗ್ಗೆ 10:30 ಕ್ಕೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ (ಮೆಟ್ರೋಪಾಲ್ ವೃತ್ತ) ದಲ್ಲಿ ಆಚರಿಸಲಾಗುವುದು ಎಂದು ಯುವ ಭಾರತ್ ಸಂಘಟನೆಯ ಸಂಚಾಲಕರಾದ ಶರತ್ ಭಂಡಾರಿ ತಿಳಿಸಿದ್ದಾರೆ



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಮಾಜಿ ಶಾಸಕರಾದ ಎಲ್ ನಾಗೇಂದ್ರ, ನಗರಪಾಲಿಕ ಸದಸ್ಯೆ ಪ್ರಮೀಳಾ ಭರತ್, ಹಿರಿಯ ಸಮಾಜ ಸೇವಕ ಕೆ ರಘುರಾಮ್ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕನ್ನಡ ಸಾಹಿತ್ಯ ಪರಿಷತ್ನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮೈಸೂರು ನಗರ ಬಿಜೆಪಿ ಹಿಂದುಳಿದ ವರ್ಗದ ಮೋರ್ಚಾದ ಅಧ್ಯಕ್ಷ ಜೋಗಿ ಮಂಜು, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಜೀವದಾರ ದತ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಬಿಜೆಪಿ ನರಸಿಂಹರಾಜ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಲೋಹಿತ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಮೈಸೂರಿಗೆ ಉಪ ನಗರ ರೈಲು ಯೋಜನೆ ವಿಸ್ತರಣೆ

ನೈರುತ್ಯ ರೈಲ್ವೆಗೆ ಪತ್ರ: ಸಚಿವ ಎಂ.ಬಿ.ಪಾಟೀಲ

ಬೆಂಗಳೂರು, ಜು.25– ಉಪನಗರ ರೈಲು ಯೋಜನೆಯನ್ನು ಮೈಸೂರು, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ, ಮಾಗಡಿ, ಗೌರಿಬಿದನೂರು, ಬಂಗಾರಪೇಟೆಗೆ ವಿಸ್ತರಿಸಲು ಅನುಕೂಲವಾಗುವಂತೆ ಕಾರ್ಯಸಾಧ್ಯತಾ ವರದಿ ಕೈಗೆತ್ತಿಕೊಳ್ಳಲು ಅನುಮತಿ ನೀಡುವಂತೆ ನೈರುತ್ಯ ರೈಲ್ವೆ ವಲಯದ ಪ್ರಧಾನ ವ್ಯವಸ್ಥಾಪಕರಿಗೆ ಪತ್ರ ಬರೆಯಲಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಉಪನಗರ ರೈಲು ಯೋಜನೆಯ ಪ್ರಗತಿ ಕುರಿತು ಕರ್ನಾಟಕ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತದ (ಕೆ–ರೈಡ್) ಅಧಿಕಾರಿಗಳ ಜೊತೆ ಸೋಮವಾರ ಅವರು ಸಭೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ಅವರು, ರಾಜಧಾನಿಯಲ್ಲಿನ ಸಂಚಾರ ದಟ್ಟಣೆ ನಿವಾರಣೆ ಗುರಿಯೊಂದಿಗೆ ಕೈಗೆತ್ತಿಕೊಂಡಿರುವ ಉಪ ನಗರ ರೈಲು ಯೋಜನೆಯ ಹಂತ–1ರಲ್ಲಿ 148.17 ಕಿ.ಮೀ. ಕಾಮಗಾರಿ ನಡೆಯುತ್ತಿದೆ. ಅದನ್ನು ಸುತ್ತಲಿನ ಹಲವು ನಗರಗಳಿಗೆ ವಿಸ್ತರಿಸುವ ಅಗತ್ಯವಿದೆ ಈ ಸಂಬಂಧ ಜೂ. 6ರಂದು ಸಭೆ ನಡೆಸಲಾಗಿತ್ತು. ಕೆ–ರೈಡ್ ಈ ಪ್ರಸ್ತಾವನೆಗೆ ಅಂದು ತಾತ್ವಿಕ ಒಪ್ಪಿಗೆ ನೀಡಲಾಗಿತ್ತು ಎಂದರು.



ಉಪನಗರ ರೈಲು ವಿಸ್ತರಣೆ: ಪ್ರಗತಿಯಲ್ಲಿರುವ 148 ಕಿ.ಮೀ. ವ್ಯಾಪ್ತಿಯ ಉಪ ನಗರ ರೈಲು ಯೋಜನೆಯಲ್ಲಿ, ಬೆಂಗಳೂರು ನಗರ ರೈಲು ನಿಲ್ದಾಣ–ದೇವನಹಳ್ಳಿ (41.4 ಕಿ.ಮೀ), ಬೈಯಪ್ಪನಹಳ್ಳಿ–ಚಿಕ್ಕಬಾಣಾವರ (25.01 ಕಿ.ಮೀ), ಕೆಂಗೇರಿ– ವೈಟ್‌ಫೀಲ್ಡ್ (35.32 ಕಿ.ಮೀ) ಮತ್ತು ಹೀಳಲಿಗೆ–ರಾಜಾನುಕುಂಟೆ (46.25 ಕಿ.ಮೀ) ಹೀಗೆ ನಾಲ್ಕು ಕಾರಿಡಾರ್‌ಗಳಿವೆ.

ಎರಡನೇ ಹಂತದಲ್ಲಿ ದೇವನಹಳ್ಳಿ–ಕೋಲಾರ (107 ಕಿ.ಮೀ), ಚಿಕ್ಕಬಾಣಾವರದಿಂದ ಡಾಬಸ್‌ಪೇಟೆ ಮೂಲಕ ತುಮಕೂರು (55 ಕಿ.ಮೀ), ಚಿಕ್ಕಬಾಣಾವರ–ಮಾಗಡಿ (45 ಕಿ.ಮೀ), ಕೆಂಗೇರಿ–ಮೈಸೂರು (125 ಕಿ.ಮೀ), ವೈಟ್ ಫೀಲ್ಡ್–ಬಂಗಾರಪೇಟೆ (45 ಕಿ.ಮೀ), ಹೀಳಲಿಗೆಯಿಂದ ತಮಿಳುನಾಡಿನ ಹೊಸೂರು (23 ಕಿ.ಮೀ) ಮತ್ತು ರಾಜಾನುಕುಂಟೆಯಿಂದ ದೊಡ್ಡಬಳ್ಳಾಪುರದ ಮಾರ್ಗವಾಗಿ ಗೌರಿಬಿದನೂರಿನವರೆಗೆ (52 ಕಿ.ಮೀ) ವಿಸ್ತರಿಸಲು ಎಂ.ಬಿ. ಪಾಟೀಲ ಚಿಂತನೆ ನಡೆಸಿದ್ದಾರೆ.

ರಾಜ್ಯದಲ್ಲಿ ಭಾರೀ ಮಳೆ

ಸಿಎಸ್‌ಯಿಂದ ವರದಿ ಕೇಳಿದ ಸಿಎಂ

ಬೆಂಗಳೂರು: ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆ ಮತ್ತು ಹಾನಿಯ ವರದಿಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಂದ ವಸ್ತು ಸ್ಥಿತಿ ವರದಿ ಕೇಳಿದ್ದಾರೆ.



ರಾಜ್ಯದ ಬಹುತೇಕ ಭಾಗಗಳಲ್ಲಿ ವಿಶೇಷವಾಗಿ ಕರಾವಳಿ ಮತ್ತು ಉತ್ತರ ಕರ್ನಾಟಕದಲ್ಲಿ ಭಾರೀ ಮಳೆಯಾಗುತ್ತಿದೆ. ನಿರಂತರ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿದ್ದು, ವಸತಿ ಪ್ರದೇಶಗಳು ಜಲಾವೃತವಾಗಿವೆ. ಬೆಂಗಳೂರು ನಗರವು ತುಂತುರು ಮಳೆ ಮತ್ತು ಮೋಡ ಕವಿದ ವಾತಾವರಣವಿದೆ. ಐಟಿ ನಗರದಲ್ಲಿ ದಿನವಿಡೀ ಮೋಡ ಕವಿದ ವಾತಾವರಣವಿತ್ತು.

ಮುಂಗಾರು ಹಂಗಾಮಿನಲ್ಲಿ ರಾಜ್ಯದ ಕೆಲವು ಪ್ರದೇಶಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಕಾರಣ ಹಾನಿ ಹಾಗೂ ಮಳೆ ಕೊರತೆ ಕುರಿತು ಜಿಲ್ಲಾವಾರು ವರದಿ ನೀಡುವಂತೆ ಸಿದ್ದರಾಮಯ್ಯ ಕೇಳಿದ್ದರು.

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಮಳೆಯಾಗುತ್ತಿದ್ದು, ಬೆಳಗಾವಿ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶಗಳು ಜಲಾವೃತವಾಗಿವೆ. ಘಟಪ್ರಭಾ ನದಿ ತುಂಬಿ ಹರಿಯುತ್ತಿದ್ದು, ಕರ್ನಾಟಕದ ನಯಾಗರ ಎಂದೇ ಖ್ಯಾತವಾಗಿರುವ ಗೋಕಾಕ ಜಲಪಾತ ಪೂರ್ಣ ವೈಭವದಿಂದ ಹರಿಯುತ್ತಿದೆ. ಭಾರೀ ಮಳೆಗೆ ಮನೆಗಳು ಕುಸಿದಿರುವ ವರದಿಗಳ ನಡುವೆಯೇ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ತುಂಗಾ, ಭದ್ರಾ ಮತ್ತು ಹೇಮಾವತಿ ನದಿಗಳ ಒಳಹರಿವು ತೀವ್ರ ಏರಿಕೆ ಕಂಡಿದೆ. ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಬಗ್ಗೆ ವರದಿಯಾಗಿದೆ.

ಜು.26ರಂದು ವಿಶೇಷ 'ಸ್ವಾತಿ' ಪೂಜೆ

ಮೈಸೂರು, ಜು.24–ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಜು.26ರಂದು ಬುಧವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 7.30ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10ಕ್ಕೆ ಅಲಂಕಾರ, 11ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12ಕ್ಕೆ ಶಾತ್ತುಮೊರೈ, 12.30ಕ್ಕೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 7ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ವಿದ್ವಾನ್ ಕೆ.ಆರ್.ಯೋಗನರಸಿಂಹನ್ (ಮುರುಳಿ) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.



ರಕ್ತ ದಾನವೇ ಶ್ರೇಷ್ಠ ದಾನ

ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು



ಮೈಸೂರು, ಜು. 24– ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ಕೇಂದ್ರದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ರಕ್ತದಾನದ ಜಾಗೃತಿಯ ಕರಪತ್ರಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಸಕಾಲದಲ್ಲಿ ರಕ್ತದಾನ ಮಾಡುವುದರಿಂದ ಸಾಮಾನ್ಯ ಮನುಷ್ಯರಿಗೂ ಇತರರ ಜೀವ ಉಳಿಸಲು ಸಾಧ್ಯವಿದೆ. ಕಾಲ ಕಾಲಕ್ಕೆ ನಿಯಮಿತವಾಗಿ ರಕ್ತದಾನ ಮಾಡುವುದರಿಂದ ಜೀವ ಉಳಿಸಿದ ಸಾರ್ಥಕತೆಯ ಜೊತೆಗೆ ನಮ್ಮ ಆರೋಗ್ಯವೂ ವೃದ್ಧಿಸುತ್ತದೆ. ರಕ್ತವನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲದ ಕಾರಣ ರಕ್ತ ದಾನಿಗಳಿಂದಲೇ ರಕ್ತದ ಪೂರೈಕೆ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ರಕ್ತದಾನ ಮಾಡಿ ಜೀವ ಉಳಿಸುವ ಪುಣ್ಯ ಕಾರ್ಯದಲ್ಲಿ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ರಕ್ತದಾನ ಮಾಡಲು ದೊಡ್ಡ ಮನಸ್ಸಿದ್ದರೆ ಸಾಕು, ಇತರರ ನೋವು ನಲಿವು, ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುವ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ನಿರಂತರ ರಕ್ತದಾನ ಮಾಡಿದಲ್ಲಿ ಸಮಾಜದ ಸ್ವಾಸ್ಥ್ಯವು ವೃದ್ಧಿಸುತ್ತದೆ ಎಂದು ರಕ್ತದಾನದ ಮಹತ್ವದ ಬಗ್ಗೆ ಹೇಳಿದರು. ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ ರಶ್ಮಿ ನಿಶಾಂತ್, ಮಮತಾ, ಕೇಬಲ್ ವಿಜಿ, ಸೂರಜ್, ಸದಾಶಿವ, ಚಂದ್ರು, ಸತೀಶ್, ಪ್ರಭು, ಮೇಘಶ್ರೀ ಹಾಗೂ ಇನ್ನಿತರರು ಹಾಜರಿದ್ದರು.


ಧ್ವನಿ ಇಲ್ಲದವರಿಗೆ ಧ್ವನಿ ನೀಡುವುದೇ ಪತ್ರಿಕಾ ಧರ್ಮ

● ಸಿಎಂ ಸಿದ್ದರಾಮಯ್ಯ ಪ್ರತಿಪಾದನೆ ● ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾ ದಿನಾಚರಣೆ, ವಿಚಾರ ಸಂಕಿರಣದಲ್ಲಿ ಭಾಗಿ ● ಸರ್ಕಾರದ ಬಡವರ ಪರವಾದ ಯೋಜನೆಗಳು ಅವರಿಗೆ ತಲುಪಲು ಸಹಕರಿಸಿ

ಬೆಂಗಳೂರು, ಜು. 24(ಕೆಎಂಶಿ)– ಮಹಾತ್ಮ ಗಾಂಧಿ, ಅಂಬೇಡ್ಕರ್ ಅವರೂ ಪತ್ರಕರ್ತರಾಗಿ ಪತ್ರಿಕಾ ವೃತ್ತಿಗೆ ಮಾದರಿ ರೂಪಿಸಿಕೊಟ್ಟಿದ್ದಾರೆ. ಧ್ವನಿ ಇಲ್ಲದವರಿಗೆ ಧ್ವನಿ ನೀಡುವುದೇ ಪತ್ರಿಕಾ ವೃತ್ತಿಯ ಉದ್ದೇಶ, ಆಶಯ, ಜವಾಬ್ದಾರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಮತ್ತು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇವತ್ತಿನ ಬಹಳಷ್ಟು ಪತ್ರಕರ್ತರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎನ್ನುವುದು ನನ್ನ ಭಾವನೆ. ಪತ್ರಿಕಾ ವೃತ್ತಿಯ ಆಶಯಕ್ಕೆ ತಕ್ಕಂತೆ ಇದ್ದೇವಾ, ಇಲ್ಲವಾ ಎನ್ನುವ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯ ಇದೆ ಎಂದರು.

ಸಮಾಜದಲ್ಲಿ ಇನ್ನೂ ಶೇ.25 ರಷ್ಟು ಮಂದಿಗೆ ಶಿಕ್ಷಣ ಸಿಕ್ಕಿಲ್ಲ. ಆರ್ಥಿಕ ಅಸಮಾನತೆ ಇನ್ನೂ ಹೆಚ್ಚಾಗಿದೆ. ಹೀಗಾಗಿ ಅವಕಾಶ ವಂಚಿತರನ್ನು ಮುಖ್ಯವಾಹಿನಿಗೆ ತರುವ, ಸಮಾಜದ ಎಲ್ಲರಿಗೂ ನ್ಯಾಯ ದೊರಕಿಸಿಕೊಡುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದ್ದೇವೆ. ಸಾಮಾಜಿಕ ಅಸಮಾನತೆ ಹಿಂದಿನಿಂದ ಸಾಂಪ್ರ ದಾಯಿಕವಾಗಿ ನಡೆದುಕೊಂಡು ಬಂದಿದೆ. ಹೀಗಾಗಿ ಸಮಾಜದ ಬಹುಪಾಲು ಮಂದಿ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಮತ್ತು ತಾರತಮ್ಯಕ್ಕೆ ಬಲಿಯಾಗಿದ್ದಾರೆ. ಇದಕ್ಕಾಗಿಯೇ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ಅನುಷ್ಠಾನಗೊಳ್ಳುವ ಹಿಂದಿನ ದಿನ ತಾವು ಮಾಡಿದ ಐತಿಹಾಸಿಕ ಭಾಷಣದಲ್ಲಿ, "ಆರ್ಥಿಕ–ಸಾಮಾಜಿಕ ಸ್ವಾತಂತ್ರ್ಯ ಸಿಗದೆ ಕೇವಲ ದೇಶಕ್ಕೆ ಆಡಳಿತಾತ್ಮಕ, ರಾಜಕೀಯ ಸ್ವಾತಂತ್ರ್ಯ ಸಿಕ್ಕರೆ ಅಸಮಾನತೆಗೆ ಬಲಿಯಾದ ಜನ ಮುಂದೊಂದು ದಿನ ಈ ಸ್ವಾತಂತ್ರ್ಯ ಸೌಧವನ್ನು ಧ್ವಂಸ ಮಾಡಿಬಿಡಬಹುದು" ಎಂದಿದ್ದರು. ದುಡಿಯುವ ವರ್ಗಗಳು ಹಸಿವಿನಿಂದ ಮಲಗಿದರೂ ಪರ್ವಾಗಿಲ್ಲ, ಅನ್ನಭಾಗ್ಯ ಮಾತ್ರ ಜಾರಿ ಮಾಡಬಾರದು ಎನ್ನುವ ಹೊಟ್ಟೆ ತುಂಬಿದವರ ಮನಸ್ಥಿತಿ ಸಮಾಜ ವಿರೋಧಿಯಾದದ್ದು. ಜನರ ಜೇಬಿನಲ್ಲಿ ಹಣ ಇದ್ದರೆ ಮಾತ್ರ ದೇಶದ ಆರ್ಥಿಕತೆ ಬೆಳವಣಿಗೆ ಕಾಣುತ್ತದೆ. ಈ ಕಾರಣಕ್ಕೇ ನಮ್ಮ ಸರ್ಕಾರ ದುಡಿಯುವ ಜನರ ಜೇಬಿನಲ್ಲಿ ಹಣ ಇರುವ ಕಾರ್ಯಕ್ರಮಗಳನ್ನು ನೀಡಿದ್ದೇವೆ. ಇದನ್ನು ವಿರೋಧಿಸುವ ಬಿಜೆಪಿಯವರ ಮನಸ್ಥಿತಿ ಸಮಾಜ ವಿರೋಧಿಯಾದದ್ದು. ಹೀಗಾಗಿ ಪತ್ರಿಕಾ ವೃತ್ತಿಯಲ್ಲಿರುವವರು ಬಡವರ ಪರವಾದ, ಜನರ ಪರವಾದ ಯೋಜನೆಗಳು ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದರು.



ಬೆಂಗಳೂರು ಪ್ರೆಸ್‌ಕ್ಲಬ್ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಂಟಿಯಾಗಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಆರ್.ಪಿ. ಜಗದೀಶ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸನ್ಮಾನಿಸಿದರು.

ಮೈಸೂರಲ್ಲಿ ಅಕ್ಟೋಬರ್ 4ರಿಂದ ಪ್ರವಾಸೋದ್ಯಮ ಸಮಾವೇಶ

ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲರಿಗೆ ಆಹ್ವಾನ



ಮೈಸೂರು, ಜು.24(ಬಿಎಲ್‌ಯು)– ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಸ್ಕಾಲ್ ಇಂಡಿಯಾ ಕಾಂಗ್ರೆಸ್ 2023 (ಒಂದು ಟ್ರಾವೆಲ್ ಹಾಗೂ ಟೂರಿಸಂ ಸಂಘಟನೆ) ಸಮಾವೇಶ ಅಕ್ಟೋಬರ್ 4 ರಿಂದ ಎರಡು ದಿನಗಳ ಕಾಲ ನಡೆಯಲಿದೆ. ಈ ಸಂಬಂಧ ಮೈಸೂರಿನ ಟ್ರಾವೆಲ್ಸ್ ಅಸೋಸಿಯೇಷನ್‌ರವರು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರನ್ನು ಭೇಟಿ ಮಾಡಿ ಸಮಾವೇಶದ ಉದ್ಘಾಟನೆಗೆ ಆಹ್ವಾನಿಸಿದರು.

ಸ್ಕಾಲ್ ಇಂಡಿಯಾ ಕಾಂಗ್ರೆಸ್ ಸಮಾವೇಶದಲ್ಲಿ ದೇಶದ ವಿವಿಧ ರಾಜ್ಯಗಳ ಹೋಟೆಲ್ ಮಾಲೀಕರು, ಟ್ರಾವೆಲ್ಸ್ ಏಜೆಂಟ್‌ಗಳು ಭಾಗವಹಿಸಲಿದ್ದಾರೆ. ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಅಕ್ಟೋಬರ್ 4ರಂದು ಉದ್ಘಾಟನಾ ಸಮಾರಂಭ ನಡೆಯಲಿದೆ. ಮೈಸೂರಿನಲ್ಲಿ ಅಕ್ಟೋಬರ್ 4 ಮತ್ತು 5 ರಂದು ಎರಡು ದಿನಗಳ ಸಮಾವೇಶ ಮುಗಿದ ನಂತರ ಅಕ್ಟೋಬರ್ 7 ಮತ್ತು 8ರಂದು ಬೆಂಗಳೂರಿನಲ್ಲಿ ಸಮಾವೇಶ ಸಮಾರೋಪ ಸಮಾರಂಭ ನಡೆಯಲಿದೆ. ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಈ ಸಮಾವೇಶ ನಡೆಯುತ್ತಿದ್ದು, ಒಂದು ಕೋಟಿ ರೂಪಾಯಿ ತನಕ ವೆಚ್ಚವಾಗಲಿದೆ. ಇದಕ್ಕೆ ಸರ್ಕಾರದ ಅನುದಾನ ನೀಡುವಂತೆ ಹೆಚ್.ಕೆ.ಪಾಟೀಲ್ ಅವರಲ್ಲಿ ಮನವಿ ಮಾಡಿದ್ದೇವೆ ಎಂದು ಫೆಡರೇಶನ್ ಆಫ್ ಆರ್ಗನೈಸೇಷನ್ ಅಂಡ್ ಅಸೋಸಿಯೇಷನ್ ಆಫ್ ಮೈಸೂರ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ತಿಳಿಸಿದರು. ನಮ್ಮ ಮನವಿಗೆ ಸಚಿವರು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಮಾವೇಶದ ಉದ್ಘಾಟನೆಗೆ ಆಗಮಿಸುವುದಾಗಿ ಭರವಸೆ ನೀಡಿದ್ದಾರೆ. ಈ ಸಮಾವೇಶದಲ್ಲಿ ಮೈಸೂರು ಮಾತ್ರವಲ್ಲದೆ ಕರ್ನಾಟಕದ ಪ್ರವಾಸೋದ್ಯಮದ ಅಭಿವೃದ್ಧಿ ಬಗ್ಗೆ ಹಲವು ವಿಚಾರ ಸಂಕಿರಣಗಳು ನಡೆಯಲಿವೆ ಎಂದು ಹೇಳಿದರು. ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಸಿ.ಎ.ಜಯಕುಮಾರ್, ಮಾಜಿ ಶಾಸಕರಾದ ವಾಸು ಈ ವೇಳೆ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮಂಗಳವಾರ 25 ಜುಲೈ 2023

ಮನ್‌ಮುಲ್ 'ಕೈ' ವಶ: ಬೋರೇಗೌಡ ಅಧ್ಯಕ್ಷ

ಮಂಡ್ಯ, ಜು.24– ಮಂಡ್ಯ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ (ಮನ್‌ಮುಲ್) ಕಾಂಗ್ರೆಸ್ ಪಾಲಾಗಿದ್ದು, ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ನಿರ್ದೇಶಕ ಬೋರೇಗೌಡ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಜೆಡಿಎಸ್‌ನ ರಾಮಚಂದ್ರ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಜು.6ರಂದು ಚುನಾವಣೆ ನಿಗದಿಯಾಗಿತ್ತು. ಈ ವೇಳೆ ಸಭೆ ಕೋರಂ ಅಭಾವದಿಂದ ಚುನಾವಣೆ ಮುಂದೂಡಲ್ಪಟ್ಟಿತ್ತು. ಅಂದಿನ ಚುನಾವಣಾ ಪ್ರಕ್ರಿಯೆಗೆ ಹಾಜರಾಗಿದ್ದ ಚುನಾವಣಾಧಿಕಾರಿ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಅವರಿಗೆ ಕಾಂಗ್ರೆಸ್ ನಿರ್ದೇಶಕ ಬೋರೇಗೌಡ ಹಾಗೂ ಜೆಡಿಎಸ್ ನಿರ್ದೇಶಕರಾದ ರಘುನಂದನ್, ನಲ್ಲಿಗೆರೆ ಬಾಲು, ಶಾಸಕ ಹೆಚ್.ಟಿ. ಮಂಜು ನಾಮಪತ್ರ ಸಲ್ಲಿಸಿದ್ದರು.



ನಾನು ಅಧ್ಯಕ್ಷನಾಗಿ ಆಯ್ಕೆಯಾಗಲು ಕಾರಣರಾದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಪಕ್ಷದ ಶಾಸಕರಿಗೆ, ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸುವೆ. ಸಹಕಾರ ಸಂಘದ ಶ್ರೇಯೋಭಿವೃದ್ಧಿಗೆ ಎಲ್ಲಾ ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶ್ರದ್ಧೆ, ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುವೆ. - ಬೋರೇಗೌಡ, ನೂತನ ಅಧ್ಯಕ್ಷ.

ಸೋಮವಾರ ನಡೆದ ಚುನಾವಣೆ ವೇಳೆ ನಾಮಪತ್ರ ಸಲ್ಲಿಸಿದ್ದ ಕಾಂಗ್ರೆಸ್ ನಿರ್ದೇಶಕ ಬೋರೇಗೌಡ ಹಾಗೂ ಜೆಡಿಎಸ್ ನಿರ್ದೇಶಕರಾದ ಶಾಸಕ ಹೆಚ್.ಟಿ.ಮಂಜು, ನಲ್ಲಿಗೆರೆ ಬಾಲು ಹಾಗೂ ರಘುನಂದನ್ ಕಣದಲ್ಲಿದ್ದರು. ಚುನಾವಣಾ ಪ್ರಕ್ರಿಯೆ ವೇಳೆ ಕಾಂಗ್ರೆಸ್ ಅಭ್ಯರ್ಥಿ ಬೋರೇಗೌಡ ಪರ ಸದಸ್ಯರಾದ ಯು.ಸಿ.ಶಿವಕುಮಾರ್, ಡಾಲು ರವಿ, ಕೆ.ರಾಮಚಂದ್ರು ಮತ್ತು ನಾಮನಿರ್ದೇಶಿತ ಸದಸ್ಯ ಕದಲೂರು ರಾಮಕೃಷ್ಣ, ಮತಹಕ್ಕುವುಳ್ಳ ವಿವಿಧ ಇಲಾಖೆಯ 3 ಅಧಿಕಾರಿಗಳು ಸೇರಿದಂತೆ ಬಿಜೆಪಿ ಬೆಂಬಲಿತ ಸದಸ್ಯ ಎಸ್.ಪಿ. ಸ್ವಾಮಿ ಒಳಗೊಂಡಂತೆ 9 ಮಂದಿ ಮತ ಚಲಾಯಿಸಿದರು. ಅದರಂತೆ ಬೋರೇಗೌಡ ನೂತನ ಅಧ್ಯಕ್ಷರಾಗಿ ಆಯ್ಕೆಯಾದರು.

ಜೆಡಿಎಸ್ ಬೆಂಬಲಿತ 6 ನಿರ್ದೇಶಕರು ಸೇರಿದಂತೆ ಮತ್ತೋರ್ವ ಬಿಜೆಪಿ ಬೆಂಬಲಿತ ನಿರ್ದೇಶಕಿ ರೂಪ ಚುನಾವಣಾ ಪ್ರಕ್ರಿಯೆಯಿಂದ ಹೊರಗುಳಿದರು.

ಜು.6ರಂದು ನಡೆದ ಚುನಾವಣೆ ವೇಳೆ ಜೆಡಿಎಸ್ ನಿರ್ದೇಶಕರಾದ ಬಿ.ಆರ್.ರಾಮಚಂದ್ರ ಮತ್ತು ವಿಶ್ವನಾಥ್ ಅವರನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರ ನ್ಯಾಯಾಲಯ ಅನರ್ಹಗೊಳಿಸುವ ಜೊತೆಗೆ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದಂತೆ ನಿರ್ಬಂಧ ವಿಧಿಸಿ ಆದೇಶಿಸಿತ್ತು. ನಂತರ ಸಂಜೆ ವಾಪಸ್ ಪಡೆದಿತ್ತು. ಅದರಂತೆ ಸೋಮವಾರ ನಡೆದ ಚುನಾವಣೆ ವೇಳೆ ಇಬ್ಬರು ನಿರ್ದೇಶಕರನ್ನು ಅನರ್ಹಗೊಳಿಸಿತು.

ಚುನಾವಣಾಧಿಕಾರಿಯಾಗಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಕಾರ್ಯ ನಿರ್ವಹಿಸಿದರು. ಮಳವಳ್ಳಿ ಡಿವೈಎಸ್‌ಪಿ ನವೀನ್ ಕುಮಾರ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಈ ವೇಳೆ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗೀಗೌಡ, ಮನ್‌ಮುಲ್ ನಿರ್ದೇಶಕರು ಹಾಜರಿದ್ದರು.

ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣ ಸಿಬಿಐ ತನಿಖೆಯಾಗಲಿ

ತಪ್ಪಿತಸ್ಥನಾದರೆ ನಾನು ಜೈಲಿಗೆ ಹೋಗಲು ಸಿದ್ಧ: ಸುರೇಶ್‌ಗೌಡ ಸವಾಲು

ಮಂಡ್ಯ, ಜು.24– ಚಾಲಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣದಲ್ಲಿ ಸಿಐಡಿ ಮನ ಬಂದಂತೆ ವರದಿ ನೀಡಿದೆ. ಹೀಗಾಗಿ ಆ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಲು ರಾಜ್ಯ ಸರ್ಕಾರ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲಿ. ಪ್ರಕರಣದಲ್ಲಿ ನನ್ನ ತಪ್ಪಿದ್ದರೆ ನಾನು ಜೈಲಿಗೆ ಹೋಗಲು ಸಿದ್ಧ ಎಂದು ಮಾಜಿ ಶಾಸಕ ಕೆ.ಸುರೇಶ್‌ಗೌಡ ಸವಾಲು ಹಾಕಿದರು.



ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಬಗ್ಗೆ ಚಲುವರಾಯಸ್ವಾಮಿ ಪದೇ ಪದೆ ಹಗುರವಾಗಿ ಮಾತನಾಡುತ್ತಿದ್ದು, ಇದಕ್ಕೆ ಮುಂದಿನ ದಿನಗಳಲ್ಲಿ ಉತ್ತರಿಸುವೆ. ನಾಗಮಂಗಲದ ಜನ ಸಚಿವರಿಗೆ ಮತ ಹಾಕಿ ಇಂದು ಪಶ್ಚಾತ್ತಾಪ ಪಡುತ್ತಿದ್ದಾರೆ. ವಿನಾಕಾರಣ ಪ್ರಕರಣದಲ್ಲಿ ನನ್ನನ್ನು ಸಿಲುಕಿಸಲು ಭಾರೀ ಪ್ರಯತ್ನ ಪಡುತ್ತಿದ್ದು, ಚಲುವರಾಯಸ್ವಾಮಿ ಕುತಂತ್ರ ಕ್ಷೇತ್ರದ ಜನರಿಗೆ ಗೊತ್ತಿದೆ ಎಂದು ಕಿಡಿಕಾರಿದರು.

ಚಲುವರಾಯಸ್ವಾಮಿ ನಾನು ಮಂಜೂರು ಮಾಡಿಸಿದ ಎಲ್ಲಾ ಯೋಜನೆಗಳನ್ನು ನಿಲ್ಲಿಸಿದ್ದಾರೆ. ಗುತ್ತಿಗೆದಾರರಿಗೆ ಕಮಿಷನ್ ಹಣ ನೀಡುವಂತೆ ದುಂಬಾಲು ಬಿದ್ದಿದ್ದು, ಜನರು ಎರಡೇ ತಿಂಗಳಿಗೆ ರೋಸಿ ಹೋಗಿದ್ದಾರೆ. ಶೀಘ್ರ ಚಲುವರಾಯಸ್ವಾಮಿ ಬಂಡವಾಳ ಬಯಲು ಮಾಡುವೆ. ನಾಗಮಂಗಲದಲ್ಲಿ ಭ್ರಷ್ಟಾಚಾರ, ದಬ್ಬಾಳಿಕೆ ತಾಂಡವವಾಡುತ್ತಿದೆ ಎಂದು ಆರೋಪಿಸಿದರು.

ಮನ್‌ಮುಲ್‌ನಲ್ಲಿ ಅಧಿಕಾರ ಹಿಡಿಯಲು ಜೆಡಿಎಸ್‌ನ ಇಬ್ಬರು ನಿರ್ದೇಶಕರನ್ನು ಅನರ್ಹಗೊಳಿಸಿ, ಬಿಜೆಪಿ ಜೊತೆ ಕೈ ಜೋಡಿಸಿದ್ದಾರೆ. ಕಾಂಗ್ರೆಸ್‌ಗೆ ಸಂವಿಧಾನ, ಕಾನೂನಿನ ಮೇಲೆ ನಂಬಿಕೆ ಇಲ್ಲ. ಅವರಿಗೆ ಬೇಕಾಗಿರುವುದು ಕೇವಲ ಅಧಿಕಾರ. ಇದಕ್ಕೆಲ್ಲಾ ರೂವಾರಿ ಎನ್.ಚಲುವರಾಯಸ್ವಾಮಿ ಆಗಿದ್ದು, ಮುಂದಿನ ದಿನಗಳಲ್ಲಿ ಅವರಿಗೆ ಜನ ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಸಚಿವ ಎನ್.ಚಲುವರಾಯಸ್ವಾಮಿ ಜಿಲ್ಲೆಯ ಕಾಂಗ್ರೆಸ್ ಶಾಸಕರನ್ನು ನೆಮ್ಮದಿಯಿಂದ ಇರಲು ಬಿಡುತ್ತಿಲ್ಲ. ಪ್ರತಿ ತಾಲೂಕಿನಲ್ಲೂ ಹಸ್ತಕ್ಷೇಪ ಮಾಡುತ್ತಿದ್ದು, ಇದರಿಂದ ಎಲ್ಲಾ ಕಾಂಗ್ರೆಸ್ ಶಾಸಕರು ರೋಸಿ ಹೋಗಿದ್ದಾರೆ. ಸಚಿವರು ಶಾಸಕರನ್ನು ಕಡೆಗಣಿಸಿ ತಾವೇ ಲೆಟರ್‌ಹೆಡ್ ನೀಡುತ್ತಿದ್ದು, ಶಾಸಕರ ಗಮನಕ್ಕೆ ತರದೇ ಅಧಿಕಾರಿಗಳ ವರ್ಗಾವಣೆ ಮಾಡುತ್ತಿದ್ದಾರೆ ಎಂದರು.

ಮದ್ದೂರಿನಲ್ಲಿ ಶಾಸಕ ಕೆ.ಎಂ.ಉದಯ್ ಗಮನಕ್ಕೆ ಬರದೇ ಪಿಡಿಓಗಳ ವರ್ಗಾವಣೆ ನಡೆಯುತ್ತಿದೆ. ಅವರ ವಿರುದ್ಧ ಸ್ಪರ್ಧಿಸಿದ್ದ ಬಿಜೆಪಿಯ ಎಸ್.ಪಿ.ಸ್ವಾಮಿ ಅವರನ್ನು ಮನ್‌ಮುಲ್ ಚುನಾವಣೆಯಲ್ಲಿ ಬಳಸಿಕೊಂಡಿದ್ದಾರೆ. ಇದರಿಂದ ಉದಯ್ ಬೇಸರಗೊಂಡಿದ್ದಾರೆ. ಇದು ಉದಯ್ ಒಬ್ಬರ ಪ್ರಶ್ನೆಯಲ್ಲ. ಜಿಲ್ಲೆಯ ಎಲ್ಲಾ ಶಾಸಕರು ಅವರ ವಿರುದ್ಧ ಬಹಿರಂಗವಾಗಿ ಶೀಘ್ರ ತಿರುಗಿ ಬೀಳಲಿದ್ದಾರೆ. ಅವರೊಂದಿಗೆ ಜಿಲ್ಲೆಯ ಓರ್ವ ಶಾಸಕ ಮಾತ್ರ ಜೊತೆಯಲ್ಲಿದ್ದು, ಇನ್ಯಾರು ಸಹ ಚಲುವರಾಯಸ್ವಾಮಿ ಜೊತೆಯಲ್ಲಿಲ್ಲ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್, ನಿರ್ದೇಶಕರಾದ ಬಿ.ಆರ್.ರಾಮಚಂದ್ರ, ಕೆ.ಎಂ.ವಿಶ್ವನಾಥ್, ನೆಲ್ಲಿಗೆರೆ ಬಾಲು, ಕೋಟಿ ರವಿ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್ ಉಪಸ್ಥಿತರಿದ್ದರು.

ಪಿಎಲ್‌ಡಿ ಬ್ಯಾಂಕ್‌ಗೆ ಗೌರಮ್ಮ ಪ್ರಭಾರ ಅಧ್ಯಕ್ಷೆ



ಪಾಂಡವಪುರ, ಜು.24– ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಪ್ರಭಾರ ಅಧ್ಯಕ್ಷೆಯಾಗಿ ಉಪಾಧ್ಯಕ್ಷೆ ಗೌರಮ್ಮ ಸೋಮವಾರ ಅಧಿಕಾರ ಸ್ವೀಕರಿಸಿದರು. ಅಧ್ಯಕ್ಷ ಸ್ಥಾನಕ್ಕೆ ಎಂ.ಸಿ. ಯಶವಂತ್ ಕುಮಾರ್ ರಾಜೀನಾಮೆ ನೀಡಿದ್ದರಿಂದ ಎಲ್ಲಾ ನಿರ್ದೇಶಕರು ಸೇರಿ ಅಧ್ಯಕ್ಷರ ಚುನಾವಣೆಗೆ ದಿನಾಂಕ ನಿಗದಿಯಾಗುವ ತನಕ ಉಪಾಧ್ಯಕ್ಷೆ ಗೌರಮ್ಮ ಅವರನ್ನು ಪ್ರಭಾರ ಅಧ್ಯಕ್ಷರನ್ನಾಗಿ ಮಾಡಿದರು.

ಮಾಜಿ ಅಧ್ಯಕ್ಷ ಎಂ.ಸಿ.ಯಶವಂತ್ ಕುಮಾರ್ ಮಾತನಾಡಿ, ನಮ್ಮ ನಾಯಕ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆಶೀರ್ವಾದ ಹಾಗೂ ಎಲ್ಲಾ ನಿರ್ದೇಶಕರ ಸಹಕಾರದಿಂದ ಇಲ್ಲಿವರೆಗೆ ಅಧ್ಯಕ್ಷನಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದೇನೆ. ಸಾಲ ವಸೂಲಿಯಲ್ಲಿ ಕೊನೆ ಸ್ಥಾನದಲ್ಲಿದ್ದ ಪಿಎಲ್‌ಡಿ ಬ್ಯಾಂಕ್ ಅನ್ನು ಜಿಲ್ಲೆಗೆ 4ನೇ ಸ್ಥಾನಕ್ಕೆ ತಂದಿದ್ದೇನೆ. ಜೊತೆಗೆ 4 ಕೋಟಿ ಹೊಸ ಸಾಲವನ್ನು ರೈತರಿಗೆ ನೀಡಿದ್ದೇವೆ. ಆಡಳಿತ ನಡೆಸಲು ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಈ ವೇಳೆ ಮಾಜಿ ಅಧ್ಯಕ್ಷರಾದ ಸಿ.ಪ್ರಕಾಶ್, ಡಿ.ಎನ್.ಸೋಮಶೇಖರ್, ರತ್ನಮ್ಮ, ನಿರ್ದೇಶಕರಾದ ಶಿವಣ್ಣ, ಎನ್.ಮುರುಳಿ, ಎಚ್.ಎನ್. ದಯಾನಂದ್, ನಾಗಶೆಟ್ಟಿ, ನರೇಂದ್ರಬಾಬು .ಬಿ, ನಾಗೇಗೌಡ, ಎಂ.ಚನ್ನಯ್ಯ, ಕೆ.ಎಂ.ಗುರುರಾಜ್, ಕಾರ್ಯದರ್ಶಿ ಹುಚ್ಚೇಗೌಡ, ಸಿಬ್ಬಂದಿಗಳಾದ ಪುನೀತ್, ಸಂಪತ್‌ಕುಮಾರ್ ಇದ್ದರು.

ಇಬ್ಬರು ನಿರ್ದೇಶಕರು ಅನರ್ಹ: ಜೆಡಿಎಸ್ ಪ್ರತಿಭಟನೆ

ಮಂಡ್ಯ, ಜು.24– ಮನ್‌ಮುಲ್ ಅಧ್ಯಕ್ಷ ಸ್ಥಾನದ ಚುನಾವಣೆ ಹಿನ್ನೆಲೆಯಲ್ಲಿ ಇಬ್ಬರು ಜೆಡಿಎಸ್ ನಿರ್ದೇಶಕರನ್ನು ಅನರ್ಹಗೊಳಿಸಿದ ಕ್ರಮ ಖಂಡಿಸಿ ಜೆಡಿಎಸ್ ನಿರ್ದೇಶಕರು ಹಾಗೂ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.



ನಗರದ ಸಹಕಾರ ಸಂಘಗಳ ಸಹಾಯಕರ ನಿಬಂಧಕರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕಾಂಗ್ರೆಸ್ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಸರ್ಕಾರ ಮನ್‌ಮುಲ್‌ನಲ್ಲಿ ಅಧಿಕಾರ ಹಿಡಿಯಲು ವಾಮಮಾರ್ಗ ಅನುಸರಿಸಿದೆ. ಜು.6ರಂದು ನಡೆದ ಚುನಾವಣೆ ವೇಳೆ ಇಬ್ಬರು ನಿರ್ದೇಶಕರನ್ನು ಅನರ್ಹಗೊಳಿಸಿ ನಂತರ ಸಂಜೆ ವಾಪಸ್ ಪಡೆದಿತ್ತು. ಅದರಂತೆ ಇಂದೂ ಸಹ ಅದೇ ನಿರ್ದೇಶಕರನ್ನು ಅನರ್ಹಗೊಳಿಸಿ ಕುತಂತ್ರದಿಂದ ಅಧಿಕಾರ ಹಿಡಿದಿದೆ ಎಂದು ಕಿಡಿಕಾರಿದರು.

ಸರ್ಕಾರ ಹಾಗೂ ಸಚಿವ ಎನ್.ಚಲುವರಾಯಸ್ವಾಮಿ ಭ್ರಷ್ಟ ಅಧಿಕಾರಿಗಳನ್ನು ಮುಂದಿಟ್ಟುಕೊಂಡು ಇಬ್ಬರು ನಿರ್ದೇಶಕರನ್ನು ಅನರ್ಹಗೊಳಿಸುವ ಮೂಲಕ ಮನ್‌ಮುಲ್ ಅಧಿಕಾರ ಹಿಡಿದಿರುವ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಲಾಗುವುದು. ಇದರ ವಿರುದ್ಧ ಹೋರಾಟ ಮಾಡಲಾಗುವುದು. ಅಲ್ಲದೇ ಸಹಾಯಕ ನಿಬಂಧಕರು ಆಗಮಿಸಿ ಕಾರಣ ತಿಳಿಸುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಎಚ್ಚರಿಸಿದರು.

ಕಚೇರಿ ಮೇಲ್ವಿಚಾರಕಿಗೆ ತರಾಟೆ: ಪ್ರತಿಭಟನೆಗೂ ಮುನ್ನಾ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಗೆ ನುಗ್ಗಿದ ಜೆಡಿಎಸ್ ನಿರ್ದೇಶಕರು ಸಹಾಯಕ ನಿಬಂಧಕರಿಗೆ ತರಾಟೆ ತೆಗೆದುಕೊಳ್ಳಲು ಯತ್ನಿಸಿದರು. ಆದರೆ ಸಹಾಯಕ ನಿಬಂಧಕರು ಕಚೇರಿಯಲ್ಲಿ ಇರಲಿಲ್ಲ. ಇದರಿಂದ ಕೆರಳಿದ ನಿರ್ದೇಶಕರು ಮೇಲ್ವಿಚಾರಕಿ ಫಿಲೋಮಿನಾ ಅವರನ್ನು ತರಾಟೆಗೆ ತೆಗೆದುಕೊಂಡು ಕಾನೂನು ಪ್ರಕಾರ ಕೆಲಸ ಮಾಡುವುದನ್ನು ಬಿಟ್ಟು ಸರ್ಕಾರದ ಕೈಗೊಂಬೆಗಳಾಗಿದ್ದೀರಾ ಎಂದು ಕಿಡಿಕಾರಿದರು.

ಅನರ್ಹಗೊಳಿಸಬೇಕಾದರೆ ತಿಂಗಳ ಹಿಂದೆಯೇ ನೋಟಿಸ್ ನೀಡಬೇಕು. ಅದಕ್ಕೆ ಉತ್ತರ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಬೇಕು. ಅದನ್ನು ಬಿಟ್ಟು ಏಕಾಏಕಿ ಚುನಾವಣೆ ದಿನವೇ ಅನರ್ಹ ಮಾಡಿರುವುದು ನಿಮ್ಮ ಭ್ರಷ್ಟ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಸಹಾಯಕ ನಿಬಂಧಕರು ಸ್ಥಳಕ್ಕೆ ಬರುವವರೆಗೂ ಪ್ರತಿಭಟನೆ ನಡೆಸುತ್ತೇವೆ. ಕೂಡಲೇ ಅವರಿಗೆ ಕರೆ ಮಾಡಿ ಬರುವಂತೆ ತಿಳಿಸಬೇಕು ಎಂದು ಆಗ್ರಹಿಸಿದರು.

ಮಾತಿನ ಚಕಮಕಿ: ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಗೆ ನುಗ್ಗಲು ಯತ್ನಿಸಿದ ಪ್ರತಿಭಟನಾಕಾರರನ್ನು ಪೊಲೀಸರು ತಡೆದರು. ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ, ವಾಗ್ವಾದ ನಡೆಯಿತು.

ಪ್ರತಿಭಟನೆಯಲ್ಲಿ ಜೆಡಿಎಸ್ ನಿರ್ದೇಶಕ, ಶಾಸಕ ಹೆಚ್.ಟಿ. ಮಂಜು, ಎಂ.ಎಸ್.ರಘುನಂದನ್, ಬಿ.ಆರ್. ರಾಮಚಂದ್ರ, ವಿಶ್ವನಾಥ್, ನೆಲ್ಲಿಗೆರೆ ಬಾಲು, ರವಿ, ನಗರಸಭೆ ಸದಸ್ಯ ನಾಗೇಶ್, ಮುಖಂಡ ಬಿ.ಆರ್.ಸುರೇಶ್ ಮತ್ತಿತರರಿದ್ದರು.

ರೈತನ ಮೇಲೆ ಕಾಡಾನೆ ದಾಳಿ

ಹಲಗೂರು, ಜು.24– ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತನ ಮೇಲೆ ಕಾಡಾನೆ ದಾಳಿ ಮಾಡಿ ತೀವ್ರವಾಗಿ ಗಾಯಗೊಳಿಸಿರುವ ಘಟನೆ ಹಲಗೂರು ಸಮೀಪದ ದಳವಾಯಿ ಕೋಡಿಹಳ್ಳಿ ಗ್ರಾಮದಲ್ಲಿ ನಡೆದಿದೆ.

ಮಾದೇಗೌಡ ಎಂಬುವರೇ ಆನೆ ದಾಳಿಯಿಂದ ಗಾಯಗೊಂಡವರು. ಸೋಮವಾರ ಮುಂಜಾನೆ 6.30ರಲ್ಲಿ ತಮ್ಮ ಮನೆ ಹಿಂಭಾಗದ ಜಮೀನಿನಲ್ಲಿ ಸೀಮೆ ಹುಲ್ಲು ಕುಯ್ಯುತ್ತಿದ್ದ ವೇಳೆ ದಿಢೀರ್ ಪ್ರತ್ಯಕ್ಷವಾದ ಕಾಡಾನೆ ದಾಳಿ ನಡೆಸಿ ಗಾಯಗೊಳಿಸಿದೆ. ಇವರ ಚೀರಾಟ ಕೇಳಿ ಸ್ಥಳಕ್ಕೆ ಆಗಮಿಸಿದ ಗ್ರಾಮಸ್ಥರು ಜೋರಾಗಿ ಕೂಗಿ ಆನೆ ಓಡಿಸಲು ಯತ್ನಿಸಿದರು. ಈ ವೇಳೆ ಆನೆ ಮಾದೇಗೌಡನನ್ನು ಬಿಟ್ಟು ಜನರತ್ತ ನುಗ್ಗಿದ್ದು, ದಿಕ್ಕಾ ಪಾಲಾಗಿ ಓಡಿದ್ದಾರೆ. ಈ ವೇಳೆ ಆನೆ ಮಾದೇಗೌಡರ ಬೈಕ್ ಅನ್ನು ಜಖಂಗೊಳಿಸಿದ್ದು, ತೀವ್ರ ಗಾಯಗೊಂಡ ಮಾದೇಗೌಡರಿಗೆ ಪಟ್ಟಣದ ಸರ್ಕಾರಿಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಸ್ಥಳಕ್ಕೆ ಅರಣ್ಯಾಧಿಕಾರಿ ಹಾಗೂ ಹಲಗೂರು ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಗಾಯಾಳುವಿನ ಆರೋಗ್ಯ ವಿಚಾರಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	97.50 ಅಡಿ
ಒಳಹರಿವು	44436 ಕ್ಯುಸೆಕ್
ಹೊರಹರಿವು	5452 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಸೋಮವಾರ	2280.00 ಅಡಿ
ಒಳ ಹರಿವು	25000 ಕ್ಯುಸೆಕ್
ಹೊರ ಹರಿವು	15000 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶುಕ್ರವಾರ	2854.49 ಅಡಿ
ಒಳ ಹರಿವು	28120 ಕ್ಯುಸೆಕ್
ಹೊರ ಹರಿವು	30000 ಕ್ಯುಸೆಕ್

ಸಹಾಯಧನ

ಮಂಡ್ಯ, ಜು.24– ಮಧುವನ ಜೇನು ಸಾಕಾಣಿಕೆ ಯೋಜನೆಯಡಿ 2023–24ನೇ ಸಾಲಿನ ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ಜೇನು ಸಾಕಣೆ ಯೋಜನೆಯಡಿ ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್‌ಗಳನ್ನು ಖರೀದಿಸಿದ ಸಾಮಾನ್ಯ/ಇತರೆ ವರ್ಗದ ರೈತರಿಗೆ ಶೇ.75ರಷ್ಟು, ಪರಿಶಿಷ್ಟ ಜಾತಿ/ಪಂಗಡದ ರೈತರಿಗೆ ಶೇ.90 ಸಹಾಯಧನ ನೀಡಲಾಗುವುದು.

ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಅವರಿಗೆ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸುವುದು.

ದುಂಡಶೆಟ್ಟಿ ನಿಧನ

ಕೆ.ಆರ್.ಪೇಟೆ, ಜು.24– ತಾಲೂಕಿನ ಹೊಸಹೊಳಲು ಗ್ರಾಮದ ಕುರುಹಿನಶೆಟ್ಟಿ



ಸಮಾಜದ ಹಿರಿಯ ಮುಖಂಡರು ಹಾಗೂ ಪಟ್ಟಣದ ಟಿ.ಬಿ.ಸರ್ಕಲ್ ಶ್ರೀರಂಗ ಸ್ಟೋರ್ ಮಾಲೀಕ ದುಂಡಶೆಟ್ಟಿ (78) ಸೋಮವಾರ ನಿಧನರಾದರು. ಮೃತರು ಪತ್ನಿ, ಪುತ್ರರಾದ ವರದರಾಜು, ರವಿ ಮತ್ತು ಕೃಷ್ಣಮೂರ್ತಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಒಂದನೇ ಪುಟದಿಂದ

ಪತನಕ್ಕೆ ಸಿಂಗಾಪುರದಲ್ಲಿ ಸಂಚು

ಪರಿವಾರ ಸಮೇತ ಕುಮಾರಸ್ವಾಮಿ ಅವರು 10 ದಿನಗಳ ಕಾಲ ಲಂಡನ್ ಪ್ರವಾಸ ಕೈಗೊಂಡಿದ್ದಾರೆ. ಇದರ ಬೆನ್ನಲ್ಲೇ ಶಿವಕುಮಾರ್ ಹೇಳಿಕೆ ನೀಡಿದ್ದಾರೆ. ಮುಖ್ಯಮಂತ್ರಿ ಅವರು ಶಾಸಕಾಂಗ ಪಕ್ಷದ ಸಭೆ ಕರೆದು ಪಕ್ಷದ ಶಾಸಕರ ವಿಶ್ವಾಸ ಮತ್ತು ಒಗ್ಗಟ್ಟು ಪ್ರದರ್ಶಿಸಲು ಮುಂದಾಗಿದ್ದಾರೆ. ಕಳೆದ ಶಾಸಕಾಂಗ ಪಕ್ಷದ ಸಭೆಯಲ್ಲೇ ಸಚಿವ, ಶಾಸಕರಿಗೆ ಮುಖ್ಯಮಂತ್ರಿ ಅವರು ಎಚ್ಚರಿಕೆ ನೀಡಿ, ತಾವು ಸದಾ ಎಚ್ಚರದಿಂದಿರಿ ಎಂದಿದ್ದರು. ಇತ್ತೀಚಿನ ದಿನಗಳಲ್ಲಿ ನಿಮ್ಮನ್ನು ಒಂದಲ್ಲ ಒಂದು ಗಂಡಾಂತರದಲ್ಲಿ ಸಿಲುಕಿಸಲು ಮತ್ತು ಸರ್ಕಾರವನ್ನು ಅಸ್ಥಿರಗೊಳಿಸಲು ಇಲ್ಲವೆ ಕುಟುಕು ಕಾರ್ಯಾಚರಣೆ ನಡೆಸುತ್ತಾರೆ ಎಂಬ ಮಾಹಿತಿ ನನಗೆ ಇದೆ. ಈ ಬಗ್ಗೆ ಎಚ್ಚರದಿಂದ ಇರಿ ಎಂದು ಕಿವಿ ಮಾತು ಹೇಳಿದ್ದರು.

ಸಿಎಂ ಕುರ್ಚಿ ಅಲುಗಾಡಿಸುವ ಕೆಲಸ ಆಗುತ್ತಿದೆ

ಶಿವಕುಮಾರ್ ಹೇಳಬೇಕು ಎಂದರು. ಕಾಂಗ್ರೆಸ್‌ನವರೇ ಈ ಸರ್ಕಾರ ಬಹಳ ದಿನ ಇರುವುದಿಲ್ಲ ಅಂತಿದ್ದರು. ಯಾಕೋ ಕಾಂಗ್ರೆಸ್ಸಿಗರ ಹೇಳಿಕೆ ನಿಜವಾಗುವ ಹಾಗೆ ಕಾಣುತ್ತಿದೆ. ಸಿಂಗಾಪುರದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಏನೇನು ಮಾಡುತ್ತಿದ್ದಾರೆ, ಯಾವ ರೀತಿ ಸರ್ಕಾರ ಬೀಳಿಸುತ್ತಾರೆ ಅಂತಾ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಲಿ. ಅವರ ಸರ್ಕಾರವೇ ಇದೆ, ಇಂಟೆಲಿಜೆನ್ಸ್ ಇದೆ ಎಂದರು.

ಕಾಂಗ್ರೆಸ್ ಎಂಎಲ್‌ಸಿ ಬಿಕೆ ಹರಿಪ್ರಸಾದ್ ಅವರು ಸಿಎಂ ಆಯ್ಕೆ ಮಾಡುವುದು ಗೊತ್ತು, ಇಳಿಸೋದು ಗೊತ್ತು ಅಂತಾರೆ. ಡಿ.ಕೆ.ಶಿವಕುಮಾರ್ ಸಿಎಂ ಆಗುವುದನ್ನು ಈ ಮೂಲಕ ವ್ಯಕ್ತಪಡಿಸುತ್ತಿದ್ದಾರೆ ಅಷ್ಟೆ. ಆದರೆ ಬಿಜೆಪಿ ಈ ಸರ್ಕಾರ ಬೀಳಿಸುವ ಯಾವುದೇ ಪ್ರಯತ್ನ ಮಾಡುತ್ತಿಲ್ಲ. ನಾವು ಇಂತಹ ಆಲೋಚನೆ ಇಟ್ಟುಕೊಂಡಿಲ್ಲ. ರಾಜ್ಯದ ಜನರ ಆಶೀರ್ವಾದ ಪಡೆದೇ ಅಧಿಕಾರಕ್ಕೆ ಬರುತ್ತೇವೆ ಎಂದರು.

ಹೋಗು ವವರೆಲ್ಲರೂ ಹೋಗಿ: ತಮ್ಮ ಹೇಳಿಕೆಗೆ ಮತ್ತೆ ಸ್ಪಷ್ಟನೆ ನೀಡಿದ ಡಿಕೆ ಶಿವಕುಮಾರ್, ಹೋಗುವವರೆಲ್ಲರೂ ಹೋಗಿ ಅಲ್ಲೇ ಚರ್ಚೆ ಮಾಡಲಿ, ಪಕ್ಷದಲ್ಲಿ ಇರುವವರೆಲ್ಲಾ ಇಲ್ಲೇ ಚರ್ಚೆ ಮಾಡಲಿ ಎಂದು ಹೇಳಿ ಮತ್ತೆ ಕುತೂಹಲ ಕೆರಳಿಸಿದ್ದಾರೆ. ಎಲ್ಲೆಲ್ಲಿ ಏನೇನಾಗುತ್ತಿದೆ ಅಂತಾ ನಮಗೆ ಮಾಹಿತಿ ಇದೆ. ಎಲ್ಲವೂ ಚರ್ಚೆ ಆಗಬೇಕಲ್ವಾ ಎಂದರು.

ಕೊಡಗಲ್ಲಿ ಮಳೆ ಆರ್ಭಟ

ಸ್ಥಳದಲ್ಲಿ ಪೊಲೀಸರು ಬ್ಯಾರಿಕೇಡ್ ಅಳವಡಿಸಿ, ಒಂದು ಬದಿಯಲ್ಲಿ ಮಾತ್ರ ವಾಹನ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಿದ್ದಾರೆ. ಕಾವೇರಿ ನದಿ ಉಕ್ಕಿ ಹರಿಯುತ್ತಿದ್ದು, ನಾಪೋಕ್ಲು–ಮೂರ್ನಾಡು ಮುಖ್ಯ ರಸ್ತೆಯ ಕೊಟ್ಟಮುಡಿ ಜಂಕ್ಷನ್ ಬಳಿ ಜಲಾವೃತಗೊಂಡಿದೆ. ಚೆರಿಯಪರಂಬು, ಕಲ್ಲುಮೊಟ್ಟೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಾವೇರಿ ನದಿ ಪ್ರವಾಹ ಮತ್ತೆ ಹೆಚ್ಚಳವಾಗಿದ್ದು, ಗ್ರಾಮದ ಕಾವೇರಿ ನದಿ ದಂಡೆಯ ಪೈಸಾರಿಯಲ್ಲಿ ವಾಸಿಸುವ ಜನರಲ್ಲಿ ಪ್ರವಾಹದ ಭೀತಿ ಎದುರಾಗಿದೆ. ಸ್ಥಳೀಯ ಯುವಕರು ತೆಪ್ಪದ ಮೂಲಕ ಜನರನ್ನು ಕೊಂಡೊಯ್ಯುವ ದೃಶ್ಯ ಕಂಡು ಬಂದಿದೆ. ಸಮೀಪದ ಕೊಳಕೇರಿಯಿಂದ ಕೋಕೇರಿ ಗ್ರಾಮಕ್ಕೆ ತೆರಳುವ ಕುಪ್ಪೋಟು ಹೊಳೆ ತುಂಬಿ ಹರಿಯುತ್ತಿದ್ದು, ಕಕ್ಕಬ್ಬೆ ಕುಂಜಿಲ ಪೈನರಿ ದರ್ಗಾಕ್ಕೆ ಹೋಗುವ ರಸ್ತೆ ಜಲಾವೃತಗೊಂಡಿದೆ. ಎಮ್ಮೆಮಾಡು ಗ್ರಾಮದಿಂದ ಕೂರುಳಿ ಗ್ರಾಮಕ್ಕೆ ತೆರಳುವ ಸಂಪರ್ಕ ರಸ್ತೆ ಬದಿಯ ಗದ್ದೆಗಳಿಗೆ ನೀರು ನುಗ್ಗಿದೆ. ನಾಪೋಕ್ಲು ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಬ್ಯಾರಿಕೇಡ್ ಅಳವಡಿಸಿ ಜನ ಸಂಚರಿಸದಂತೆ ಕ್ರಮ ಕೈಗೊಂಡಿದ್ದಾರೆ.

ಕೆರೆ ಒಡೆದು ಹಾನಿ: ಮಡಿಕೇರಿ ತಾಲೂಕು ಮೇಘತ್ತಾಳು ಗ್ರಾಮದ ಐ.ಜಿ. ಕಾರ್ಯಪ್ಪ ಎಂಬವರ ತೋಟದ ಕೆರೆ ದಂಡೆ ಒಡೆದ ಪರಿಣಾಮ ಸಿ.ಸಿ. ಸೋಮಯ್ಯ ಎಂಬುವರ ಕಾಫಿ ತೋಟಕ್ಕೆ ಹಾನಿಯಾಗಿದೆ. ಮಾತ್ರವಲ್ಲದೇ ಕಲ್ಲು ಬಂಡೆಗಳು ಕೊಚ್ಚಿ ಬಂದ ಹಿನ್ನೆಲೆಯಲ್ಲಿ ಅಲ್ಲಿನ ರಸ್ತೆಗೂ ಹಾನಿಯಾಗಿದೆ. ಈ ಹಿನ್ನೆಲೆ ಸ್ಥಳೀಯ ಪಂಚಾಯಿತಿ ಅಧಿಕಾರಿಗಳು ಜೆಸಿಬಿ ಸಹಾಯದಿಂದ ತೊರೆಯಲ್ಲಿ ಬಂದಿರುವ ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಿದ್ದಾರೆ.

ಗ್ರಾಮಸ್ಥರ ನಿಟ್ಟುಸಿರು: ಕಳೆದ ಸಾಲಿನಲ್ಲಿ ಕೃತಕ ಪ್ರವಾಹಕ್ಕೆ ಕಾರಣವಾಗಿದ್ದ ಸಂಪಾಜೆಯ ಕಿಂಡಿ ಅಣೆಕಟ್ಟಿನಲ್ಲಿ ಈ ಬಾರಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡ ಹಿನ್ನೆಲೆ ಸರಾಗವಾಗಿ ನೀರು ಹರಿದು ಹೋಗುತ್ತಿದೆ. ಸಂಪಾಜೆ, ಕೊಯನಾಡು ಭಾಗದಲ್ಲಿ ಭಾರೀ ಮಳೆಯಾಗುತ್ತಿದ್ದು, ಸ್ಥಳೀಯ ಪಯಶ್ವಿನಿ ನದಿ ಉಕ್ಕಿ ಹರಿಯುತ್ತಿದೆ. ಆದರೆ ಕಿಂಡಿ ಅಣೆಕಟ್ಟೆಗೆ ಅಡ್ಡಲಾಗಿದ್ದ ಎಲ್ಲಾ ಮರದ ದಿಮ್ಮಿಗಳನ್ನು ಈ ಮೊದಲೇ ತೆರವು ಮಾಡಿದ್ದು, ಪ್ರವಾಹದ ಆತಂಕ ದೂರವಾಗಿ ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದಾರೆ.

ಜಿಲ್ಲೆಯ ಮಳೆ ವಿವರ: ಕಳೆದ 24 ಗಂಟೆಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 118.77 ಮಿ.ಮೀ ಮಳೆಯಾಗಿದೆ. ಮಡಿಕೇರಿ ಕಸಬಾ 158.6 ಮಿ.ಮೀ, ನಾಪೋಕ್ಲು 151, ಸಂಪಾಜೆ 186.5, ಭಾಗಮಂಡಲ 193.4 ಮಿ.ಮೀ ಮಳೆಯಾಗಿದೆ. ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ 91, ಹುದಿಕೇರಿ 87.6 ಅಮ್ಮತ್ತಿ 69.5 ಮಿ.ಮೀ ಮಳೆಯಾಗಿದ್ದರೆ, ಸೋಮವಾರಪೇಟೆ ಕಸಬಾ 134.2 ಮಿ.ಮೀ ಹಾಗೂ ಶಾಂತಳ್ಳಿ ವ್ಯಾಪ್ತಿಯಲ್ಲಿ ದಾಖಲೆಯ 215 ಮಿ.ಮೀ ಮಳೆಯಾಗಿದ್ದು, ಶನಿವಾರಸಂತೆ ವ್ಯಾಪ್ತಿಗೆ 89.6 ಮಿ.ಮೀ ಮಳೆ ಸುರಿದಿದೆ.

ವಿದ್ಯಾರ್ಥಿಗಳಿಂದ 25 ಲಕ್ಷ ರೂ ಗೂ ಅಧಿಕ ಶುಲ್ಕ ಸಂಗ್ರಹಿಸಿದ ಅಸಿಸ್ಟೆಂಟ್ ಪ್ರೊಫೆಸರ್ ನಾಪತ್ತೆ: ಎಟಿಎಂಇ ಕಾಲೇಜಲ್ಲಿ ಪ್ರಕರಣ ವರದಿ

ವರುಣ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲು

ಮೈಸೂರು, ಜು.24(ಎಂಕೆ)– ವಿದ್ಯಾರ್ಥಿಗಳಿಂದ ಸುಮಾರು 25 ಲಕ್ಷ ರೂ. ಕಾಲೇಜು ಶುಲ್ಕ ಸಂಗ್ರಹಿಸಿ ಅಸಿಸ್ಟೆಂಟ್ ಪ್ರೊಫೆಸರ್ ಪರಾರಿಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಹರ್ಷಿತ ಆರೋಪಕ್ಕೆ ಗುರಿಯಾದವರಾಗಿದ್ದು, ಇವರ ವಿರುದ್ಧ ವರುಣ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ಅಲ್ಲದೆ ಕಾಲೇಜು ಆಡಳಿತ ಮಂಡಳಿಯು ಇವರನ್ನು ಅಮಾನತುಗೊಳಿಸಿದೆ.

ವಿವರ: 2022–23ನೇ ಸಾಲಿನ ಕಾಲೇಜು ಶುಲ್ಕವನ್ನು ಕಳೆದ ಸೆಪ್ಟೆಂಬರ್‌ನಲ್ಲಿ ಪಾವತಿಸಬೇಕಾಗಿತ್ತು. ಈ ಸಂದರ್ಭದಲ್ಲಿ ಹರ್ಷಿತ ಅವರು, ಕಾಲೇಜು ಶುಲ್ಕವನ್ನು ತಮ್ಮ ಬಳಿಯೇ ಪಾವತಿಸಬೇಕೆಂದು ವಿದ್ಯಾರ್ಥಿಗಳನ್ನು ಕೇಳುತ್ತಿದ್ದು, ಅಲ್ಲದೆ ಆ ವಿಭಾಗದ ಇತರೆ ಪ್ರೊಫೆಸರ್‌ಗಳು ಕೂಡ ಹರ್ಷಿತ ಅವರ ಬಳಿಯೇ ಕಾಲೇಜು ಶುಲ್ಕ ಪಾವತಿಸಬೇಕೆಂದು ವಿದ್ಯಾರ್ಥಿಗಳ ಮೊಬೈಲ್‌ಗೆ ಸಂದೇಶ ಕಳುಹಿಸುತ್ತಿದ್ದರು. ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ಶುಲ್ಕವನ್ನು ನಗದು ಹಾಗೂ ಆನ್‌ಲೈನ್ ಮೂಲಕ ಹರ್ಷಿತ ಅವರಿಗೆ ಪಾವತಿಸಿದ್ದು, ಅದಕ್ಕೆ ಅವರು ರಸೀದಿಯನ್ನು ಕೂಡ ನೀಡಿದ್ದಾರೆ. ಆದರೆ ಡಿಸೆಂಬರ್ ತಿಂಗಳಿನಲ್ಲಿ ಅವರು ಸಂಗ್ರಹಿಸಿದ ತಲಾ 770 ರೂ. ಪರೀಕ್ಷಾ ಶುಲ್ಕಕ್ಕೆ ವಿದ್ಯಾರ್ಥಿಗಳಿಗೆ ರಸೀದಿ ನೀಡಿಲ್ಲ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿದ್ಯಾರ್ಥಿ ಎನ್.ನಿರಂಜನ್ ತಿಳಿಸಿದ್ದಾರೆ. ಹರ್ಷಿತ ಅವರು, ಶುಲ್ಕ ವಸೂಲಿ ಮಾಡಿ ಅದನ್ನು ಆಡಳಿತ ಮಂಡಳಿಗೆ ಪಾವತಿಸದೆ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಹೇಳಲಾಗಿತ್ತು. ಇದೀಗ ಕಾಲೇಜು ಆಡಳಿತ ಮಂಡಳಿಯು ಶುಲ್ಕ ಪಾವತಿಸುವಂತೆ ವಿದ್ಯಾರ್ಥಿಗಳನ್ನು ಒತ್ತಾಯಿಸುತ್ತಿದೆ. ಅಲ್ಲದೆ ಶುಲ್ಕ ಕಟ್ಟದಿದ್ದರೆ ಪರೀಕ್ಷೆ ಹಾಜರಾಗಲು ಅವಕಾಶ ನೀಡುವುದಿಲ್ಲ ಎಂದು ಹೇಳುತ್ತಿರುವುದಾಗಿ ದೂರಿನಲ್ಲಿ ತಿಳಿಸಿರುವ ವಿದ್ಯಾರ್ಥಿ, ನಮ್ಮಿಂದ ಹಣ ವಸೂಲಿ ಮಾಡಿ, ನಕಲಿ ರಸೀದಿಗಳನ್ನು ಹರ್ಷಿತ ಅವರು ನೀಡಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಸಂಬಂಧ ವರುಣ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 468, 471, 420 ರಡಿ ಪ್ರಕರಣ ದಾಖಲಿಸಿಕೊಂಡು ತಲೆಮರೆಸಿಕೊಂಡಿರುವ ಅಸಿಸ್ಟೆಂಟ್ ಪ್ರೊಫೆಸರ್ ಹರ್ಷಿತ ಅವರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

“ ವಿದ್ಯಾರ್ಥಿಗಳಿಗೆ ತೊಂದರೆಯಾಗಲ್ಲ...

ಅಸಿಸ್ಟೆಂಟ್ ಪ್ರೊಫೆಸರ್ ಹರ್ಷಿತ ಅವರು ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡಿದ್ದಾರೆ ಎಂಬ ವಿಷಯ ಗೊತ್ತಾಗುತ್ತಿದ್ದಂತೆಯೇ ಆಂತರಿಕ ವಿಚಾರಣೆ ನಡೆಸಿ, ಅವರನ್ನು ಅಮಾನತುಗೊಳಿಸಲಾಗಿದೆ. ನಮ್ಮ ಕಾಲೇಜಿನಲ್ಲಿ ಶುಲ್ಕ ವಸೂಲಿ ಮಾಡಲು ಜವಾಬ್ದಾರಿಯನ್ನು ಯಾರಿಗೂ ನೀಡಿಲ್ಲ. ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ನಮ್ಮ ಕಾಲೇಜಿನ ಬ್ಯಾಂಕ್ ಅಕೌಂಟ್ ನಂಬರ್ ಅನ್ನು ನೀಡಲಾಗಿದೆ. ವಿದ್ಯಾರ್ಥಿಗಳು ನೇರವಾಗಿ ನಮ್ಮ ಅಕೌಂಟ್‌ಗೆ ಶುಲ್ಕವನ್ನು ಕಟ್ಟಬಹುದು. ಅಲ್ಲದೆ ಕಾಲೇಜಿನಲ್ಲಿ ಅಕೌಂಟ್ಸ್ ವಿಭಾಗವಿದ್ದು, ಅಲ್ಲಿಯೂ ಕೂಡ ಶುಲ್ಕ ಪಾವತಿಸಬಹುದು. ಅದನ್ನು ಬಿಟ್ಟರೆ ಯಾವುದೇ ಪ್ರೊಫೆಸರ್‌ಗೂ ಶುಲ್ಕ ವಸೂಲಿ ಮಾಡುವ ಜವಾಬ್ದಾರಿ ನೀಡಿಲ್ಲ. ಶುಲ್ಕದ ಬಗ್ಗೆ ವಿದ್ಯಾರ್ಥಿಗಳ ಮೊಬೈಲ್ ಮತ್ತು ಇ–ಮೇಲ್‌ಗೆ ಸಂದೇಶ ರವಾನಿಸಲಾಗುತ್ತಿದೆ. ವಿದ್ಯಾರ್ಥಿಗಳು ಅನಧಿಕೃತವಾಗಿ ಹರ್ಷಿತ ಅವರ ಬಳಿ ಶುಲ್ಕ ಪಾವತಿಸಿದ್ದಾರೆ. ಈ ಸಂಬಂಧ ಆಂತರಿಕ ವಿಚಾರಣೆ ನಡೆಸಿದಾಗ ಹರ್ಷಿತ ಅವರು, ಯಾವ ಯಾವ ವಿದ್ಯಾರ್ಥಿ ಬಳಿ ಹಣ ಸಂಗ್ರಹಿಸಿದ್ದಾರೆ ಎಂಬುದರ ಬಗ್ಗೆ ಲಿಖಿತವಾಗಿ ನಮಗೆ ನೀಡಿದ್ದಾರೆ. ಅವರು, ಸುಮಾರು 25 ಲಕ್ಷ ರೂ.ಗಳನ್ನು ಸಂಗ್ರಹಿಸಿದ್ದಾರೆ. ಅವರ ವಿರುದ್ಧ ಪೊಲೀಸರಿಗೆ ಕಾಲೇಜು ಆಡಳಿತ ಮಂಡಳಿಯಿಂದ ದೂರು ಸಲ್ಲಿಸಲು ಮುಂದಾಗಿದ್ದೆವು. ಆದರೆ ಈ ಪ್ರಕರಣದಲ್ಲಿ ವಂಚನೆಗೊಳಗಾಗಿರುವುದು ವಿದ್ಯಾರ್ಥಿಗಳಾದ ಕಾರಣ ಅವರ ದೂರನ್ನು ಮಾತ್ರ ಪೊಲೀಸರು ದಾಖಲಿಸಿಕೊಂಡಿದ್ದಾರೆ. ಆದರೆ ನಮ್ಮ ಆಡಳಿತ ಮಂಡಳಿಯು ಹರ್ಷಿತ ಅವರ ಆಂತರಿಕ ವಿಚಾರಣೆ ವೇಳೆ ಲಿಖಿತವಾಗಿ ನೀಡಿರುವ ಹಣ ಸಂಗ್ರಹದ ವಿವರಗಳನ್ನು ಪೊಲೀಸರಿಗೆ ನೀಡಿದೆ. ಇದೀಗ ಹರ್ಷಿತ ಅವರು ನಮ್ಮ ಸಂಪರ್ಕಕ್ಕೆ ಸಿಗುತ್ತಿಲ್ಲ. ಪೊಲೀಸರು ಕೂಡ ಅವರನ್ನು ಹುಡುಕುತ್ತಿದ್ದಾರೆ. ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಅವರನ್ನು ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುತ್ತಿದೆ. ಈಗಾಗಲೇ ವಿದ್ಯಾರ್ಥಿಗಳು ಎರಡು ಪ್ರಾಕ್ಟಿಕಲ್ ಪರೀಕ್ಷೆಗಳನ್ನು ಬರೆದಿದ್ದಾರೆ.

– ಎಲ್.ಅರುಣ್‌ಕುಮಾರ್, ಛೇರ್ಮನ್ ಎಟಿಎಂಇ ಕಾಲೇಜು

ಮೈಸೂರು ಜಿಲ್ಲಾದ್ಯಂತ ದಟ್ಟ ಮೋಡ; ತುಂತುರು ಮಳೆ

ಮೈಸೂರು, ಜು.24(ಎಸ್‌ಬಿಡಿ)– ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಎರಡು ದಿನಗಳಿಂದ ಮುಂಗಾರು ಚುರುಕಾಗಿದೆ.



ಸೋಮವಾರ ಬೆಳಗ್ಗೆಯಿಂದಲೂ ದಟ್ಟ ಮೋಡ ಕವಿದಿತ್ತು. ಆಗಾಗ್ಗೆ ತುಂತುರು ಮಳೆಯಾಗಿತ್ತಾದರೂ ಮಧ್ಯಾಹ್ನದ ನಂತರ ಮಳೆ ಜೋರಾಯಿತು. ರಾತ್ರಿವರೆಗೂ ಸುರಿದ ಮಳೆಯಿಂದ ವಾತಾವರಣ ಮತ್ತಷ್ಟು ತಂಪಾಯಿತು. ಜಿಟಿಜಿಟಿ ಮಳೆಯಿಂದಾಗಿ ಬೀದಿಬದಿ ವ್ಯಾಪಾರಿಗಳಿಗೆ ತೊಂದರೆಯಾಯಿತು. ಮಳೆ ಮುನ್ಸೂಚನೆಯಿದ್ದ ಕಾರಣ ಅನೇಕರು ಛತ್ರಿ, ಜರ್ಕಿನ್‌ನೊಂದಿಗೆ ರಸ್ತೆಗಳಿದಿದ್ದರು. ಕೆಲವರು ಮಳೆಯಲ್ಲಿ ನೆನೆದುಕೊಂಡೆ ಸಾಗಿದರು.

ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಮಳೆಯಾಗುತ್ತಿದ್ದು, ರೈತರಲ್ಲಿ ಸಂತಸ ಮೂಡಿಸಿದೆ. ಬಿಡುವು ಕೊಡದೆ ತುಂತುರು ಮಳೆಯಾಗಿದ್ದರಿಂದ ಜಾನುವಾರುಗಳನ್ನು ಮೇಯಲು ಬಿಡಲಾಗದೆ ಕೊಟ್ಟಿಗೆಯಲ್ಲೇ ಕಟ್ಟಿ ಮೇವು ನೀಡಬೇಕಾಯ್ತು. ಹಲವು ದಿನಗಳಿಂದ ಮೋಡ ಕವಿಯುತ್ತಿದ್ದರೂ ಭಾರೀ ಗಾಳಿಯಿಂದ ಮಳೆಯಾಗಿರಲಿಲ್ಲ. ಎರಡು ದಿನಗಳಿಂದ ಮಳೆ ಬಿರುಸಾಗಿರುವುದರಿಂದ ಸದ್ಯ ಬರದ ಆತಂಕ ದೂರಾಗಿದೆ. ಬರ ಪೀಡಿತ ತಾಲೂಕು ಪಟ್ಟಿಯಲ್ಲಿರುತ್ತಿದ್ದ ಪಿರಿಯಾಪಟ್ಟಣದಲ್ಲಿ ಉತ್ತಮ ಮಳೆಯಾಗುತ್ತಿದೆ. ಭಾನುವಾರ ಮೈಸೂರು ತಾಲೂಕಿನಲ್ಲಿ 4.3 ಮಿ.ಮೀ., ನಂಜನಗೂಡು 7.3, ತಿ.ನರಸೀಪುರ 3.2, ಹುಣಸೂರು 3.8, ಕೆ.ಆರ್.ನಗರ 6, ಹೆಚ್.ಡಿ.ಕೋಟೆ 12.5 ಹಾಗೂ ಪಿರಿಯಾಪಟ್ಟಣ ತಾಲೂಕಿನಲ್ಲಿ 20.5 ಮಿ.ಮೀ. ಮಳೆಯಾಗಿದೆ ಎಂದು ಜಿಲ್ಲಾ ಕಂಟ್ರೋಲ್ ರೂಂ ಸಿಬ್ಬಂದಿ ತಿಳಿಸಿದ್ದಾರೆ.

ಪುರಾತತ್ವ ಇಲಾಖೆಗೆ ಹೆಚ್ಚಿನ ಅನುದಾನ ನೀಡುವಂತೆ ಸಚಿವರಲ್ಲಿ ಮನವಿ

ಮೈಸೂರು, ಜು.24(ಬಿಎಲ್‌ಯು)–ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಗೆ ಹೆಚ್ಚಿನ ಅನುದಾನ ನೀಡುವಂತೆ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಗುತ್ತಿಗೆ ದಾರರ ಸಂಘದವರು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು. ಇದೇ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ಅವರನ್ನು ಮೈಸೂರಿನ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್‌ನಲ್ಲಿ ಭೇಟಿ ಮಾಡಿದ ಸಂಘದ ಪದಾಧಿಕಾರಿಗಳು, ಇಲಾಖೆಗೆ ಹೆಚ್ಚಿನ ಅನುದಾನ ಇಲ್ಲದ ಕಾರಣ ಆಗುತ್ತಿರುವ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟರು.

ಇತ್ತೀಚಿನ ದಿನದಲ್ಲಿ ಪುರಾತತ್ವ ಇಲಾಖೆಗೆ ಬರುವ ಅನುದಾನ ಕಡಿಮೆಯಾಗುತ್ತಿದೆ. ಈ ಕಾರಣದಿಂದ ಸೂಕ್ತ ಸಮಯದಲ್ಲಿ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿ ಮಾಡಲು ಅನುದಾನದ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ಇಲಾಖೆಗೆ ಬರುವ ಅನುದಾನದ ಮೊತ್ತವನ್ನು ಹೆಚ್ಚಿಸಬೇಕು. ಈ ಮೂಲಕ ಇದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಶಿಲ್ಪಿಗಳು, ನುರಿತ ಕೆಲಸಗಾರರು ಸೇರಿದಂತೆ ಇತರೆ ವರ್ಗದವರಿಗೆ ಅನುಕೂಲ ಮಾಡಿಕೊಡ ಬೇಕೆಂದು ಮನವಿ ಮಾಡಿದರು. ಸಂಘದ ಅಧ್ಯಕ್ಷ ಟಿ.ಎಸ್.ರಾಮ ಚಂದ್ರ, ಪ್ರಧಾನ ಕಾರ್ಯದರ್ಶಿ ಪ್ರೇಮಚಂದ್ರ ಸೇರಿದಂತೆ ಇತರೆ ಪದಾಧಿ ಕಾರಿಗಳು ಈ ವೇಳೆ ಹಾಜರಿದ್ದರು.

ಮೈಸೂರು ಮಿತ್ರ ಮಂಗಳವಾರ 25 ಜುಲೈ 2023

ಹಾರಂಗಿ ಒಳಹರಿವಿನಲ್ಲಿ ಏರಿಳಿಕೆ



ಮಡಿಕೇರಿ, ಜು.24– ಹಾರಂಗಿ ಜಲಾಶಯದ ನದಿ ಮೂಲ ಪ್ರದೇಶಗಳಲ್ಲಿ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಹರಿದು ಬರುತ್ತಿರುವ ಒಳ ಹರಿವಿನ ಪ್ರಮಾಣದಲ್ಲಿ ಏರಿಳಿಕೆ ಕಂಡು ಬರುತ್ತಿದೆ. ಜಲಾಶಯದ ನದಿ ಪಾತ್ರದ ಮೂಲಕ ಕನ್ನಂಬಾಡಿ ಅಣೆಕಟ್ಟೆಗೆ ನೀರು ಹರಿಸಲಾಗುತ್ತಿದೆ. 2859 ಅಡಿ ನೀರು ಸಂಗ್ರಹ ಸಾಮರ್ಥ್ಯವಿರುವ ಹಾರಂಗಿ ಜಲಾಶಯದಲ್ಲಿ ಪ್ರಸ್ತುತ 2854.49 ಅಡಿಗಳಷ್ಟು ನೀರಿನ ಸಂಗ್ರಹವಿದೆ.

ನೀರು ಹರಿವಿಕೆಯಲ್ಲಿ ಏರಿಳಿಕೆ: ಸೋಮವಾರ ಬೆಳಗಿನ ಜಾವ 8 ಗಂಟೆ ಸಮಯದಲ್ಲಿ ಒಳಹರಿವಿನ ಪ್ರಮಾಣ 17,972 ಕ್ಯುಸೆಕ್ ದಾಖಲಾಗಿತ್ತು. 10 ಗಂಟೆ ಸಮಯದಲ್ಲಿ ಒಳ ಹರಿವು 12,944 ಕ್ಯುಸೆಕ್‌ಗೆ ಇಳಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಜಲಾಶಯದಲ್ಲಿ ಗರಿಷ್ಠ ನೀರಿನ ಪ್ರಮಾಣ ಕಾಯ್ದುಕೊಂಡು ನದಿ ಪಾತ್ರಕ್ಕೆ ಕೇವಲ 8 ಸಾವಿರ ಕ್ಯುಸೆಕ್ ನೀರನ್ನು ಮಾತ್ರವೇ ಹರಿಸಲಾಗುತ್ತಿತ್ತು. ಆದರೆ ಮಧ್ಯಾಹ್ನ 3 ಗಂಟೆಯ ವೇಳೆಗೆ ಜಲಾಶಯದ ಒಳ ಹರಿವಿನ ಪ್ರಮಾಣ 28,120 ಕ್ಯುಸೆಕ್‌ಗೆ ಗಣನೀಯವಾಗಿ ಏರಿಕೆ ಕಂಡಿದೆ. ಪರಿಣಾಮ ಮತ್ತೆ ಹೊರ ಹರಿವಿನ ಪ್ರಮಾಣವನ್ನು 30 ಸಾವಿರ ಕ್ಯುಸೆಕ್‌ಗೆ ಏರಿಕೆ ಮಾಡಲಾಗಿದೆ. ಒಳ ಹರಿವನ್ನು ಆಧರಿಸಿ ನದಿ ಪಾತ್ರಕ್ಕೆ ನೀರು ಹರಿಸಲಾಗುತ್ತಿದೆ ಎಂದು ಜಲಾಶಯದ ಅಧಿಕಾರಿಗಳು ತಿಳಿಸಿದ್ದಾರೆ.

ನಿವಾಸಿಗಳಿಗೆ ಮುನ್ಸೂಚನೆ: ಕೊಡಗು ಜಿಲ್ಲೆಯಲ್ಲಿ ಮತ್ತೆ ಧಾರಾಕಾರ ಮಳೆ ಮುಂದುವರೆಯುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಕುಶಾಲನಗರ ವ್ಯಾಪ್ತಿಯ ಕಾವೇರಿ ನದಿ ಪಾತ್ರದ ನಿವಾಸಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಹಾರಂಗಿ ಜಲಾಶಯದಿಂದ ಹೆಚ್ಚುವರಿ ನೀರು ಹರಿಸಲಾಗುತ್ತಿದ್ದು, ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಏರಿಕೆಯಾಗಲಿದೆ. ಇದರಿಂದ ಪ್ರವಾಹ ಉಂಟಾಗುವ ಸಾಧ್ಯತೆ ಇದ್ದು, ಕಾವೇರಿ ನದಿ ತೀರದ ನಿವಾಸಿಗಳು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಅಲ್ಲಿನ ಪಟ್ಟಣ ಪಂಚಾಯಿತಿ ಮೈಕ್ ಮೂಲಕ ಸಾರ್ವಜನಿಕರಿಗೆ ಎಚ್ಚರಿಕೆ ಸಂದೇಶ ನೀಡುತ್ತಿದೆ.

ತಮ್ಮನ ಕೊಂದ ಇಬ್ಬರು ಅಣ್ಣಂದಿರ ಬಂಧನ



ಮಡಿಕೇರಿ, ಜು.24– ತಮ್ಮನನ್ನು ಕೊಲೆಗೈದ ಆರೋಪದಲ್ಲಿ ಇಬ್ಬರು ಹಿರಿಯ ಸಹೋದರರನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

ಅವರೆಗುಂದ ಗಿರಿಜನ ಹಾಡಿ ನಿವಾಸಿಗಳಾದ ಸುರೇಶ(60) ಮತ್ತು ಶಿವಣ್ಣ(50) ಎಂಬುವರೇ ಬಂಧಿತ ಆರೋಪಿಗಳಾಗಿದ್ದಾರೆ. ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕರಡಿಗೋಡು ಗ್ರಾಮ ಅವರೆಗುಂದ ಹಾಡಿಯ ನಿವಾಸಿ ರಮೇಶ್(36) ಎಂಬಾತನನ್ನು ಜು.23ರಂದು ಕೌಟುಂಬಿಕ ಕಲಹದಿಂದ ಅವರ ಹಿರಿಯ ಸಹೋದರರು ಕೊಲೆ ಮಾಡಿದ್ದರು. ಮಡಿಕೇರಿ ಡಿವೈಎಸ್‌ಪಿ ಎಂ.ಜಗದೀಶ್, ಮಡಿಕೇರಿ ನಗರ ವೃತ್ತದ ವೃತ್ತ ನಿರೀಕ್ಷಕ ಹೆಚ್.ಜೆ. ಶಿವಶಂಕರ್, ಪಿಎಸ್‌ಐ ರಾಘವೇಂದ್ರ ಮತ್ತು ಸಿದ್ದಾಪುರ ಪೊಲೀಸರು ತನಿಖೆ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಸಾರಿಗೆ ಬಸ್‌ಗಳ ಮುಖಾಮುಖಿ ಡಿಕ್ಕಿ

ಪ್ರಯಾಣಿಕರು ಪಾರು



ಮಡಿಕೇರಿ, ಜು.24– ಕೆಎಸ್‌ಆರ್‌ಟಿಸಿ ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಘಟನೆ ಕುಶಾಲನಗರದಲ್ಲಿ ನಡೆದಿದೆ. ಮೈಸೂರಿನಿಂದ ಕುಶಾಲನಗರ ಮತ್ತು ಕುಶಾಲನಗರದಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಎರಡು ಬಸ್‌ಗಳು ಅಲ್ಲಿನ ಹಳೇ ವೆಂಕಟೇಶ್ವರ ಥಿಯೇಟರ್ ಬಳಿ ಮುಖಾಮುಖಿ ಡಿಕ್ಕಿಯಾಗಿವೆ. ಎರಡೂ ಬಸ್‌ಗಳ ಮುಂಭಾಗ ಜಖಂ ಆಗಿದ್ದು, ಬಸ್‌ಗಳ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಶವ ಸಂಸ್ಕಾರಕ್ಕೆ ಅಡ್ಡಿಯಾದ ಪ್ರವಾಹ

● ಕುಶಾಲನಗರ ಬಳಿ ಗ್ರಾಮಸ್ಥರ ಪರದಾಟ ● ಕೊನೆಗೂ ಶಾಸಕರಿಂದ ತಾತ್ಕಾಲಿಕವಾಗಿ ಪರ್ಯಾಯ ಜಾಗ ವ್ಯವಸ್ಥೆ

ಮಡಿಕೇರಿ, ಜು.24– ಕುಶಾಲನಗರ ತಾಲೂಕಿನ ಕಣಿವೆಯ ರಾಂಪುರ ಗ್ರಾಮದಲ್ಲಿ ಮೃತಪಟ್ಟ ಮಂಚಮ್ಮ ಎಂಬ ವೃದ್ಧೆಯ ಅಂತ್ಯ ಸಂಸ್ಕಾರಕ್ಕೆ ನದಿ ಪ್ರವಾಹ ಅಡ್ಡಿಯಾದ ಘಟನೆ ನಡೆದಿದೆ. ಈ ಭಾಗದಲ್ಲಿ ಸ್ಮಶಾನದ ಕೊರತೆ ಕಾರಣ ಸಾಮಾನ್ಯವಾಗಿ ನದಿ ದಂಡೆಯಲ್ಲಿ ಮೃತದೇಹಗಳಿಗೆ ಮುಕ್ತಿ ಕಲ್ಪಿಸುವ ಕಾರ್ಯ ನಡೆಸಿಕೊಂಡು ಬರಲಾಗುತ್ತಿದ್ದು, ನದಿ ಉಕ್ಕಿ ಹರಿದು ನದಿ ದಂಡೆಯಲ್ಲಿ ಪ್ರವಾಹದ ನೀರು ತುಂಬಿದ ಕಾರಣ ಶವ ಸಂಸ್ಕಾರಕ್ಕೆ ಜಾಗವಿಲ್ಲದೆ ಕುಟುಂಬಸ್ಥರು ಪರದಾಡುವಂತಾಯಿತು.

ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರ ಗಮನಕ್ಕೆ ತಂದ ಹಿನ್ನಲೆಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಸಸ್ಯ ಕ್ಷೇತ್ರ ಸಮೀಪ ಅಂತ್ಯಕ್ರಿಯೆಗೆ ವ್ಯವಸ್ಥೆ ಕಲ್ಪಿಸಲಾಯಿತು. ಗ್ರಾಮದ ವ್ಯಾಪ್ತಿಯಲ್ಲಿ ಸ್ಮಶಾನ ಒದಗಿಸುವ ಮೂಲಕ ಗ್ರಾಮಸ್ಥರಿಗೆ ಅನುಕೂಲ ಒದಗಿಸಿಕೊಡುವಂತೆ ಮೃತರ ಸಂಬಂಧಿಕರಾದ ಚಂದ್ರಕುಮಾರ್, ಸಂತೋಷ್, ಸುಖೇಶ್, ಗ್ರಾಮಸ್ಥರಾದ ಸಣ್ಣಯ್ಯ, ಹನುಮಯ್ಯ, ಪುಟ್ಟಯ್ಯ, ಚಂದನ್, ಸುರೇಶ್, ನಟರಾಜ್, ಪುನೀತ್ ಆಗ್ರಹಿಸಿದ್ದಾರೆ. ಕಾವೇರಿ ನದಿ ಅಪಾಯ ಮಟ್ಟದಲ್ಲಿ ಹರಿಯುತ್ತಿದ್ದು, ಇದರೊಂದಿಗೆ ಹಾರಂಗಿ ಜಲಾಶಯದಿಂದ ಹೊರಬಿಡುತ್ತಿರುವ ಅಪಾರ ಪ್ರಮಾಣದ ಹೊರಹರಿವು ಕುಶಾಲನಗರ ತಾಲೂಕು ವ್ಯಾಪ್ತಿಯಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರುವ ಸೂಚನೆ ನೀಡುತ್ತಿದೆ.

ವಿರಾಜಪೇಟೆ: ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ



ವಿರಾಜಪೇಟೆ, ಜು.24– ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆದಾಗ ಅವರನ್ನು ಗುರುತಿಸುವುದು ಉತ್ತಮ. ಆದರೆ ವಿದ್ಯಾರ್ಥಿ ಜೀವನ ರೂಪಿಸಲು ಶಿಕ್ಷಕರ, ಪೋಷಕರ, ವಿದ್ಯಾ ಸಂಸ್ಥೆಯ ಪಾತ್ರವು ಮುಖ್ಯವಾಗಿರುತ್ತದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಕೊಡಗು ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘ, ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ, ಅನುದಾನರಹಿತ ಪ್ರೌಢ ಶಾಲಾ ಸಂಯುಕ್ತ ಆಶ್ರಯದಲ್ಲಿ ವಿರಾಜಪೇಟೆ ಸಂತ ಅನ್ನಮ್ಮ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಶೇ. 100 ರಷ್ಟು ಫಲಿತಾಂಶ ಪಡೆದ ಶಾಲಾ ಮುಖ್ಯ ಶಿಕ್ಷಕರು, ಬೋಧನಾ ಹಾಗೂ ದೈಹಿಕ ಶಿಕ್ಷಕರಿಗೆ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ದೇಶದಲ್ಲಿ ಇತಿಹಾಸ ಬದಲಾಯಿಸುವಂತ ವಾತಾವರಣ ಸೃಷ್ಟಿಯಾಗಿದೆ ಎಂದ ಅವರು, ವಿರಾಜಪೇಟೆ ಕ್ಷೇತ್ರದ ಜನತೆಯ ನಿರೀಕ್ಷೆಯನ್ನು ಪ್ರಾಮಾಣಿಕವಾಗಿ ಕೆಲಸ ಮಾಡುವ ಮೂಲಕ ಬಡ ಜನರ ಕಲ್ಯಾಣಕ್ಕಾಗಿ ಕಟ್ಟಕಡೆಯ ಜನರಿಗೂ ಸೌಲಭ್ಯಗಳು ದೊರಕುವಂತ ಕೆಲಸವನ್ನು ಕಾಂಗ್ರೆಸ್ ಸರಕಾರ ಮಾಡುತ್ತಿರುವುದಾಗಿ ಹೇಳಿದರು.

ವಿಧಾನ ಪರಿಷತ್ ಸದಸ್ಯ ಭೋಜೇಗೌಡ, ಕಾರ್ಯಕ್ರಮ ಉದ್ಘಾಟಿಸಿದ ಬಳಿಕ ಮಾತನಾಡಿ, ಪಾಠ್ಯ ಪುಸ್ತಕದಲ್ಲಿ ರಾಜಕೀಯ ಹಸ್ತಕ್ಷೇಪ ಆಗಬಾರದು, ವಿದ್ಯಾರ್ಥಿಗಳಿಗೆ ಗುಣ ಮಟ್ಟದ ಜೀವನದ ಶಿಕ್ಷಣವನ್ನು ನೀಡುವಂತಾಗಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರಂಭದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪೆರಿಗ್ರೀನ್ ಮಚ್ಚಾಡೋ ಭಾಗವಹಿಸಿದ್ದರು. ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಎಸ್. ಲಾಲ್ ಕುಮಾರ್, ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಬಿ.ಪಿ.ಉತ್ತಪ್ಪ, ಅನುದಾನಿತ ನೌಕರರ ಸಂಘದ ಅಧ್ಯಕ್ಷ ಜಿ.ಗಿಡ್ಡಯ್ಯ, ಜಿಲ್ಲಾ ಉಪನಿರ್ದೇಶಕ ರಂಗರಾಮಯ್ಯ, ವಿರಾಜಪೇಟೆ ಸಂತ ಅನ್ನಮ್ಮ ದೇವಾಲಯದ ಧರ್ಮಗುರು ಡಾ. ದಯಾನಂದ ಪ್ರಭು, ವಿದ್ಯಾ ಸಂಸ್ಥೆಯ ವ್ಯವಸ್ಥಾಪಕ ಐಸಕ್ ರತ್ನಕರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಶಿಕ್ಷಕರಾದ ಲೋಕೇಶ್ ಸ್ವಾಗತಿಸಿದರು, ಎನ್.ಡಿ.ತಿಮ್ಮಯ್ಯ ಮತ್ತು ಡಿ.ಚಂದನ ನಿರೂಪಿಸಿದರೆ, ಕೃಷ್ಣ ಚೇತನ್ ವಂದಿಸಿದರು.

ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ಉದ್ಘಾಟನೆ



ಕುಶಾಲನಗರ, ಜು.24– ಶ್ರೀ ದುರ್ಗಾ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಉದ್ಘಾಟನಾ ಕಾರ್ಯಕ್ರಮ ಕಣಿವೆ ರಾಮಲಿಂಗೇಶ್ವರ ಸಭಾಂಗಣದಲ್ಲಿ ನಡೆಯಿತು.

ಮಾಜಿ ಶಾಸಕ ಅಪ್ಪಚ್ಚುರಂಜನ್ ಕಾರ್ಯಕ್ರಮ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಕುರಿ ಸಾಕಣೆ ಅತ್ಯಂತ ಲಾಭದಾಯಕ ಕೃಷಿ. ಬೆಳೆಗಾರರು ಮಿಶ್ರ ಬೆಳೆಗಳಿಗೆ ಒತ್ತು ನೀಡಿದಲ್ಲಿ ಮಾತ್ರ ಲಾಭಗಳಿಸಲು ಸಾಧ್ಯ. ತಮ್ಮಲ್ಲಿರುವ ಜಮೀನು, ಸಂಪನ್ಮೂಲಗಳನ್ನು ಬಳಸಿಕೊಂಡು ಮಿಶ್ರಬೆಳೆಯೊಂದಿಗೆ ಹೈನುಗಾರಿಕೆ, ಕುರಿ, ಮೇಕೆ ಸಾಕಣೆಗೆ ಮುಂದಾದಲ್ಲಿ ಹೆಚ್ಚಿನ ಲಾಭಗಳಿಸಲು ಸಾಧ್ಯ ಎಂದರು.


ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಮಾತನಾಡಿ, ಕುರಿಗಳು ನಡೆದಾಡುವ ಬ್ಯಾಂಕ್ ಇದ್ದಂತೆ. ಮನೆಯಲ್ಲೆರಡು ಕುರಿಗಳಿದ್ದರೆ ಲಕ್ಷ್ಮಿಯಿದ್ದಂತೆ. ಮೇಕೆ ಹಾಲಿಗೆ ಅತ್ಯಂತ ಬೇಡಿಕೆಯಿದೆ. ಕುರಿ ಮತ್ತು ಮೇಕೆಗಳು ಆದಾಯದ ಮೂಲಗಳು. ಇಂದು ಕೇವಲ ಕುರುಬ ವರ್ಗದವರು ಮಾತ್ರವಲ್ಲದೆ ಎಲ್ಲಾ ಜನಾಂಗದವರು ಕುರಿ,ಮೇಕೆ ಸಾಕಾಣಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಸಬಲರಾಗಿದ್ದಾರೆ ಎಂದರು.

ಮೈಸೂರಿನ ಕುರಿ ಮತ್ತು ಉಣ್ಣೆ ನಿಗಮದ ಸಹಾಯಕ ನಿರ್ದೇಶಕ ನಾಗರಾಜು ಮಾತನಾಡಿ, ಹೆಚ್ಚು ಸಂಘಗಳನ್ನು ಸ್ಥಾಪಿಸಿ, ಬೆಳೆಸಿ ಎಲ್ಲರನ್ನೂ ಒಗ್ಗೂಡಿಸಿ ಸವಲತ್ತುಗಳು ಹಾಗೂ ಆರ್ಥಿಕ ಸಹಕಾರ ಒದಗಿಸುವುದು ಹಾಗೂ ತಳಿಗಳ ಸಂವರ್ಧನೆ ನಿಗಮದ ಮುಖ್ಯ ಉದ್ದೇಶ ಎಂದರು.

ಜಿಲ್ಲಾ ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ.ಲಿಂಗರಾಜ ದೊಡ್ಡಮನಿ ಮಾತನಾಡಿ, ರೈತರು ಕೇವಲ ಕೃಷಿಯನ್ನು ಮಾತ್ರ ಅವಲಂಬಿಸದೆ ಉಪ ಆದಾಯಗಳಿಗೆ ಪೂರಕವಾಗುವ ಚಟುವಟಿಕೆಗಳತ್ತ ಚಿಂತನೆ ಹರಿಸಬೇಕಿದೆ ಕೃಷಿಯೊಂದಿಗೆ ಮೇಕೆ, ಕುರಿ, ಕೋಳಿ ಸಾಕಣೆ, ಹೈನುಗಾರಿಕೆಯಂತಹ ವಿವಿಧ ಆದಾಯ ಮೂಲಗಳನ್ನು ಸೃಷ್ಟಿಸಿಕೊಳ್ಳುವ ಮೂಲಕ ಆರ್ಥಿಕವಾಗಿ ಸದೃಢರಾಗಲು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಡಿ.ಆರ್.ಪ್ರಭಾಕರ್ ಮಾತನಾಡಿದರು. ಸಂಘದ ಕಾರ್ಯದರ್ಶಿ ಭರಮಣ್ಣ ಟಿ ಬೆಟಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭ ಹೆಚ್ಚಿನ ಸಂಖ್ಯೆಯಲ್ಲಿ ಕುರಿ,ಮೇಕೆ ಸಾಕಾಣಿಕೆ ಮಾಡಿದವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಸದಸ್ಯರಿಗೆ ಸದಸ್ಯತ್ವ ಕಾರ್ಡ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಹೆಬ್ಬಾಲೆ ಪಶು ಆಸ್ಪತ್ರೆ ವೈದ್ಯಾಧಿಕಾರಿ ಡಾ. ಸಂಜೀವ್ ಶಿಂಧೆ, ಸಂಘದ ಉಪಾಧ್ಯಕ್ಷ ಬಿ.ಕೆ.ಮೋಹನ್, ನಿರ್ದೇಶಕರಾದ ಉದಯಕುಮಾರ್, ಚಿಕ್ಕಯ್ಯ, ಪುಟ್ಟಸ್ವಾಮಿ, ಮಹಾದೇವ್, ಶಾಂತ, ಸಾವಿತ್ರಿ ನಿಂಗರಾಜಮ್ಮ, ಜಗದೀಶ, ಮಹೇಶ್, ಗಣೇಶ್, ಗಿರೀಶ್, ಪುನೀತ್, ರವಿ, ಜಯಶ್ರೀ, ನಟರಾಜ ಮತ್ತಿತರರು ಇದ್ದರು.

ಇಂದು ಕೊಡಗಿಗೆ ಕಂದಾಯ ಸಚಿವರ ಭೇಟಿ



ಮಡಿಕೇರಿ, ಜು.24– ಕಂದಾಯ ಇಲಾಖೆ ಸಚಿವ ಕೃಷ್ಣಭೈರೇಗೌಡ ಅವರು ಜು.25ರಂದು ಕೊಡಗಿಗೆ ಭೇಟಿ ನೀಡಿ, ಮಳೆ ಹಾನಿ ಪ್ರದೇಶ ವೀಕ್ಷಣೆ ಮಾಡಲಿದ್ದಾರೆ ಜು.25ರಂದು 11 ಗಂಟೆಗೆ ರಸ್ತೆ ಮಾರ್ಗವಾಗಿ ಆಗಮಿಸುವ ಸಚಿವರು ವಿವಿಧ ಮಳೆ ಹಾನಿ ಪ್ರದೇಶಗಳಿಗೆ ತೆರಳಿ ಪರಿಶೀಲನೆ ನಡೆಸಲಿದ್ದಾರೆ. ಬಳಿಕ ಮಧ್ಯಾಹ್ನ 2.30 ಗಂಟೆಗೆ ಕಂದಾಯ ಇಲಾಖೆ ಅಧಿಕಾರಿಗಳ ಸಭೆ ನಡೆಸಲಿದ್ದಾರೆ. ಸಂಜೆ 4.30 ಗಂಟೆಗೆ ಜಿಲ್ಲೆಯಿಂದ ನಿರ್ಗಮಿಸಲಿದ್ದಾರೆ.

ಚಾಮರಾಜನಗರ ಜಿಲ್ಲಾ ಪ್ರಗತಿ ಪರಿಶೀಲನೆ

ಗ್ಯಾರಂಟಿ ಯೋಜನೆಗಳ ಪ್ರಯೋಜನ ತಲುಪಿಸಲು ತ್ವರಿತ ಕ್ರಮ ವಹಿಸಿ

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಸೂಚನೆ



ಚಾಮರಾಜನಗರ, ಜು.24– ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸಲು ಅಧಿಕಾರಿಗಳು ವಿಶೇಷ ಮುತುವರ್ಜಿಯಿಂದ ಕಾರ್ಯನಿರ್ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳು ಫಲಾನುಭವಿಗಳಿಗೆ ತಲುಪಲು ತಹಶೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿಗಳು, ಸಂಬಂಧಪಟ್ಟ ಇತರೆ ಇಲಾಖೆ ಅಧಿಕಾರಿಗಳು ವ್ಯಾಪಕವಾಗಿ ತೊಡಗಿಕೊಳ್ಳಬೇಕು. ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆಯಡಿ ಫಲಾನುಭವಿಗಳ ನೋಂದಣಿ ಅರ್ಜಿ ಸಲ್ಲಿಕೆ ಪ್ರಕ್ರಿಯೆ ತ್ವರಿತವಾಗಿ ಆಗಬೇಕು. ಅರ್ಹರೆಲ್ಲರಿಗೂ ಯೋಜನೆ ಸೌಲಭ್ಯ ಸಿಗಬೇಕು ಎಂದರು.

ನೋಂದಣಿ ಕೇಂದ್ರಗಳಿಗೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಬೇಕು. ಯಾವುದೇ ತಾಂತ್ರಿಕ ತೊಂದರೆಗಳು ಇನ್ನಿತರ ಸಮಸ್ಯೆಗಳಿದ್ದಲ್ಲಿ ಕೂಡಲೇ ಪರಿಹರಿಸಬೇಕು. ಜನರು ಸುಗಮವಾಗಿ ಯೋಜನೆಗೆ ನೋಂದಾಯಿಸಲು, ಅರ್ಜಿ ಸಲ್ಲಿಸಲು ತೊಡಕುಗಳು ಬಾರದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್. ಮಂಜುನಾಥಪ್ರಸಾದ್ ಮಾತನಾಡಿ, ನೋಂದಣಿ ಕೇಂದ್ರಗಳಿಗೆ ಬರುವ ಫಲಾನುಭವಿಗಳಿಗೆ ಮೂಲ ಸೌಕರ್ಯ ಇರಬೇಕು. ಜನಸಂದಣಿ ಯಾಗದಂತೆ ಶೀಘ್ರವಾಗಿ ನೋಂದಣಿ ಕಾರ್ಯ ಮಾಡಬೇಕು. ಪ್ರಜಾ ಪ್ರತಿನಿಧಿ ಸ್ವಯಂ ಸೇವಕರು ಮನೆ ಮನೆಗೆ ಹೋಗಿ ನೋಂದಣಿ ಮಾಡುವ ಪ್ರಕ್ರಿಯೆಯನ್ನು ತ್ವರಿತವಾಗಿ ನಿರ್ವಹಿಸಬೇಕು ಎಂದರು.

ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಮಾತನಾಡಿ, ಜಿಲ್ಲೆಯಲ್ಲಿ 270 ಕೇಂದ್ರಗಳಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳ ನೋಂದಣಿಗೆ ಅವಕಾಶ ಮಾಡಿಕೊಡಲಾಗಿದೆ. ಗೃಹಲಕ್ಷ್ಮಿ ಯೋಜನೆಗೆ ನೇರವಾಗಿಯೂ ನೋಂದಣಿ ಕೇಂದ್ರಕ್ಕೆ ಬಂದು ನೋಂದಾಯಿಸಿಕೊಳ್ಳಬಹುದು. ಈಗಾಗಲೇ ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಯಡಿ 35 ಸಾವಿರ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ 28551 ಫಲಾನುಭವಿಗಳಿಗೆ ಮಂಜೂರಾತಿ ಆದೇಶ ನೀಡಲಾಗಿದೆ ಎಂದರು.

ಆರೋಗ್ಯ ಇಲಾಖೆ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರು, ಆರೋಗ್ಯ ಸೇವೆಗಳು ಜನರಿಗೆ ಸುಲಭವಾಗಿ ಸಿಗಬೇಕು. ವೈದ್ಯರು, ತಂತ್ರಜ್ಞರ ಕೊರತೆ ಇರಬಾರದು. ಜಿಲ್ಲಾ, ತಾಲೂಕು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಲಭ್ಯವಿದ್ದು ಎಲ್ಲ ವೈದ್ಯಕೀಯ ಸೌಲಭ್ಯಗಳು ದೊರೆಯಬೇಕು. ಜಿಲ್ಲಾ ಆಸ್ಪತ್ರೆಯಲ್ಲಿ ದೂರುಗಳು ಬಾರದಂತೆ ಸಮರ್ಪಕವಾಗಿ ಔಷಧ ಚಿಕಿತ್ಸೆಗಳು ಲಭ್ಯವಾಗಬೇಕು ಎಂದರು. ಕೃಷಿ, ತೋಟಗಾರಿಕೆ, ರೇಷ್ಮೆ ಚಟುವಟಿಕೆಗಳು ಜಿಲ್ಲೆಯ ರೈತರಿಗೆ ಅನುಕೂಲವಾಗಬೇಕು. ರೈತರಿಗೆ ಉತ್ತೇಜನ ನೀಡುವ ಕಾರ್ಯಕ್ರಮಗಳನ್ನು ಸ್ಥಳೀಯವಾಗಿ ಹಮ್ಮಿಕೊಳ್ಳಿ. ರೇಷ್ಮೆ ಬೆಳೆ ಅಭಿವೃದ್ಧಿಗೆ ಎಲ್ಲಿ ಸೂಕ್ತ ಜಾಗಗಳಿವೆ, ಫಾರಂಗಳು ಲಭ್ಯವಿದೆ ಎಂಬ ಬಗ್ಗೆ ಪರಿಶೀಲಿಸಿ, ಸೌಲಭ್ಯಗಳನ್ನು ತಲುಪಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, ಮುಂಗಾರು ಬೇಗನೆ ಆರಂಭವಾಗಿರುವ ತಾಲೂಕುಗಳಲ್ಲಿ ಇದುವರೆಗೆ ಎಷ್ಟು ಪ್ರಮಾಣದಲ್ಲಿ ಬಿತ್ತನೆಯಾಗಿದೆ. ಮಳೆ ಕೊರತೆಯಿಂದ ಎಷ್ಟು ಪ್ರಮಾಣದಲ್ಲಿ ಬೆಳೆಗೆ ಹಾನಿಯಾಗಬಹುದು ಎಂಬ ಬಗ್ಗೆ ಮಾಹಿತಿ ಒದಗಿಸಬೇಕು. ರೈತರಿಗೆ ಬೆಳೆಗಾರರಿಗೆ ಇಲಾಖೆಗಳಿಂದ ಸೂಕ್ತ ಸಲಹೆ, ಮಾರ್ಗದರ್ಶನ ಮಾಡಬೇಕು ಎಂದರು. ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ರೇಷ್ಮೆ ಬೆಳೆಗೆ ಜಿಲ್ಲೆ ಪ್ರಸಿದ್ಧಿಯಾಗಿತ್ತು ರೇಷ್ಮೆ ಮಾರುಕಟ್ಟೆಯಲ್ಲಿ ಬೆಳೆಗಾರರಿಗೆ ಅನುಕೂಲವಾಗಬೇಕು. ಕುದೇರಿನಲ್ಲಿ ಇರುವ ರೇಷ್ಮೆ ತರಬೇತಿ ಕಾಲೇಜು ಸ್ಥಗಿತವಾಗದಂತೆ ನೋಡಿಕೊಳ್ಳಬೇಕಿದೆ. ಈ ಮೂಲಕ ರೇಷ್ಮೆ ಬೆಳೆಗೆ ಉತ್ತೇಜನ ನೀಡಬೇಕಿದೆ ಎಂದರು.

ಶಾಸಕ ಎಂ.ಆರ್. ಮಂಜುನಾಥ್ ಮಾತನಾಡಿ, ಕಾಡಂಚಿನ ಗ್ರಾಮಗಳಲ್ಲಿ ವಿದ್ಯುತ್ ರಸ್ತೆ, ಇನ್ನಿತರ ಮೂಲಸೌಕರ್ಯಗಳನ್ನು ಒದಗಿಸಬೇಕಿದೆ. ಅರಣ್ಯ ಇಲಾಖೆಯ ತೊಡಕುಗಳಿದ್ದು ಈ ಬಗ್ಗೆ ಪ್ರತ್ಯೇಕ ಸಭೆ ಕರೆದು ವಿವರವಾಗಿ ಚರ್ಚಿಸಿದರೆ ಸಮಸ್ಯೆಗಳು ಬಗೆಹರಿಯಲಿವೆ ಎಂದು ಗಮನ ಸೆಳೆದರು.

ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್ ಮಾತನಾಡಿ, ತಮ್ಮ ಕ್ಷೇತ್ರದಲ್ಲಿ ಹಲವು ಶಿಕ್ಷಕರು ವರ್ಗಾವಣೆಗೊಂಡಿದ್ದಾರೆ. ಇದರಿಂದ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ತೊದರೆ ಆಗಬಾರದು. ಹೀಗಾಗಿ ಅಗತ್ಯಕ್ಕೆ ತಕ್ಕಂತೆ ಶಿಕ್ಷಕರ ನಿಯೋಜನೆಯಾಗಬೇಕಿದೆ ಎಂದರು.

ವಿಧಾನಪರಿಷತ್‌ನ ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ಅರಣ್ಯದಂಚಿನ ಪೋಡುಗಳಲ್ಲಿರುವ ಜನತೆಗೆ ಸಾರಿಗೆ ಸೌಲಭ್ಯವಿಲ್ಲ. ತುರ್ತು ಸಂದರ್ಭಗಳಲ್ಲಿ ಆಸ್ಪತ್ರೆಗೆ ಬರಲು ಕಷ್ಟಪಡಬೇಕಿದೆ. ಸ್ಥಗಿತಗೊಂಡಿರುವ ಜನವನ ಸಾರಿಗೆಯನ್ನು ಪುನರ್ ಆರಂಭಿಸಿ ಅದಕ್ಕೆ ಅಗತ್ಯವಿರುವ ನಿರ್ವಹಣಾ ವ್ಯವಸ್ಥೆಯನ್ನು ಅರಣ್ಯ ಇಲಾಖೆ ಮಾಡಬೇಕೆಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಡಾ. ಡಿ. ತಿಮ್ಮಯ್ಯ ಮಾತನಾಡಿ, ರೈತರು ಬೆಳೆಗಾರರು ಕೃಷಿ, ತೋಟಗಾರಿಕೆ ಬೆಳೆಗಳ ಉತ್ಪನ್ನ ಹೆಚ್ಚಳಕ್ಕೆ ಪೂರಕವಾಗಿರುವ ತರಬೇತಿ ವಿಚಾರ ಸಂಕಿರಣ ಚಟುವಟಿಕೆಗಳನ್ನು ಸಂಬಂಧಪಟ್ಟ ಇಲಾಖೆಗಳು ಹೆಚ್ಚು ಹಮ್ಮಿಕೊಳ್ಳಬೇಕು. ಇಲಾಖಾ ಕಾರ್ಯಕ್ರಮಗಳ ಕುರಿತು ಜನರಿಗೆ ವ್ಯಾಪಕವಾಗಿ ತಿಳಿವಳಿಕೆ ನೀಡಬೇಕು. ರೇಷ್ಮೆ ಬೆಳೆಯಲ್ಲಿ ಚಾಮರಾಜನಗರ ಜಿಲ್ಲೆಯೂ ಈ ಹಿಂದೆ ಹೊಂದಿದ್ದ ಪ್ರಗತಿ ಮತ್ತೆ ಕಾಣುವಂತಾಗಬೇಕು ಎಂದರು.

ಜಿಪಂ ಸಿಇಓ ಎಸ್. ಪೂವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ಅರಣ್ಯ ಅಧಿಕಾರಿ ಸಂತೋಷ್ ಕುಮಾರ್ ಇದ್ದರು.

► ಗುಂಡ್ಲುಪೇಟೆ ತಾಲೂಕಿನಲ್ಲಿ ಹಲವು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಈ ಸಮಸ್ಯೆಯನ್ನು ಬಗೆಹರಿಸಿ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರೆಯಲು ಕ್ರಮ ಕೈಗೊಳ್ಳಬೇಕು.
– ಎಚ್.ಎಂ. ಗಣೇಶಪ್ರಸಾದ್, ಶಾಸಕರು.

► ಹನೂರು ಕ್ಷೇತ್ರ ಗುಡ್ಡಗಾಡುಗಳ ಪ್ರದೇಶ ಒಳಗೊಂಡಿದೆ. ಅನೇಕ ಗ್ರಾಮಗಳಿಗೆ ಬಸ್ ಹೋಗುತ್ತಿಲ್ಲ. ಇದರಿಂದ ಅಲ್ಲಿನ ಜನರು ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹೀಗಾಗಿ, ಹನೂರಿಗೆ ಹೆಚ್ಚು ಬಸ್‌ಗಳನ್ನು ಒದಗಿಸಬೇಕು.
- ಎಂ.ಆರ್. ಮಂಜುನಾಥ್, ಶಾಸಕರು.

► ಕೊಳ್ಳೇಗಾಲ ಕ್ಷೇತ್ರದ ವ್ಯಾಪ್ತಿಗೆ ಬರುವ ಯಳಂದೂರು ತಾಲೂಕಿನ ಯರಿಯೂರು ಹಾಗೂ ಚಾಮರಾಜನಗರ ತಾಲೂಕಿನ ಚಾಟೀಪುರ ಗ್ರಾಮಗಳು ಮುಖ್ಯಮಂತ್ರಿಗಳ ಆದರ್ಶ ಗ್ರಾಮಗಳಿಗೆ ಆಯ್ಕೆಯಾಗಿದ್ದವು. ಈ ಗ್ರಾಮಗಳಲ್ಲಿ ಕಾಮಗಾರಿಗಳು ಆಗದಿದ್ದರೂ ಹಣ ಪಾವತಿ ಮಾಡಲಾಗಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳು ಸ್ಥಳ ಪರಿಶೀಲಿಸಬೇಕು. ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು.
- ಎ.ಆರ್. ಕೃಷ್ಣಮೂರ್ತಿ, ಶಾಸಕರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಬಡರೋಗಿಗಳ ಸುಲಿಗೆ

ಚಾಮರಾಜನಗರ, ಜು.24– ಸರ್ಕಾರಿ ಆಸ್ಪತ್ರೆಗಳಲ್ಲಿ ಬಡ ರೋಗಿಗಳ ಸುಲಿಗೆ ಮಾಡಲಾಗುತ್ತಿದೆ. ಈ ಬಗ್ಗೆ ಡಿಎಚ್‌ಒ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಸೂಚಿಸಿದರು.

ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಹಣ ವಸೂಲಿ ಮಾಡಲಾಗುತ್ತಿದೆ. ಬಹುತೇಕ ಎಲ್ಲಾ ಪರೀಕ್ಷೆಗಳನ್ನು ಖಾಸಗಿ ಕೇಂದ್ರಗಳಿಗೆ ಬರೆಯಲಾಗುತ್ತದೆ. ಈ ಬಗ್ಗೆ ತಮಗೆ ಸಾಕಷ್ಟು ದೂರುಗಳು ಬಂದಿವೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಇದಕ್ಕೆಲ್ಲ ಕಡಿವಾಣ ಹಾಕಬೇಕು ಎಂದು ತಿಳಿಸಿದರು. ಈ ವೇಳೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಮಾತನಾಡಿ, ಆಸ್ಪತ್ರೆಗಳಲ್ಲಿ ಲಂಚ ನೀಡದಂತೆ ಹಾಗೂ ಹಣಕ್ಕೆ ಒತ್ತಾಯಿಸಿದರೆ ದೂರು ಸಲ್ಲಿಸುವ ಬಗ್ಗೆ ಜಾಗೃತಿ ಮೂಡಿಸುವ ಬೋರ್ಡ್‌ಗಳನ್ನು ಹಾಕುವಂತೆ ಸೂಚಿಸಿದರು.

ನಾಳೆ ನಿವೃತ್ತ ಯೋಧರಿಗೆ ಸನ್ಮಾನ



ಚಾಮರಾಜನಗರ, ಜು.24– ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ಡಾ. ಮೋಹನ್ ಎನ್.ಎಸ್. ಸ್ನೇಹ ಬಳಗದ ವತಿಯಿಂದ ಜು.26 ರಂದು ನಿವೃತ್ತ ಯೋಧರಿಗೆ ಸನ್ಮಾನ ಹಾಗೂ ಸ್ನೇಹ ಬಳಗದ ಕಾರ್ಯಾಲಯ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಆರ್.ಲೋಕೇಶ್ ಕುರುಬರಹುಂಡಿ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಜಿಲ್ಲೆಯಾದ್ಯಂತ ಶ್ರೀಸಾಮಾನ್ಯರಿಗೆ, ಮಹಿಳೆಯರಿಗೆ, ಅಂಗವಿಕಲರಿಗೆ, ದಲಿತರಿಗೆ, ಹಿಂದುಳಿದವರಿಗೆ, ಉಚಿತವಾಗಿ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ, ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಡಾ.ಮೋಹನ್ ಎನ್.ಎಸ್. ಸ್ನೇಹ ಬಳಗದ ಉದ್ದೇಶವಾಗಿದೆ. ಡಾ. ಮೋಹನ್ ಅವರು ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಕೊನೆಯ ಅಳಿಯರಾಗಿದ್ದು, ಪ್ರಸ್ತುತ ಹೆಸರಾಂತ ಸಂಜಯ್ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸ ಕೇಂದ್ರದಲ್ಲಿ ಬೆನ್ನುಹುರಿ ಮತ್ತು ಕೀಲುಮೂಳೆ ಶಸ್ತ್ರ ಚಿಕಿತ್ಸಕ ತಜ್ಞರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಉಚಿತ ಆಂಬುಲೆನ್ಸ್ ಲೋಕಾರ್ಪಣೆ ಮಾಡಲಿದ್ದಾರೆ. ಪ್ರಧಾನಿ ನರೇಂದ್ರಮೋದಿಯವರ ಆರೋಗ್ಯ ಸಂಬಂಧಪಟ್ಟ ಯೋಜನೆಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ ಎಂದರು.

ಡಾ.ಮೋಹನ್ ಅವರ ಸೇವೆ ಚಾಮರಾಜನಗರ ಜಿಲ್ಲೆಗೂ ಅವಶ್ಯಕವಾಗಿದೆ. ಈಗಾಗಲೇ ಜಿಲ್ಲೆಯ ಅನೇಕ ಕಡೆಗಳಲ್ಲಿ ಆರೋಗ್ಯ ತಪಾಸಣೆ ಶಿಬಿರ ಮಾಡಲಾಗಿದೆ. ಕೃತಕ ಕಾಲು ಹಾಗೂ ಅಂಗಾಂಗ ಜೋಡಣೆ ಶಿಬಿರ ಮಾಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಾ.ಮೋಹನ್ ಎನ್.ಎಸ್. ಸ್ನೇಹ ಬಳಗದ ಮುಖಂಡರಾದ ದೇಮಾಜುಗೌಡ ಜಯರಾಂಶೆಟ್ಟಿ, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಕೃಷ್ಣಪ್ಪ, ನಂಜನಗೂಡು ತಾಪಂ ಮಾಜಿ ಸದಸ್ಯ ಹೆಚ್.ಪಿ. ಸೋಮಶೇಖರ್ ಹಿರೇಬೇಗೂರು, ಕೆರೆಹಳ್ಳಿ ವೆಂಕಟೇಶ್, ಅವಿನಾಶ್ ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಕಾನೂನು ಅರಿವು ಅಗತ್ಯ

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್



ಚಾಮರಾಜನಗರ, ಜು.24– ದೈನಂದಿನ ಜೀವನದಲ್ಲಿ ಬರುವ ಸಮಸ್ಯೆಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳಿಗೆ ಕನಿಷ್ಠ ಮಟ್ಟದ ಕಾನೂನು ಅರಿವು ಅಗತ್ಯ ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ತಿಳಿಸಿದರು.

ತಾಲೂಕಿನ ಚಂದಕವಾಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ನಡೆದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಗಳು ಎಷ್ಟೇ ಕಠಿಣ ಕಾನೂನುಗಳನ್ನು ಜಾರಿಗೆ ತಂದರೂ ಬಾಲ್ಯವಿವಾಹ ಮತ್ತು ಪೋಕ್ಸೋ ಪ್ರಕರಣಗಳು ಹೆಚ್ಚಾಗುತ್ತಿವೆ. ವಿದ್ಯಾರ್ಥಿಗಳಿಗೆ ಕಾನೂನಿನ ಅರಿವಿದ್ದಾಗ ತಪ್ಪು ಮಾಡುವುದು ಕಡಿಮೆಯಾಗುತ್ತದೆ. ಸಾಮಾಜಿಕ ಜಾಲತಾಣಗಳಿಂದ ವಿದ್ಯಾರ್ಥಿಗಳು ದೂರವಿರಬೇಕು. ಪ್ರೀತಿ ಪ್ರೇಮದ ವ್ಯಾಮೋಹಕ್ಕೆ ಸಿಲುಕಿ ವಿದ್ಯಾರ್ಥಿಗಳು ತಮ್ಮ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇದನ್ನು ತಡೆಗಟ್ಟಲು ಸಮಾಜದಲ್ಲಿ ಪ್ರತಿಯೊಬ್ಬರೂ ಜಾಗೃತರಾಗಬೇಕು. ಪೋಷಕರು ತಮ್ಮ ಮಕ್ಕಳಿಗೆ ಸಂಸ್ಕಾರ ಕಲಿಸಬೇಕು. ಇಲ್ಲದಿದ್ದಲ್ಲಿ ಮಕ್ಕಳ ಭವಿಷ್ಯ ನಶಿಸಿ ಹೋಗುತ್ತದೆ. ಈ ನಿಟ್ಟಿನಲ್ಲಿ ಯುವ ಜನಾಂಗ ವಿದ್ಯಾರ್ಥಿ ದೆಸೆಯಿಂದಲೇ ಕಾನೂನಿನ ಜ್ಞಾನ ಹೊಂದುವುದು ಅವಶ್ಯಕ ಎಂದರು.

ಭಾರತ ಸಂವಿಧಾನದ ಪರಿಚ್ಛೇಧ 21ರಲ್ಲಿ ಮಕ್ಕಳ ರಕ್ಷಣೆ ಬಗ್ಗೆ ತಿಳಿಸಲಾಗಿದೆ. ಮಕ್ಕಳ ರಕ್ಷಣೆ ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ. ಸಂವಿಧಾನದಲ್ಲಿ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳಿವೆ. ಮೂಲಭೂತ ಕರ್ತವ್ಯಗಳನ್ನು ಪಾಲಿಸಿದರೆ ಹಕ್ಕುಗಳು ತಾನಾಗಿಯೇ ಲಭಿಸುತ್ತವೆ ಹೀಗಾಗಿ ಪ್ರತಿಯೊಬ್ಬರೂ ಸಂವಿಧಾನ ಓದುವ ಜೊತೆಗೆ ಅಂಬೇಡ್ಕರ್ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಚಾಮರಾಜನಗರ ಪೂರ್ವ ಪೊಲೀಸ್ ಠಾಣೆ ಸಿಪಿಐ ಶ್ರೀಕಾಂತ್ ಮಾತನಾಡಿ, ಪ್ರಸ್ತುತ ಯುವ ಪೀಳಿಗೆ ಹಲವು ದುಶ್ಚಟಗಳಿಗೆ ಬಲಿಯಾಗಿ ತಮ್ಮ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳುವ ಸಮಯದಲ್ಲಿ ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ ಇದರಿಂದ ಪೋಷಕರು ಹಾಗೂ ಪೊಲೀಸ್ ಇಲಾಖೆಗೆ ದೊಡ್ಡ ಸಮಸ್ಯೆಯಾಗುತ್ತಿದೆ. ಇಂತಹ ಸಮಸ್ಯೆ ಬಗೆಹರಿಸಲು ಯುವ ಪೀಳಿಗೆ ಜಾಗೃತರಾಗಬೇಕು. ಇಂತಹ ದುಷ್ಕೃತ್ಯಗಳ ಬಗ್ಗೆ ಮಾಹಿತಿ ಇದ್ದಲ್ಲಿ ಸ್ಥಳೀಯ ಪೊಲೀಸ್ ಠಾಣೆಗೆ ತಿಳಿಸಿದರೆ ಅಪರಾಧ ಕೃತ್ಯಗಳನ್ನು ತಡೆಯುವಲ್ಲಿ ಪೊಲೀಸ್ ಇಲಾಖೆ ಸಿದ್ಧ ಎಂದರು.

ಈ ವೇಳೆ ಕಾಲೇಜಿನ ಪ್ರಾಂಶುಪಾಲ ಹೆಚ್.ಎನ್.ಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಉಪನ್ಯಾಸಕರಾದ ನಟರಾಜು, ತ್ರಿಭುಸ್ವಾಮಿ, ಡಿ.ಶಕುಂತಲಾ, ಉಪ ಪೊಲೀಸ್ ನಿರೀಕ್ಷಕ ಮಹೇಶ್.ಕೆ.ಸಿ ಇದ್ದರು.

ಒಂದನೇ ಪುಟದಿಂದ

ಚಾಮುಂಡಿಬೆಟ್ಟ ಅಭಿವೃದ್ಧಿ

ಮೂಲ ಸೌಲಭ್ಯ ಕಲ್ಪಿಸುವುದಕ್ಕೆ ಸೂಚನೆ ನೀಡಲಾಗಿದೆ. ಯಾವುದೇ ಧಾರ್ಮಿಕ ಸ್ಥಳ ಪ್ರವಾಸಿಗರ ಆಗಮನದಿಂದ ಇನ್ನಷ್ಟು ಪ್ರಖ್ಯಾತಿಯಾಗುತ್ತದೆ. ಧಾರ್ಮಿಕ ಕ್ಷೇತ್ರಗಳಿಗೆ ಯಾತ್ರಿಕರೊಂದಿಗೆ ಪ್ರವಾಸಿಗರು ಬರುತ್ತಾರೆ. ಇದರಿಂದ ಚಾಮುಂಡಿಬೆಟ್ಟ ಸೇರಿದಂತೆ ಹಲವು ಧಾರ್ಮಿಕ ಸ್ಥಳ ಹಾಗೂ ಪ್ರವಾಸಿ ತಾಣವನ್ನು ಅಭಿವೃದ್ಧಿಪಡಿಸಬೇಕಾಗಿದೆ. ಪ್ರವಾಸಿಗರನ್ನು ಆಕರ್ಷಿಸಲು ಅಭಿವೃದ್ಧಿ ಅಪಚಾರವಲ್ಲ. ಚಾಮುಂಡಿಬೆಟ್ಟದ ಅಭಿವೃದ್ಧಿ ವಿಚಾರದಲ್ಲಿ ಧಾರ್ಮಿಕತೆಗೆ, ಸಂಸ್ಕೃತಿಗೆ ಧಕ್ಕೆಯಾಗದಂತೆ ಜಾಗ್ರತೆ ವಹಿಸುತ್ತೇವೆ. ಆ ಮೂಲಕ ಬೆಟ್ಟದ ವಾತಾವರಣ ಮತ್ತಷ್ಟು ಸುಂದರಗೊಳಿಸುವ ಪ್ರಯತ್ನ ಮಾಡುತ್ತೇವೆ. ಬೆಟ್ಟದಲ್ಲಿ ಕಟ್ಟಡಗಳ ನಿರ್ಮಾಣದಿಂದ ಭೂ ಕುಸಿತವಾಗುತ್ತಿದೆ ಎಂಬ ಪರಿಸರವಾದಿಗಳ ಆಕ್ಷೇಪ ಕುರಿತಂತೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಇಂತಹ ಅಭಿಪ್ರಾಯಗಳು ಮೇಲಿಂದ ಮೇಲೆ ವ್ಯಕ್ತವಾಗುತ್ತಲೇ ಇದೆ. ಇದು ನನ್ನ ಗಮನಕ್ಕೂ ಬಂದಿದೆ. ಈ ಕುರಿತು ತಜ್ಞರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ಬೆಟ್ಟದಲ್ಲಿ ನಕ್ಷೆಯ ಹೊತ್ತಿಗೆ ವೀಕ್ಷಣೆ: ಇದಕ್ಕೂ ಮುನ್ನ ಸಚಿವರು ಚಾಮುಂಡೇಶ್ವರಿ ದರ್ಶನ ಪಡೆದು ಹೊರ ಬರುತ್ತಿದ್ದಂತೆ ಅಧಿಕಾರಿಗಳು ಪ್ರಸಾದ ಯೋಜನೆಯಲ್ಲಿ ನಡೆಸಲು ಉದ್ದೇಶಿಸಿರುವ ಕಾಮಗಾರಿಯ ನಕ್ಷೆವುಳ್ಳ ಕಿರುಹೊತ್ತಿಗೆ ನೀಡಿ, ವಿವರಿಸಿದರು. ಆ ನಂತರ ಲಲಿತಮಹಲ್ ಪ್ಯಾಲೇಸ್‌ನಲ್ಲಿ ಸಭೆ ನಡೆಸಿ, ಮಾಹಿತಿ ಪಡೆದರು.

ಚಾಮುಂಡಿಬೆಟ್ಟದಲ್ಲಿ ದೇವಾಲಯದ ವತಿಯಿಂದ ಸಚಿವ ಹೆಚ್.ಕೆ.ಪಾಟೀಲ್ ಅವರಿಗೆ ಗೌರವ ಸಲ್ಲಿಸಲಾಯಿತು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಜಿ.ಜಗದೀಶ್, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಹೆಚ್.ಪಿ.ಜನಾರ್ಧನ್, ದೇವಾಲಯದ ಆಡಳಿತಾಧಿಕಾರಿ ಗೋವಿಂದರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ಯಾಲೆಸ್ ಪುನಶ್ಚೇತನಕ್ಕೆ ಕ್ರಮ

ಸಾಧ್ಯವಿಲ್ಲ. ರಾಜರ ಕಾಲದ ಪಾರಂಪರಿಕ ಶೈಲಿಯನ್ನು ಕಾಪಾಡಿಕೊಳ್ಳಬೇಕಿದೆ. ಕಿಂಚಿತ್ತೂ ಅದಕ್ಕೆ ಧಕ್ಕೆ ಆಗದಂತೆ ಪುನಶ್ಚೇತನಗೊಳಿಸಬೇಕಿದೆ ಎಂದು ಪಾಟೀಲ್ ಅಭಿಪ್ರಾಯಪಟ್ಟರು. ಲಲಿತ ಮಹಲ್‌ನ ಒಂದು ರೂಂ ಅನ್ನು ನವೀಕರಣ ಮಾಡಲು ಲಕ್ಷಾಂತರ ರೂಪಾಯಿ ಬೇಕಿದೆ. ಹೀಗಿರುವಾಗ ಇಡೀ ಪ್ಯಾಲೆಸ್ ಕಟ್ಟಡವನ್ನು ಪುನಶ್ಚೇತನ ಮಾಡಲು ಎಷ್ಟು ಕೋಟಿ ಬೇಕಾಗಬಹುದು ಅಂದಾಜು ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಲಲಿತ ಮಹಲ್ ಪ್ಯಾಲೆಸ್ ಪಾರಂಪರಿಕತೆಗೆ ಧಕ್ಕೆ ಬಾರದಂತೆ ಪುನಶ್ಚೇತನಗೊಳಿಸಲಾಗುವುದು ಎಂದು ಹೇಳಿದರು. ಈ ಮೊದಲು ಮೈಸೂರಿಗೆ ಬರುತ್ತಿದ್ದ ರಾಷ್ಟ್ರಪತಿ, ಪ್ರಧಾನಮಂತ್ರಿ ಸೇರಿದಂತೆ ಹಲವು ಗಣ್ಯರು ಲಲಿತಮಹಲ್ ಪ್ಯಾಲೆಸ್ ಹೋಟೆಲ್‌ಗೆ ಹೋಗುತ್ತಿದ್ದರು. ಆದರೆ ಈಗ ಖಾಸಗಿ ಹೋಟೆಲ್‌ಗಳಿಗೆ ಹೋಗುತ್ತಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಹೆಚ್.ಕೆ.ಪಾಟೀಲ್, ಹಳೆಯದಾಗಿರುವ ಕಾರಣ ಇದರ ಗುಣಮಟ್ಟ ಕೂಡ ಕಡಿಮೆಯಾಗಿದೆ. ಪುನಶ್ಚೇತನಗೊಳಿಸಿದರೆ ಮೊದಲಿನ ಅಂದ ಬರುತ್ತದೆ ಎಂದರು. ಮೈಸೂರು ನಗರದಲ್ಲಿ ನೂರಾರು ಪಾರಂಪರಿಕ ಕಟ್ಟಡಗಳಿವೆ. ಅವುಗಳ ಸಂರಕ್ಷಣೆ ಹಾಗೂ ನಿರ್ವಹಣೆ ಅತ್ಯವಶ್ಯಕ. ಈ ನಿಟ್ಟಿನಲ್ಲಿ ಅವುಗಳ ಅಧ್ಯಯನ ಮಾಡಬೇಕಿದೆ. ತರುವಾಯ ಅದಕ್ಕೆ ಆಗುವ ಅಂದಾಜು ವೆಚ್ಚದ ಬಗ್ಗೆ ಈ ಜಿಲ್ಲೆಯವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚೆ ಮಾಡಿ ಕಾಯಕಲ್ಪ ನೀಡಲಾಗುವುದು ಎಂದು ಹೆಚ್.ಕೆ.ಪಾಟೀಲ್ ಹೇಳಿದರು.

ಎಲ್ಲಾ ಕೋರ್ಸ್‌ಗಳಿಗೂ ಒಮ್ಮೆಗೇ ಸೀಟು ಹಂಚಿಕೆ

ಹೀಗೆ ಮಾಡುತ್ತಿರುವುದು ಇದೇ ಮೊದಲು ಎಂದು ಅವರು ವಿವರಿಸಿದ್ದಾರೆ. ಪ್ರತ್ಯೇಕ ಸೀಟು ಹಂಚಿಕೆ ಪ್ರಕ್ರಿಯೆಯಿಂದಾಗಿ ಸಾಕಷ್ಟು ಅನಾನುಕೂಲಗಳು ಇದ್ದವು. ಒಬ್ಬ ಅಭ್ಯರ್ಥಿ ಒಮ್ಮೆಗೇ ಒಂದಕ್ಕಿಂತ ಹೆಚ್ಚು ಕೋರ್ಸ್‌ಗಳಲ್ಲಿ ಸೀಟು ಪಡೆದು, ನಂತರ ಆತ ಯಾವುದಾದರು ಒಂದಕ್ಕೆ ಪ್ರವೇಶ ಪಡೆಯುವವರೆಗೂ ಉಳಿದ ಕೋರ್ಸ್‌ಗಳಲ್ಲಿನ ಸೀಟು ಬೇರೆಯ ಅಭ್ಯರ್ಥಿಗಳಿಗೆ ಲಭ್ಯವಾಗುತ್ತಿರಲಿಲ್ಲ. ಇದರಿಂದ ಪ್ರತಿಭಾವಂತರಿಗೆ ಆಯ್ಕೆ ಸುತ್ತಿನಲ್ಲಿ ಸೀಟು ಕೈತಪ್ಪುತ್ತಿತ್ತು ಎಂದು ಅವರು ಹೇಳಿದ್ದಾರೆ. ಅಭ್ಯರ್ಥಿಗಳು ಯಾವುದೇ ಕೋರ್ಸ್‌ಗಳಿಗೆ ಪ್ರವೇಶ ಬಯಸಿದ್ದಲ್ಲಿ ಸೀಟ್ ಮ್ಯಾಟ್ರಿಕ್ಸ್ ಪ್ರಕಾರ ಶುಲ್ಕ ಮತ್ತು ಲಭ್ಯವಿರುವ ಸೀಟುಗಳನ್ನು ಪರಿಶೀಲಿಸಿ, ನಂತರ ತಮ್ಮ ಆದ್ಯತೆಯನುಸಾರ ಸೀಟುಗಳ ಆಪ್ಷನ್ ಎಂಟ್ರಿ ಮಾಡಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಹೊಸ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತೆ?: ಅಭ್ಯರ್ಥಿಯು ಆಪ್ಷನ್ ಎಂಟ್ರಿ ಮಾಡುವಾಗ ತನ್ನ ಮೊದಲ ಆದ್ಯತೆಯ ಕೋರ್ಸ್‌ಗಳನ್ನು ಮೊದಲು ದಾಖಲಿಸಬೇಕು. ಒಂದು ವೇಳೆ ಮೊದಲ ಆದ್ಯತೆಯ ಕೋರ್ಸ್ ಸಿಗದಿದ್ದರೆ ಅದರ ನಂತರದ ಆಯ್ಕೆಯ ಕೋರ್ಸ್ ಯಾವುದು ಎನ್ನುವುದನ್ನು ಎರಡನೇ ಆದ್ಯತೆಯಾಗಿ ದಾಖಲಿಸಬೇಕು. ಉದಾಹರಣೆಗೆ ವೈದ್ಯಕೀಯ ಕೋರ್ಸ್ ಬೇಕೆಂದು ಮೊದಲ ಆದ್ಯತೆ ನೀಡುವ ಅಭ್ಯರ್ಥಿ, ಒಂದು ವೇಳೆ ಅದು ಸಿಗದಿದ್ದಾಗ ತನ್ನ ಆದ್ಯತೆ ಎಂಜಿನಿಯರಿಂಗ್ ಎನ್ನುವುದನ್ನು ದಾಖಲಿಸಬೇಕು. ಆಗ ವೈದ್ಯಕೀಯ ಸೀಟು ಸಿಗದಿದ್ದಾಗ ನಂತರದ ಆದ್ಯತೆಯಾದ ಎಂಜಿನಿಯರಿಂಗ್‌ನಲ್ಲಿ ಸೀಟು ಹಂಚಿಕೆ ಆಗುತ್ತದೆ. ಇದೇ ರೀತಿ ಸೀಟ್ ಮ್ಯಾಟ್ರಿಕ್ಸ್ ಪ್ರಕಾರ ಎಷ್ಟು ಕೋರ್ಸ್‌ಗಳು ಇವೆಯೋ ಅಷ್ಟೂ ಕೋರ್ಸ್‌ಗಳಿಗೆ ಆದ್ಯತೆಯನುಸಾರ ಆಪ್ಷನ್ ಎಂಟ್ರಿ ಮಾಡುವುದರ ಮೂಲಕ ಸೀಟು ಪಡೆಯಬಹುದು ಎಂದು ಅವರು ವಿವರಿಸಿದರು. ಅಭ್ಯರ್ಥಿಯ ಮೆರಿಟ್, ಮೀಸಲಾತಿ ಹಾಗೂ ಆಪ್ಷನ್ ಎಂಟ್ರಿ ಆಧಾರದ ಮೇಲೆ ಮೊದಲ ಸುತ್ತಿನ ಸೀಟು ಹಂಚಿಕೆ ನಡೆಯುತ್ತದೆ. ಕೆಲ ಅಭ್ಯರ್ಥಿಗಳಿಗೆ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಎರಡೂ ಕೋರ್ಸ್‌ಗಳಲ್ಲಿ ಸೀಟು ದೊರೆಯುವ ಸಾಧ್ಯತೆ ಇರುತ್ತದೆ. ಅಂತಹವರು ಚಾಯ್ಸ್ ಎಂಟ್ರಿ ಸ್ಕ್ರೀನ್‌ನಲ್ಲಿ ಇವೆರಡರಲ್ಲಿ (ವೈದ್ಯಕೀಯ ಅಥವಾ ಎಂಜಿನಿಯರಿಂಗ್) ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ನಂತರ ಚಲನ್ ಮೂಲಕ ಶುಲ್ಕ ಪಾವತಿಸಿ ಅಡ್ಮಿಷನ್ ಆರ್ಡರ್ ಅನ್ನು ಆನ್‌ಲೈನ್ ಮೂಲಕ ಪಡೆದು ಸಂಬಂಧಪಟ್ಟ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕಾಗುತ್ತದೆ. ಬಳಿಕ ಅದನ್ನು ಕಾಲೇಜಿನ ಪೋರ್ಟಲ್‌ನಲ್ಲಿ ತಪ್ಪದೇ ಅಪ್ ಡೇಟ್ ಮಾಡಿಸಬೇಕು. ಒಂದು ವೇಳೆ ಹಾಗೆ ಮಾಡದಿದ್ದರೆ ಸದರಿ ಸೀಟು ಖಾಲಿ ಇದೆ ಎಂದು ಭಾವಿಸಿ, ಅದನ್ನು ಮುಂದಿನ ಸುತ್ತಿನ ಹಂಚಿಕೆಗೂ ಬಳಸಿಕೊಳ್ಳುವ ಅಪಾಯ ಇರುತ್ತದೆ.

ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಅಭ್ಯರ್ಥಿಯು ಮಾಡಿರುವ ಆಪ್ಷನ್ ಎಂಟ್ರಿ ಪ್ರಕಾರ ಯಾವುದಾದರೊಂದು ಕೋರ್ಸ್‌ನಲ್ಲಿ (ವೈದ್ಯಕೀಯ, ಎಂಜಿನಿಯರಿಂಗ್, ಪಶುವೈದ್ಯ ಇತ್ಯಾದಿ) ಸೀಟು ಪಡೆಯಬೇಕು.

ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳಲ್ಲಿ ಎರಡನೇ ಸುತ್ತಿನ ಸೀಟು ಹಂಚಿಕೆ ನಂತರ ಕಡ್ಡಾಯವಾಗಿ ತಮಗೆ ಹಂಚಿಕೆಯಾದ ಸೀಟಿಗೆ ಶುಲ್ಕ ಪಾವತಿಸಿ, ಪ್ರವೇಶ ಪಡೆಯಬೇಕು. ಇಲ್ಲದಿದ್ದರೆ ಸದರಿ ಸೀಟುಗಳನ್ನು ದಂಡದ ಮೊತ್ತ ಪಾವತಿಸಿ ರದ್ದುಪಡಿಸಬೇಕು. ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ ಮಾಪ್‌ಅಪ್ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ. ಆದರೆ ಎರಡನೇ ಸುತ್ತಿನಲ್ಲಿ ದಂತ ವೈದ್ಯಕೀಯ ಸೀಟು ದೊರೆತ ಅಭ್ಯರ್ಥಿಗಳು ಸೀಟನ್ನು ರದ್ದುಪಡಿಸದೇ ವೈದ್ಯಕೀಯ ಕೋರ್ಸ್ ನ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದೆ. ಎಂಜಿನಿಯರಿಂಗ್ ಸೀಟುಗಳಿಗೆ ಮೂರನೇ ಸುತ್ತಿನವರೆಗೂ ಭಾಗವಹಿಸಬಹುದು. ಆದರೆ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದಲ್ಲಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ. ಮೂರನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಚಾಯ್ಸ್–3 ಕೊಟ್ಟಿರುವ ಅಭ್ಯರ್ಥಿಗಳು ಹಾಗೂ ಯಾವುದೇ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳ ಮೊದಲೆರಡು ಸುತ್ತಿನಲ್ಲಿ ಮಾಡಿದ್ದ ಆಪ್ಷನ್ ಎಂಟ್ರಿಗಳನ್ನು ಡಿಲೀಟ್ ಮಾಡಲಾಗಿರುತ್ತದೆ. ಅಭ್ಯರ್ಥಿಯು ಮೂರನೇ ಸುತ್ತಿಗೆ ಹೊಸದಾಗಿ ಆಪ್ಷನ್ ಎಂಟ್ರಿ ಮಾಡಬೇಕು. ಮೂರನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ರದ್ದುಪಡಿಸಲು ಎಲ್ಲ ವರ್ಗದ ಅಭ್ಯರ್ಥಿಗಳು ಶುಲ್ಕದ ಐದು ಪಟ್ಟು ದಂಡ ಕಟ್ಟಬೇಕಾಗುತ್ತದೆ. ಹೀಗಾಗಿ ಅಭ್ಯರ್ಥಿಗಳು ಎಚ್ಚರಿಕೆಯಿಂದಲೇ ಮೂರನೇ ಸುತ್ತಿನ ಆಪ್ಷನ್ ಎಂಟ್ರಿ ಮಾಡಬೇಕು.

ಮಾಪ್‌ಅಪ್ ಸುತ್ತು: ಎರಡನೇ ಸುತ್ತಿನಲ್ಲಿ ಎಂಜಿನಿಯರಿಂಗ್, ನರ್ಸಿಂಗ್, ಆರ್ಕಿಟೆಕ್ಚರ್, ಪಶುವೈದ್ಯಕೀಯ, ಕೃಷಿ–ಸೀಟು ದೊರೆತ ಅಭ್ಯರ್ಥಿಗಳು ದಂಡ ಪಾವತಿಸಿ, ತಮ್ಮ ಸೀಟನ್ನು ರದ್ದುಪಡಿಸಿದ ನಂತರವೇ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್ ನ ಮಾಪ್‌ಅಪ್ ಸುತ್ತಿನಲ್ಲಿ ಭಾಗವಹಿಸಬಹುದು.

ಅದೇ ರೀತಿ ಎರಡನೇ ಸುತ್ತಿನಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಸೀಟುಗಳು ಹಂಚಿಕೆಯಾದ ಅಭ್ಯರ್ಥಿಗಳು ಸದರಿ ಸೀಟುಗಳನ್ನು ದಂಡ ಪಾವತಿಸಿ ರದುಪಡಿಸಿದ ನಂತರ ಎಂಜಿನಿಯರಿಂಗ್ ಮಾಪ್‌ಅಪ್ ಸುತ್ತಿನಲ್ಲಿ ಭಾಗವಹಿಸಬಹುದು.

ದ್ವಿಚಕ್ರ, ತ್ರಿಚಕ್ರ ಸೇರಿ ಕೆಲ ವಾಹನಗಳಿಗೆ ನಿಷೇಧ

80ರಿಂದ 100 ಕಿಲೋಮೀಟರ್ ವೇಗದ ಮಿತಿ ನಿಗದಿಪಡಿಸಲಾಗಿದೆ. ಈ ಕುರಿತೂ ಹೆದ್ದಾರಿ ಪ್ರಾಧಿಕಾರದ ಅಧಿಸೂಚನೆಯಲ್ಲಿ ಉಲ್ಲೇಖಿಸಲಾಗಿದೆ.

2000ಕ್ಕೂ ಹೆಚ್ಚು ವಾಹನಗಳ ಮಾಲೀಕರ ವಿರುದ್ಧ ಪ್ರಕರಣ: ಜುಲೈ ತಿಂಗಳಲ್ಲಿ 24ನೇ ತಾರೀಖಿನವರೆಗೆ ಎಕ್ಸ್‌ಪ್ರೆಸ್‌ವೇನಲ್ಲಿ ಅತಿವೇಗದ ಚಾಲನೆಗಾಗಿ (ಗಂಟೆಗೆ 100 ಕಿಮೀಗಿಂತ ಹೆಚ್ಚು ವೇಗದ ಚಾಲನೆ) 2,000 ಕ್ಕೂ ಹೆಚ್ಚು ವಾಹನಗಳ ಮಾಲೀಕರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರಚಿಸಿದ ಸುರಕ್ಷತಾ ಸಮಿತಿಯು ಎಕ್ಸ್‌ಪ್ರೆಸ್‌ವೇ ಸುರಕ್ಷತೆಗೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸಿದೆ. ಏತನ್ಮಧ್ಯೆ, ಎಡಿಜಿಪಿ ಅಲೋಕ್ ಕುಮಾರ್ ಮಂಗಳವಾರ ಮತ್ತೊಮ್ಮೆ ಎಕ್ಸ್‌ಪ್ರೆಸ್‌ವೇ ಪರಿಶೀಲನೆ ನಡೆಸಲಿದ್ದಾರೆ. ಅಲೋಕ್ ಕುಮಾರ್ ಬಿಡದಿಯಿಂದ ಮೈಸೂರುವರೆಗಿನ ಎಕ್ಸ್‌ಪ್ರೆಸ್‌ವೇಯನ್ನು ಪರಿಶೀಲಿಸಲಿದ್ದಾರೆ. ಅಲೋಕ್ ಕುಮಾರ್ ಅವರು ಈ ಹಿಂದೆ ಜೂನ್‌ನಲ್ಲಿ ಎಕ್ಸ್‌ಪ್ರೆಸ್‌ವೇ ಪರಿಶೀಲನೆ ನಡೆಸಿದ್ದರು. ನಂತರ ಎಕ್ಸ್‌ಪ್ರೆಸ್‌ವೇಯಲ್ಲಿ ವೇಗದ ಮಿತಿಯನ್ನು ಜಾರಿಗೆ ತರಲಾಗಿತ್ತು. ಅಪಘಾತಗಳ ಸಂಖ್ಯೆ ಹೆಚ್ಚಳಕ್ಕೆ ಪ್ರಮುಖ ಕಾರಣಗಳಲ್ಲಿ ಅತಿವೇಗವು ಒಂದಾಗಿದೆ ಎಂದು ಅವರು ಹೇಳಿದ್ದರು. ಮಾರ್ಚ್‌ನಲ್ಲಿ ಲೋಕಾರ್ಪಣೆಯಾದ ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ 570 ಕ್ಕೂ ಹೆಚ್ಚು ಅಪಘಾತಗಳು ವರದಿಯಾಗಿವೆ. ಎಕ್ಸ್‌ಪ್ರೆಸ್‌ವೇಯಲ್ಲಿ ಸಂಭವಿಸಿದ ಅಪಘಾತಗಳಲ್ಲಿ 100 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು 350 ಜನರು ಗಾಯಗೊಂಡಿದ್ದಾರೆ.

ತಾಳ್ಮೆ, ಪ್ರೀತಿಯಿಂದ ಸಾಗಿದರೆ ಎಲ್ಲವೂ ಸಾಧ್ಯವಾಗುತ್ತದೆ

- ರಾಮಕೃಷ್ಣ ವಿದ್ಯಾಶಾಲಾ ಮಕ್ಕಳಿಗೆ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಜೀವನ ಪಾಠ
- ಶಾಲೆಯ ವಿದ್ಯಾರ್ಥಿ ಪರಿಷತ್ ಉದ್ಘಾಟನೆ; ಮಕ್ಕಳ ಪ್ರತಿಭೆಗೆ ಮಾರುಹೋದ ಸಚಿವರು!



ಮೈಸೂರು ಯಾದವಗಿರಿಯಲ್ಲಿರುವ ರಾಮಕೃಷ್ಣ ವಿದ್ಯಾಶಾಲೆಯಲ್ಲಿ 2023–24ನೇ ಸಾಲಿನ ವಿದ್ಯಾರ್ಥಿ ಪರಿಷತ್ ಅನ್ನು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಉದ್ಘಾಟಿಸಿದರು. ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ, ರಾಮಕೃಷ್ಣ ವಿದ್ಯಾಶಾಲಾ ಮುಖ್ಯಸ್ಥ ಸ್ವಾಮಿ ಯುಕ್ತೇಶಾನಂದಜೀ ಮತ್ತಿತರರಿದ್ದರು.

ಮೈಸೂರು, ಜು.24(ಎಂಕೆ)– ಒಳಿತನ್ನು ಉಳಿಸಿ, ಕೆಡುಕನ್ನು ಅಳಿಸಿ. ದ್ವೇಷ ಅಳಿಸಿ, ಪ್ರೀತಿ ಬೆಳೆಸಿದರೆ ಎಲ್ಲವೂ ಪ್ರೀತಿಯ ಹಿಂದೆಯೇ ಸಾಗಲಿದೆ. ಪ್ರೀತಿ–ಭ್ರಾತೃತ್ವ ಭಾವದೊಂದಿಗೆ ಆತ್ಮವಿಶ್ವಾಸದಿಂದ ಗುರಿಯತ್ತ ಸಾಗಿದರೆ ಎಲ್ಲವೂ ಸಾಧ್ಯವಾಗುತ್ತದೆ ಎಂದು ಕಾನೂನು, ನ್ಯಾಯ, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರು ಯಾದವಗಿರಿಯಲ್ಲಿರುವ ರಾಮಕೃಷ್ಣ ವಿದ್ಯಾಶಾಲೆಯಲ್ಲಿ 2023–24ನೇ ಸಾಲಿನ ವಿದ್ಯಾರ್ಥಿ ಪರಿಷತ್ ಉದ್ಘಾಟಿಸಿ ಮಾತನಾಡಿದ ಅವರು, ಬುದ್ಧಿವಂತಿಕೆಯಿಂದ ಎಲ್ಲವನ್ನೂ ಸಾಧಿಸಲಾಗುವುದಿಲ್ಲ. ಸಮಾಧಾನ(ತಾಳ್ಮೆ) ಹಾಗೂ ತನ್ನವರೊಂದಿಗೆ ಪ್ರೀತಿ, ಭ್ರಾತೃತ್ವ ಭಾವನೆ ಹೊಂದಿರಬೇಕು. ನನಗೆ ಬಹಳ ಜ್ಞಾನವಿದೆ ಎಂದುಕೊಂಡರೆ ಭವಿಷ್ಯವೇ ಇಲ್ಲದಂತಾಗುತ್ತದೆ. ಯಂತ್ರಗಳು ನಮಗಿಂತಲೂ ಚೆನ್ನಾಗಿಯೇ ಕೆಲಸ ಮಾಡುತ್ತವೆ. ಕೃತಕ ಬುದ್ಧಿವಂತಿಕೆ ತುಂಬಾ ವೇಗವಾಗಿದ್ದು, ಇದಕ್ಕೆ ಸರಿಸಮವಾಗಿ ನಿಲ್ಲುವುದು ಕಷ್ಟವಾಗಿದೆ. ವಿಜ್ಞಾನ ಜಗತ್ತಿನಲ್ಲಿ ಯಂತ್ರಗಳು ಮಾನವನನ್ನೇ ಮೀರಿಸುತ್ತಿದ್ದರೂ ಜನರನ್ನು ಪ್ರೀತಿಸಲು ಸಾಧ್ಯವಿಲ್ಲ. ಆದ್ದರಿಂದ ನಮ್ಮೊಳಗೆ ನಾವು ಪ್ರೀತಿ, ಭ್ರಾತೃತ್ವ ಭಾವನೆ ಬೆಳೆಸಿಕೊಳಬೇಕು ಎಂದು ಕಿವಿಮಾತು ಹೇಳಿದರು.

ಜೀವನದಲ್ಲಿ ಎತ್ತರಕ್ಕೆ ಬೆಳೆಯಬೇಕು ಎಂದರೆ ಉತ್ತಮ ಚಾರಿತ್ರ್ಯ ರೂಪಿಸಿಕೊಳ್ಳುವುದರ ಜೊತೆಗೆ ಆತ್ಮವಿಶ್ವಾಸದಿಂದ ಮುನ್ನಡೆಯಬೇಕು. ಆತ್ಮವಿಶ್ವಾಸ ಮಾತ್ರವೇ ಗೆಳೆಯನಾಗಿ ಕಷ್ಟಕ್ಕೆ ನಿಲ್ಲುವುದು. ಆರ್ಥಿಕ ತೊಂದರೆ, ತೊಡಕು, ಕಷ್ಟ–ದುಃಖಗಳನ್ನು ಅನುಭವಿಸುತ್ತಿರುವ ಕುಟುಂಬದ ಹಿನ್ನೆಲೆಯಿಂದ ಬಂದಿದ್ದರೂ ಆತ್ಮವಿಶ್ವಾಸವಿದ್ದರೆ ಎಲ್ಲವನ್ನು ಮೀರಿ ಬೆಳೆಯುವುದರಲ್ಲಿ ಎರಡು ಮಾತಿಲ್ಲ ಎಂದು ವಿಶ್ವಾಸ ಮೂಡಿಸಿದರು.

'ಸಾರೇ ಜಹಾನ್ ಸೆ ಅಚ್ಚಾ.. ಹಿಂದುಸ್ತಾನ್ ಹಮಾರ' ಹಾಡನ್ನು ಮೆಲುಕು ಹಾಕುತ್ತಾ, ಈ ರಾಷ್ಟ್ರವನ್ನು ಸ್ವಾತಂತ್ರ್ಯಗೊಳಿಸಿದ ಮಹಾತ್ಮ ಗಾಂಧೀಜಿ, ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಭಗತ್ ಸಿಂಗ್, ಚಂದ್ರಶೇಖರ್ ಅಜಾದ್ ಇನ್ನಿತರ ಹೋರಾಟಗಾರರು ಹಾಗೂ ದೇಶಕಟ್ಟುವಲ್ಲಿ ವಿಶೇಷ ಪಾತ್ರ ನಿರ್ವಹಿಸಿದ ಮಹನೀಯರಾದ ರಾಜೇಂದ್ರ ಪ್ರಸಾದ್, ರಾಧಾಕೃಷ್ಣನ್, ಅಬ್ದುಲ್ ಕಲಾಂ ಇನ್ನಿತರರೆಲ್ಲರೂ ದೇಶವನ್ನು ಯಾವ ಮಟ್ಟಕ್ಕೆ ಬೆಳೆಸಿದ್ದಾರೆ ಎಂಬುದನ್ನು ಸ್ಮರಿಸಬೇಕು ಎಂದರು.

ಸಂವಿಧಾನವನ್ನು ಅಪ್ಪಿಕೊಳ್ಳಬೇಕು: ವಿದ್ಯಾರ್ಥಿ ಪರಿಷತ್ ಚುನಾವಣೆ ಮಾಡಿ, ಅದರಲ್ಲಿ ಗೆಲುವು ಪಡೆದು ಶಾಲೆಯಿಂದ ಹೊರಗೆ ಬಂದ ನಂತರ ಶಾಲೆಯಲ್ಲಿ ಕಲಿಸಿದ್ದು ಒಂದು, ಇಲ್ಲಿರುವುದೇ ಒಂದು ಎಂದುಕೊಳ್ಳಬೇಡಿ. ಪ್ರಾಮಾಣಿಕವಾಗಿ ಏನನ್ನು ಮಾಡುತ್ತಿದ್ದೀರಿ, ಕಲಿತ್ತಿದ್ದೀರಿ ಹಾಗೂ ಕಲಿಕೆಯ ವಾಕ್ ಆಫ್ ಲೈಫ್ ಹೇಗಿರಬೇಕು ಎಂಬುದನ್ನು ಡಾ.ಅಂಬೇಡ್ಕರ್, ಸಂವಿಧಾನದ ಮೂಲಕ ತಿಳಿಸಿಕೊಟ್ಟಿದ್ದಾರೆ. ಆ ಸಂವಿಧಾನವನ್ನು ನಾವೆಲ್ಲರೂ ಓದಿಕೊಂಡು, ಅಪ್ಪಿಕೊಂಡು ಅದರಂತೆ ನಡೆಯುತ್ತಿದ್ದೇವೆ ಮತ್ತು ನಡೆಯಲೇಬೇಕು ಎಂದು ತಿಳಿಸಿದರು.

ಶಕ್ತಿಶಾಲಿ ರಾಷ್ಟ್ರ: ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಎಲ್ಲರಿಗೂ ಆಹಾರ ಇರಲಿಲ್ಲ. ದೇಶದಲ್ಲಿದ್ದ ಸಂಪತ್ತನ್ನು ಪರಕೀಯರು ಕಿತ್ತುಕೊಂಡು ಹೋಗಿದ್ದರು. ಕಾರ್ಖಾನೆಗಳು, ಡ್ಯಾಂ, ರಸ್ತೆ, ಟ್ರೈನ್, ಬಸ್‌ಗಳು ಇರಲಿಲ್ಲ. ಇದ್ದರೂ ಅದು ಹತ್ತಾರು ಜನರಿಗೆ ಮಾತ್ರವೇ ಸೀಮಿತವಾಗಿತ್ತು ಆದರೆ ನಂತರದ 75 ವರ್ಷಗಳಲ್ಲಿ ದೇಶವನ್ನು ಕಟ್ಟಿರುವ ರೀತಿ, ಗಳಿಸಿರುವ ಆಸ್ತಿಯನ್ನು ಗಮನಿಸಿದರೆ ಅಮೆರಿಕಾ, ಚೀನಾದಂತಹ ದೇಶಗಳಿಗೂ ಸಡ್ಡು ಹೊಡೆಯುತ್ತೇವೆ. ಭಾರತೀಯರು ಬುದ್ಧಿವಂತಿಕೆಯಲ್ಲಿ ಜಗತ್ತಿನ ಯಾವುದೇ ರಾಷ್ಟ್ರದ ಜನರಿಗೂ ಕಡಿಮೆ ಇಲ್ಲ ಎಂಬುದನ್ನು ಪ್ರಯತ್ನ ಹಾಗೂ ಸಾಧನೆಗಳ ಮೂಲಕ ತೋರಿಸಲಾಗಿದೆ ಎಂದರು.

ಹಸಿವು ಮುಕ್ತ ರಾಜ್ಯ: 75 ವರ್ಷದ ಹಿಂದೆ ಏನೂ ಇರಲಿಲ್ಲ. ಇಂದು ನಿಮ್ಮ ಕುಟುಂಬಗಳಿಗೆ ಅಕ್ಕಿ, ಗೋಧಿ ಉಚಿತವಾಗಿ ತಲುಪುವ ವ್ಯವಸ್ಥೆಯಾಗುತ್ತಿದೆ. ಒಂದು ಕಾಲದಲ್ಲಿ ಹಸಿವಿನಿಂದ ಅಷ್ಟು ಜನ, ಇಷ್ಟು ಜನ ಸತ್ತರು ಎಂದು ಹೇಳಲಾಗುತ್ತಿತ್ತು ಆದರೆ ಇಂದು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡಲಾಗಿದೆ. ಇಂತಹ ರಾಜ್ಯ, ರಾಷ್ಟ್ರವನ್ನು ನಿಮ್ಮ ಕೈಗೆ(ವಿದ್ಯಾರ್ಥಿಗಳ) ಕೊಡುತ್ತಿದ್ದು, ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು ಎಂಬುದನ್ನು ಚಿಂತಿಸಬೇಕು.



ವಿದ್ಯಾರ್ಥಿ ಪರಿಷತ್ ಪದಾಧಿಕಾರಿಗಳನ್ನು ಅಭಿನಂದಿಸಿದ ಸಚಿವರು

ನಾನು ಪರಿವರ್ತನೆಯಾಗಲು ಬಂದಂತಾಯಿತು...!

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸಬೇಕು. ರಾಷ್ಟ್ರದ ಶ್ರೇಷ್ಠ ನಾಯಕರ ಪರಿಚಯ ಮಾಡಿಕೊಡುವ ಮೂಲಕ ಉತ್ತಮ ನಾಗರಿಕನ್ನಾಗಿಸುವ ವಿಚಾರವನ್ನು ನನ್ನ ಮೂಲಕ ನಿಮಗೆ(ವಿದ್ಯಾರ್ಥಿಗಳಿಗೆ) ತಿಳಿಸಬೇಕೆಂದು ರಾಮಕೃಷ್ಣ ಆಶ್ರಮದ ಸ್ವಾಮೀಜಿಯವರು ನನಗೆ ಆಹ್ವಾನ ನೀಡಿದ್ದಾರೆ ಎಂದು ಭಾವಿಸಿಕೊಂಡಿದ್ದೆ. ಆದರೆ ಯಾವಾಗ ವಿದ್ಯಾರ್ಥಿಗಳಾದ ರೋಹಿತ್, ಸಾಯಿ ಶಾಶ್ವತ್, ವಿವೇಕಾನಂದರ ಕುರಿತು ಶ್ರೀಶಾಂತ್ ಇನ್ನಿತರರ ಮಾತು ಕೇಳಿದಾಗ ನನಗೆ ಅನಿಸಿದ್ದು, ನನ್ನನ್ನು ಇಲ್ಲಿ ಮಾತನಾಡಲು ಕರೆದಿಲ್ಲ. ಅವರ ಮಾತುಗಳನ್ನು ಕೇಳಿ ನಾನೇ ಪರಿವರ್ತನೆಯಾಗಲು ಕರೆದಿದ್ದಾರೆ ಅನ್ನಿಸುತ್ತಿದೆ. ನೇರವಾಗಿ ಆತ್ಮಕ್ಕೆ, ಹೃದಯಕ್ಕೆ ಮುಟ್ಟುವಂತಹ ಮಾತುಗಳನ್ನಾಡಿದ ವಿದ್ಯಾರ್ಥಿಗಳು ಹಾಗೂ ಅವರನ್ನು ತಯಾರು ಮಾಡಿರುವ ರಾಮಕೃಷ್ಣ ವಿದ್ಯಾಶಾಲಾ ಶಿಕ್ಷಕ ವೃಂದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ.

– **ಹೆಚ್.ಕೆ.ಪಾಟೀಲ್,** ಕಾನೂನು, ನ್ಯಾಯ, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವ

ನಮ್ಮ ಮೂಲಭೂತ ಸೌಲಭ್ಯ ಹೆಚ್ಚಾಗಬೇಕು. ಸಂಪತ್ತು ವೃದ್ಧಿಯಾಗಬೇಕು. ನೂರು ವರ್ಷಗಳ ಸ್ವಾತಂತ್ರ್ಯ ಮಹೋತ್ಸವದ ವೇಳೆಗೆ ಜಗತ್ತಿನ ಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡಬೇಕು ಎಂದು ಕರೆ ನೀಡಿದರು.

ಸಂತೋಷ ತಂದಿದೆ: ಕಲುಷಿತ ವಾತಾವರಣದೊಂದಿಗೆ ಬೆಳೆಯುತ್ತಿರುವ ಸಮಾಜದ ನಡುವೆಯೂ ಒಂದು ಕಡೆ ಬೈಬಲ್, ಮತ್ತೊಂದು ಕಡೆ ಕುರಾನ್, ಇನ್ನೊಂದು ಕಡೆ ಭಗವದ್ಗೀತೆ ಇಟ್ಟು ಕಾರ್ಯಕ್ರಮ ನಡೆಸಿ, ಭ್ರಾತೃತ್ವ ಭಾವನೆಯನ್ನು ಬಿತ್ತುವ ಮೂಲಕ ಈ ಕಾರ್ಯಕ್ರಮ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದೆ. ನಾವು ದೇಶದಿಂದ ಅಪೇಕ್ಷೆ ಮಾಡುವ ಬದಲು ನಾವು ದೇಶಕ್ಕೆ ಕೊಡುಗೆ ನೀಡಬೇಕು ಎಂಬ ಭಾವ ಮೂಡಿಸುವ ಶಿಕ್ಷಣವನ್ನು ರಾಮಕೃಷ್ಣ ವಿದ್ಯಾಶಾಲೆಯಲ್ಲಿ ನೀಡುತ್ತಿರುವುದು ನನಗೆ ಸಂತೋಷ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆದ್ಯತೆ ಆಧಾರಿತ ಚುನಾವಣೆ: ಶಾಲೆಗಳಲ್ಲಿ ಆದ್ಯತೆ ಆಧಾರಿತ ಚುನಾವಣೆಗಳನ್ನು ನಡೆಸಿ, ಜವಾಬ್ದಾರಿಗಳನ್ನು ನೀಡಬೇಕು. ಇದರಿಂದ ಕಡೆಯ ಸ್ಪರ್ಧಿಯೂ ಮತಗಳನ್ನು ಪಡೆಯುತ್ತಾನೆ. ಜಾತಿ, ಹಣ ಎಲ್ಲವನ್ನೂ ಮೀರಿ, ನಡೆಯುವುದು ಆದ್ಯತೆ ಆಧಾರಿತ ಚುನಾವಣೆಯಾಗಿದೆ. ಹಾಗೆಯೇ ವಿದ್ಯಾರ್ಥಿಗಳು ನಾಯಕರಾಗುವ ಕನಸು ಕಾಣಬೇಕು. ನೀವು ಅಂಕ ಕಡಿಮೆ ತೆಗೆದುಕೊಂಡರೂ ಶಾಲೆಯಲ್ಲಿ ಕಲಿತಿರುವ ಮೌಲ್ಯಗಳನ್ನು ಅನುಕರಣೆ ಮಾಡುವ ಬದ್ಧತೆಯನ್ನು ತೋರಬೇಕು. ಆಗಲೇ ನಿಮ್ಮ ಬದುಕು ಬಹಳಷ್ಟು ಎತ್ತರಕ್ಕೆ ಹೋಗಲಿದೆ ಎಂದು ಸಲಹೆ ನೀಡಿದರು.

ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ, ರಾಮಕೃಷ್ಣ ವಿದ್ಯಾಶಾಲಾ ಮುಖ್ಯಸ್ಥ ಸ್ವಾಮಿ ಯುಕ್ತೇಶಾನಂದಜೀ, ವಿದ್ಯಾಶಾಲಾ ಪ್ರಾಂಶುಪಾಲ ಎಸ್.ಬಾಲಾಜಿ, ವಿದ್ಯಾರ್ಥಿ ಪರಿಷತ್‌ನ ಅಧ್ಯಕ್ಷ ರೋಹಿತ್ ನಾಗಪ್ಪ ಗದೇದ್, ಉಪಾಧ್ಯಕ್ಷ ಪ್ರತೀತ್ ಗುಡಿ ಸಾಗರ್, ಪ್ರಧಾನ ಕಾರ್ಯದರ್ಶಿ ಸಾಯಿ ಶಾಶ್ವತ್, ಜಂಟಿ ಕಾರ್ಯದರ್ಶಿ ಧ್ರುವ್ ಪ್ರಸಾದ್ ಉಪಸ್ಥಿತರಿದ್ದರು.

ಎರಡು ದಿನದಲ್ಲಿ ಕೆಸರೆ ತ್ಯಾಜ್ಯ ವಿಲೇವಾರಿ ಘಟಕ ಪ್ರಾಯೋಗಿಕವಾಗಿ ಆರಂಭ

- ಯಂತ್ರೋಪಕರಣಗಳ ಅಳವಡಿಕೆ ಕಾರ್ಯ ಪೂರ್ಣ
- ಸಿಬ್ಬಂದಿಗಳಿಗೆ ತರಬೇತಿ



ಮೈಸೂರು,ಜು.24(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಕೆಸರೆಯಲ್ಲಿ ನೂತನವಾಗಿ ನಿರ್ಮಿಸಿರುವ ತ್ಯಾಜ್ಯ ವಿಲೇವಾರಿ ಘಟಕದ ಕಾಮಗಾರಿ ಪೂರ್ಣಗೊಂಡಿದ್ದು, ಎರಡು ದಿನದಲ್ಲಿ ಪ್ರಾಯೋಗಿಕವಾಗಿ ಕಾರ್ಯಾರಂಭ ಮಾಡಲಿದೆ.

ಮೈಸೂರು ನಗರದಲ್ಲಿ ಪಾಲಿಕೆಯ 9 ವಲಯ ಕಚೇರಿ 65 ವಾರ್ಡ್‌ಗಳಲ್ಲಿ ಪ್ರತಿದಿನ 500ಕ್ಕೂ ಹೆಚ್ಚು ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಅದನ್ನು ಪೂರ್ಣ ಪ್ರಮಾಣದಲ್ಲಿ ವೈಜ್ಞಾನಿಕ ವಿಲೇವಾರಿ ಮಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರಿಂದ ವಿದ್ಯಾರಣ್ಯಪುರಂನಲ್ಲಿರುವ ತ್ಯಾಜ್ಯ ವಸ್ತು ವಿಲೇವಾರಿ ಘಟಕದಲ್ಲಿ ಅಪಾರ ಪ್ರಮಾಣದ ತ್ಯಾಜ್ಯ ಸಂಗ್ರಹವಾಗಿದೆ. ಈ ನಿಟ್ಟಿನಲ್ಲಿ ಕೆಸರೆ ಹಾಗೂ ರಾಯನಕೆರೆಯಲ್ಲಿ ನೂತನವಾಗಿ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲು ಪಾಲಿಕೆ ಮುಂದಾಗಿತ್ತು.

ಇದೀಗ ಕೆಸರೆಯಲ್ಲಿ ನಿರ್ಮಿಸಿರುವ ತ್ಯಾಜ್ಯ ವಿಲೇವಾರಿ ಘಟಕದ ಕಾಮಗಾರಿ ಪೂರ್ಣಗೊಂಡಿದ್ದು, 15 ದಿನದ ಹಿಂದೆಯೇ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ಘಟಕಕ್ಕೆ ವಿದ್ಯುತ್ ಸಂಪರ್ಕದ ಕಾರ್ಯ ಮಾತ್ರ ಬಾಕಿ ಇತ್ತು. ನಾಲ್ಕು ದಿನದ ಹಿಂದೆ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿದ್ದು, ತ್ಯಾಜ್ಯ ವಿಲೇವಾರಿ ಘಟಕ ಕಾರ್ಯಾರಂಭಕ್ಕೆ ಸಜ್ಜಾಗಿದೆ. ಈಗಾಗಲೇ ಘಟಕಕ್ಕೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಯಂತ್ರೋಪಕರಣದ ನಿರ್ವಹಣೆಯ ಬಗ್ಗೆ ತರಬೇತಿಯನ್ನು ನೀಡಲಾಗಿದೆ.

ಈ ಘಟಕದಲ್ಲಿ ಪ್ರತಿದಿನ 200 ಟನ್ ತ್ಯಾಜ್ಯ ವಿಲೇವಾರಿ ಮಾಡುವ ಸಾಮರ್ಥ್ಯ ಹೊಂದಿದೆಯಾದರೂ ಪ್ರಾಯೋಗಿಕ 50 ಟನ್ ಸಾಮರ್ಥ್ಯದ ತ್ಯಾಜ್ಯ ವಿಲೇವಾರಿ ಮಾಡುವ ಕಾರ್ಯ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಜು. 25 ಅಥವಾ 26ರಂದು ಪ್ರಾಯೋಗಿಕ ಕಾರ್ಯ ಆರಂಭಿಸಲಾಗುತ್ತದೆ. ಈ ಘಟಕಕ್ಕೆ ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 7, 8, 9 ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ರವಾನಿಸಲಾಗುತ್ತದೆ. ಎನ್.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಸಂಗ್ರಹವಾಗುವ ತ್ಯಾಜ್ಯ ವಿಲೇವಾರಿಗೆ ಈ ನೂತನ ಘಟಕ ಸಹಕಾರಿಯಾಗಲಿದೆ.

ಅಂತಾರಾಷ್ಟ್ರೀಯ ಜಾವಾ ದಿನದಂದು ಬೈಕ್ ಸವಾರಿ

ಮೈಸೂರು,ಜು.24(ಪಿಎಂ)– ಅಂತಾರಾಷ್ಟ್ರೀಯ ಜಾವಾ ದಿನದ ಪ್ರಯುಕ್ತ ಹಾಗೂ ಸಂಚಾರದಲ್ಲಿ ಸುರಕ್ಷೆ ಕಾಯ್ದುಕೊಳ್ಳುವ ಬಗ್ಗೆ ಜಾಗೃತಿ ಮೂಡಿಸಲು ಯೆಜ್ಡಿ ಅಡ್ವೆಂಚರ್ ಬೈಕ್‌ನಲ್ಲಿ ಮೈಸೂರಿನಿಂದ ಕನ್ಯಾಕುಮಾರಿವರೆಗೆ ಬೈಕ್ ಸವಾರಿ ನಡೆಸಿದೆ ಎಂದು



ವನ್ಯಜೀವಿ ಛಾಯಾಗ್ರಾಹಕ ಮನೀಶ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಶ್ರೀ ಜೈನ್ ಮೊಬೈಕ್ಸ್ ಜಾವಾ ಯೆಜ್ಡಿ ಶೋ ರೂಮ್ ಪರವಾಗಿ ಜು.7ರಂದು ಬೆಳಗ್ಗೆ 6.30ಕ್ಕೆ ಮೈಸೂರಿನಿಂದ ಪ್ರಯಾಣ ಬೆಳೆಸಿ, ಜು.10ರಂದು ಮೈಸೂರಿಗೆ ಹಿಂತಿರುಗಿದೆ. ಇಬ್ಬರು ಸ್ನೇಹಿತರು ಜೊತೆಯಲ್ಲಿ ಬಂದಿದ್ದರು. ಒಟ್ಟು 1,750 ಕಿ.ಮೀ. ಅನ್ನು ಈ ಸವಾರಿ ಒಳಗೊಂಡಿತ್ತು ಎಂದರು.

ಯಾವುದೇ ವಾಹನ ಚಾಲನೆಯಲ್ಲಿ ಅತೀ ವೇಗ ಸಲ್ಲದು. ನಗರ ಪರಿಮಿತಿಯಲ್ಲಿ 40 ಕಿ.ಮೀ. ವೇಗದಲ್ಲಿ ಸಂಚರಿಸಬೇಕು. ಸಂಚಾರ ನಿಯಮ ಪಾಲಿಸಿ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು. ಶೋ ರೂಮ್ ಮಾಲೀಕ ಮನೋಹರ್ ಲಾಲ್ ಜೈನ್, ಮುಖ್ಯ ವ್ಯವಸ್ಥಾಪಕ ಆರನ್ ಗೋಷ್ಠಿಯಲ್ಲಿದ್ದರು.

ಪಿಎಫ್ ಸದಸ್ಯರ ಕುಂದು ಕೊರತೆ ಸಭೆ

ಮೈಸೂರು, ಜು. 24– ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯ ಪ್ರಾದೇಶಿಕ ಕಚೇರಿ ವತಿಯಿಂದ 'ಭವಿಷ್ಯ ನಿಧಿ ನಿಮ್ಮ ಹತ್ತಿರ' 2.0 ಅಡಿಯಲ್ಲಿ ಜಿಲ್ಲಾ ವ್ಯಾಪ್ತಿಯ ಕಾರ್ಯಕ್ರಮವನ್ನು ಜುಲೈ 27 (ಗುರುವಾರ)ರ ಬೆಳಗ್ಗೆ 9 ಗಂಟೆಯಿಂದ ಚಾಮರಾಜನಗರ–ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಗುಂಡ್ಲುಪೇಟೆ ತಾಲೂಕು, ಮೈಸೂರು–ಕೂರ್ಗಳ್ಳಿ ಕೈಗಾರಿಕಾ ಪ್ರದೇಶ ಮತ್ತು ಮಂಡ್ಯ–ಗೆಜ್ಜಲಗೆರೆ, ಮದ್ದೂರು ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಪಿಎಫ್ ಸದಸ್ಯರು, ಪಿಂಚಣಿದಾರರು, ಉದ್ಯೋಗದಾತರು ಅಗತ್ಯ ಮಾಹಿತಿಗಾಗಿ ಕಾರ್ಯಕ್ರಮದಲ್ಲಿ ಹಾಜರಾಗಬಹುದು. ಹೆಚ್ಚಿನ ವಿವರಗಳಿಗಾಗಿ, ಸಾರ್ವಜನಿಕ ಸಂಪರ್ಕ ಅಧಿಕಾರಿಯನ್ನು 0821–2599200/222 ಮೂಲಕ ಸಂಪರ್ಕಿಸಬಹುದು ಇಲ್ಲವೇ ಕ್ಷೇತ್ರೀಯ ಭವಿಷ್ಯ ನಿಧಿ ಕಚೇರಿ, ಮೈಸೂರಿನ ಸಾಮಾಜಿಕ ಮಾಧ್ಯಮ ವೇದಿಕೆ (@epfomysore)ಗೆ ಭೇಟಿ ನೀಡಬಹುದು.

ಜಾತಿ ಜನಗಣತಿ ವರದಿ ಶೀಘ್ರ ಜಾರಿಗೆ ಸಿದ್ದರಾಮಯ್ಯರಿಗೆ ಮನವಿ ಸಲ್ಲಿಕೆ

- ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾಹಿತಿ
- 2028ರವರೆಗೆ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ

ಮೈಸೂರು,ಜು.24(ಪಿಎಂ)– ಜಾತಿ ಜನಗಣತಿ ವರದಿಯನ್ನು ಆದಷ್ಟು ಶೀಘ್ರ ಸ್ವೀಕರಿಸಿ, ಜಾರಿಗೊಳಿಸಲು ಕ್ರಮ ವಹಿಸುವಂತೆ ಜು.26ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹಿಂದುಳಿದ ವರ್ಗಗಳ ನಿಯೋಗದಿಂದ ಮನವಿ ಸಲ್ಲಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿ ಜನಗಣತಿ ವರದಿ ಜಾರಿಗೊಂಡರೆ, ಸಾಮಾಜಿಕ ನ್ಯಾಯಕ್ಕೆ ಹೊಸ ಆಯಾಮ ದೊರೆಯಲಿದೆ. ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಾಣವಾಗಲಿದೆ. ವರದಿ ಜಾರಿಗೆ ಶೀಘ್ರ ಕ್ರಮ ವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅಂದು ಮನವಿ ಸಲ್ಲಿಸಲಾಗುವುದು ಎಂದರು.

ಸ್ಥಳೀಯ ಸಂಸ್ಥೆ ಮಾದರಿ ಮೀಸಲಿಗೂ ಮನವಿ: ಜೊತೆಗೆ ಸ್ಥಳೀಯ ಸಂಸ್ಥೆ ಮಾದರಿಯಲ್ಲಿ ವಿಧಾನಸಭೆ, ಪರಿಷತ್ ಮತ್ತು ಲೋಕಸಭೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆಯೂ ಇದೇ ವೇಳೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುವುದು ಎಂದು ಹೇಳಿದರು.

ಸಿಎಂ ಆಗಿರುವುದನ್ನು ಸಹಿಸಲಾಗುತ್ತಿಲ್ಲ:



ಹಿಂದುಳಿದ ಸಮುದಾಯದ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿರುವುದನ್ನು ಕೆಲ ರಾಜಕೀಯ ನಾಯಕರಿಗೆ ಸಹಿಸಲಾಗುತ್ತಿಲ್ಲ. ಅದರಲ್ಲಿಯೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅರಗಿಸಿಕೊಳ್ಳಲಾಗುತ್ತಿಲ್ಲ. ಸರ್ಕಾರ ಅಸ್ತಿತ್ವಕ್ಕೆ ಬಂದು ಕೇವಲ ಎರಡು ತಿಂಗಳಷ್ಟೇ ಕಳೆದಿರುವ ಈ ಸಂದರ್ಭದಲ್ಲಿ ಸುಳ್ಳು ಆರೋಪ ಗಳನ್ನು ಮಾಡಲಾಗುತ್ತಿದೆ. ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಪಿತೂರಿ ನಡೆಸಲಾಗುತ್ತಿದೆ. ಆದರೆ 2028ರವರೆಗೂ ಮುಖ್ಯಮಂತ್ರಿ ಸ್ಥಾನ ಖಾಲಿ ಇರುವುದಿಲ್ಲ ಎಂದು ಹರಿಹಾಯ್ದರು.

ಐದು ಗ್ಯಾರಂಟಿಗಳ ಪೈಕಿ ಈಗಾಗಲೇ ನಾಲ್ಕಕ್ಕೆ ಚಾಲನೆ ದೊರೆತಿದೆ. ಅದರಲ್ಲಿ ಶಕ್ತಿ ಯೋಜನೆ ಮಹಿಳಾ ಸಮುದಾಯಕ್ಕೆ ಹೆಚ್ಚು ಅನುಕೂಲ ಕಲ್ಪಿಸಿದೆ. ಜೊತೆಗೆ ಜಾತಿ ಜನಗಣತಿ ವರದಿ ಸ್ವೀಕರಿಸಲು ಸರ್ಕಾರ ಮುಂದಾಗಿದೆ. ಇದನ್ನು ಇವರಿಗೆ ಸಹಿಸಲಾಗುತ್ತಿಲ್ಲ. ರಾಜ್ಯದಲ್ಲಿ ಬಿಜೆಪಿ ಆಡಳಿತಾವಧಿಯಲ್ಲಿ ಅಭಿವೃದ್ಧಿ ವಿಚಾರಗಳೇ ಚರ್ಚೆ ಆಗಲಿಲ್ಲ. ಕೇವಲ ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ಕೋಮು ದ್ವೇಷಕ್ಕೆ ಪ್ರಚೋದನೆ ನೀಡಲಾಯಿತು ಎಂದು ದೂರಿದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ–ನೈಸ್ ಯೋಜನೆಯನ್ನು ಸರ್ಕಾರ ಸಂಪೂರ್ಣವಾಗಿ ವಶಕ್ಕೆ ಪಡೆಯಬೇಕೆಂದು ಒತ್ತಾಯಿಸಿರುವ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿ ಹಾಗೂ ಬಸವರಾಜ ಬೊಮ್ಮಾಯಿಯವರು ತಾವೇ ಅಧಿಕಾರದಲ್ಲಿದ್ದಾಗ ಏಕೆ ಕ್ರಮ ವಹಿಸಲಿಲ್ಲ ಎಂದು ಪ್ರಶ್ನಿಸಿದರಲ್ಲದೆ, ಇದೇ ರೀತಿಯಲ್ಲಿ ವರ್ತಿಸಿದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಶೂನ್ಯಕ್ಕಿಳಿಯಲಿದೆ ಎಂದು ಎಚ್ಚರಿಸಿದರು.

ಹರಿಪ್ರಸಾದ್ ಬಗ್ಗೆ ಗೌರವವಿದೆ: ಕಾಂಗ್ರೆಸ್‌ನ ಹಿರಿಯ ನಾಯಕರೂ ಆದ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಪರೋಕ್ಷವಾಗಿ ಸಿದ್ದರಾಮಯ್ಯನವರ ವಿರುದ್ಧ ಹೇಳಿಕೆ ನೀಡಿದ್ದಾರೆ. ಅವರು ಹಿಂದುಳಿದ ವರ್ಗದ ಹಿರಿಯ ನಾಯಕರು. ಅವರ ಬಗ್ಗೆ ನಮಗೆ ಗೌರವವಿದೆ. ತಮ್ಮನ್ನು ಮಂತ್ರಿ ಮಾಡಲಿಲ್ಲ ಎಂಬ ಅಸಮಾಧಾನ ಅವರಲ್ಲಿ ಇರಬಹುದು. ಆದರೆ ಅವರ ಸಮುದಾಯದಿಂದ ಮಧು ಬಂಗಾರಪ್ಪ ಅವರಿಗೆ ಅವಕಾಶ ಕಲ್ಪಿಸಲಾಗಿದೆ. ಅಸಮಾಧಾನವಿದ್ದರೆ ಅವರು ಪಕ್ಷದ ವೇದಿಕೆಯಲ್ಲಿ ಅದನ್ನು ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದರು. ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸಪ್ಪ, ಮುಖಂಡರಾದ ಸತ್ಯನಾರಾಯಣ್, ಸಚಿನ್, ಆರ್.ಕೆ.ರವಿ ಗೋಷ್ಠಿಯಲ್ಲಿದ್ದರು.

ಕಬಿನಿ ಜಲಾಶಯ ಭರ್ತಿಗೆ 4 ಅಡಿ ಬಾಕಿ

ಹೆಚ್.ಡಿ.ಕೋಟೆ, ಜು.24– ಕೇರಳದ ವೈನಾಡಿನಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಬಿನಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದ್ದು, ಜಲಾಶಯ ಭರ್ತಿಗೆ ಕೇವಲ 4 ಅಡಿ ಬಾಕಿ ಇದೆ.

2284 ಅಡಿ ಗರಿಷ್ಠ ಮಟ್ಟದ ಜಲಾಶಯದಲ್ಲಿ ಪ್ರಸ್ತುತ 2280 ಅಡಿ ನೀರು ಸಂಗ್ರಹಗೊಂಡಿದ್ದು, 25 ಸಾವಿರ ಕ್ಯೂಸೆಕ್ ಒಳಹರಿವಿದ್ದು, ಜಲಾಶಯದಿಂದ 15 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಕೇರಳದ ವೈನಾಡಿನಲ್ಲಿ ಪ್ರಸ್ತುತ ಭಾರೀ ಮಳೆಯಾಗುತ್ತಿರುವುದರಿಂದ ಜಲಾಶಯದ ಭದ್ರತೆ ಹಿತದೃಷ್ಟಿಯಿಂದ ಜಲಾಶಯದ ಕ್ರಸ್ಟ್‌ಗೇಟ್‌ನಿಂದ 10 ಸಾವಿರ ಕ್ಯೂಸೆಕ್, ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್‌ನಿಂದ 5 ಸಾವಿರ ಕ್ಯೂಸೆಕ್ ಅನ್ನು ನದಿಗೆ ಹರಿಸಲಾಗುತ್ತಿದೆ ಎಂದು ಕಬಿನಿ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರ್ ತಿಳಿಸಿದ್ದಾರೆ.

ಜಲಾಶಯಕ್ಕೆ ಒಳಹರಿವು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಜಲಾಶಯದಿಂದ ಇನ್ನೂ ಹೆಚ್ಚಿನ ನೀರನ್ನು ನದಿಗೆ ಬಿಡುವ ಸಾಧ್ಯತೆ ಇರುವುದರಿಂದ ನದಿ ಪಾತ್ರದ ಜನ, ಜಾನುವಾರುಗಳು ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಮನವಿ ಮಾಡಿದ್ದಾರೆ.

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 2284 ಅಡಿ ನೀರು ಶೇಖರಣೆಯಾಗಿ ಜಲಾಶಯ ಭರ್ತಿಯಾಗಿತ್ತು. ಈ ಹಿನ್ನೆಲೆಯಲ್ಲಿ ನದಿಗೆ ನೀರನ್ನು ಹರಿಸಲಾಗಿತ್ತು. ಆದರೆ ಈ ಬಾರಿ ಪೂರ್ವ ಮುಂಗಾರು ಕೈಕೊಟ್ಟು ಮುಂಗಾರು ಕೂಡ ತಡವಾದ ಕಾರಣ ಜಲಾಶಯ ಕನಿಷ್ಠಮಟ್ಟ ಡೆಡ್ ಸ್ಟೋರೇಜ್ ತಲುಪಿದ್ದರ ಪರಿಣಾಮ ಕುಡಿಯುವ ನೀರಿಗೂ ತತ್ವಾರ ಎದುರಾಗಿ, ಅಚ್ಚುಕಟ್ಟು ರೈತರಲ್ಲಿ ಆತಂಕ ಮನೆ ಮಾಡಿತ್ತು. ಆದರೆ ಮುಂಗಾರು ತಡವಾದರೂ ಚುರುಕುಗೊಂಡು ಕೇರಳದ ವೈನಾಡು ಸೇರಿ ಜಲಾಶಯದ ಹಿನ್ನೀರು ವ್ಯಾಪ್ತಿಯಲ್ಲಿ ಹೆಚ್ಚಿನ ಮಳೆಯಾದ ಪರಿಣಾಮ ಜಲಾಶಯ ಭರ್ತಿಗೆ ಸನಿಹವಾಗಿದೆ.



ಜಲಾಶಯದ ನೀರಿನ ಮಟ್ಟ
ಗರಿಷ್ಠ ಮಟ್ಟ 2284 ಅಡಿಗಳು
ಇಂದಿನ ಮಟ್ಟ 2280 ಅಡಿಗಳು
ಒಳ ಅರಿವು 25 ಸಾವಿರ ಕ್ಯೂಸೆಕ್‌ಗಳು
ಹೊರಹರಿವು 15 ಸಾವಿರ ಕ್ಯೂಸೆಕ್‌ಗಳು.

ಕಳೆದ ವರ್ಷದ ನೀರಿನ ಮಟ್ಟ
ಗರಿಷ್ಠ ಮಟ್ಟ 2284 ಅಡಿಗಳು
ಇಂದಿನ ಮಟ್ಟ 2284 ಅಡಿಗಳು
ಒಳಹರಿವು 11 ಸಾವಿರ ಕ್ಯೂಸೆಕ್‌ಗಳು.
ಹೊರಹರಿವು 10 ಸಾವಿರ ಕ್ಯೂಸೆಕ್‌ಗಳು.

ಕಳೆದ 5 ವರ್ಷಗಳ ಹಿಂದೆ ಜಲಾಶಯದ ಮುಂಭಾಗದ ಬಿದರಹಳ್ಳಿ ಸರ್ಕಲ್‌ನ 48 ಕುಟುಂಬಗಳು ನದಿ ನೀರಿನ ಪ್ರವಾಹಕ್ಕೆ ಸಿಲುಕಿ ಮುಳುಗಿದ್ದವು. ಉಸ್ತುವಾರಿ ಸಚಿವರಾಗಿದ್ದ ವಿ.ಸೋಮಣ್ಣ ಅವರು 48 ಕುಟುಂಬಗಳಿಗೆ ಮನೆ ನಿರ್ಮಿಸಿ ಕೊಡುವುದಾಗಿ ಭೂಮಿ ಪೂಜೆ ಸಲ್ಲಿಸಿದ್ದರು. ಆದರೆ ಆ ಕುಟುಂಬಗಳಿಗೆ ಇದುವರೆಗೆ ನಿವಾಸ ದೊರೆತಿಲ್ಲ. ರಾಜ್ಯದಲ್ಲಿ ನಮ್ಮದೇ ಸರ್ಕಾರ ಅಧಿಕಾರದಲ್ಲಿ ಇರುವುದರಿಂದ ಈ ಕುಟುಂಬಗಳಿಗೆ ಮನೆ ಕೊಡಿಸುವ ವಿಚಾರವಾಗಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಈ 48 ಕುಟುಂಬಗಳಿಗೆ ನಿವೇಶನ ದೊರಕಿಸಿಕೊಡುತ್ತೇನೆ.
– **ಅನಿಲ್ ಚಿಕ್ಕಮಾದು,** ಶಾಸಕ.

ಕಳೆದ 5 ವರ್ಷಗಳ ಹಿಂದೆ ಪ್ರವಾಹದಿಂದ ನಮ್ಮ ಮನೆಗಳು ಮುಳುಗಿದ್ದ ವೇಳೆ ಮಾಜಿ ಸಚಿವ ವಿ.ಸೋಮಣ್ಣನವರು ನಮ್ಮ ಗ್ರಾಮಕ್ಕೆ ಭೇಟಿ ನೀಡಿ, ಹೊಸದಾಗಿ ಮನೆ ನಿರ್ಮಿಸಿಕೊಡುವುದಾಗಿ ಭೂಮಿ ಪೂಜೆ ನೆರವೇರಿಸಿದರು. ಆದರೂ ನಮಗೆ ಪರ್ಯಾಯ ವ್ಯವಸ್ಥೆ ಮಾಡಿಕೊಡಲಿಲ್ಲ. ಆದರೆ ಶಾಸಕ ಅನಿಲ್ ಚಿಕ್ಕಮಾದು ಅವರು ನಮಗೆ ಸುರಕ್ಷಿತ ಸ್ಥಳದಲ್ಲಿ ಮನೆ ನಿರ್ಮಿಸಿಕೊಡುತ್ತಾರೆ ಎಂಬ ನಂಬಿಕೆ ಇದೆ.
– **ಕಾಳಿಯಮ್ಮ ಕಾತುರಾಯನ್,** ಬೀದರಹಳ್ಳಿ ಸರ್ಕಲ್ ನಿವಾಸಿ.

ಪ್ರವಾಹ ಭೀತಿ: ಜಲಾಶಯ ಮುಂಭಾಗದ ಬಿದರಹಳ್ಳಿ ಸರ್ಕಲ್‌ನಲ್ಲಿ ವಾಸಿಸುತ್ತಿರುವ 48 ಕುಟುಂಬಗಳಿಗೆ ಪ್ರವಾಹ ಭೀತಿ ಎದುರಾಗಿದೆ ಪ್ರತಿವರ್ಷ ಜಲಾಶಯ ಭರ್ತಿಯಾಗಿ, ಜಲಾಶಯದ ಸುರಕ್ಷಿತ ದೃಷ್ಟಿಯಿಂದ ಡ್ಯಾಂನಿಂದ ಹೆಚ್ಚಿನ ಪ್ರಮಾಣದಲ್ಲಿ ನದಿಗೆ ನೀರು ಹರಿಸುವುದರಿಂದ ಪ್ರವಾಹ ಭೀತಿ ಎದುರಿಸುವಂತಾಗಿದೆ. ಹೀಗಾಗಿ ಸರ್ಕಾರ ನಮ್ಮ ಸಮಸ್ಯೆಗೆ ಪರಿಹಾರ ನೀಡಬೇಕು ಎಂದು ಬಿದರಹಳ್ಳಿ ಸರ್ಕಲ್ ನಿವಾಸಿಗಳು ಮನವಿ ಮಾಡಿದರು.

ಜಲಾಶಯಕ್ಕೆ ಒಳಹರಿವು ಜಾಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರ ಜನಾರ್ಧನ್, ಸಹಾಯಕ ಇಂಜಿನಿಯರ್ ರಮೇಶ್ ಬಾಬು, ವಿಶ್ವನಾಥ್, ಗೇಜ್ ನಾಗರಾಜ್ ಇನ್ನಿತರ ಅಧಿಕಾರಿಗಳು ವಾಸ್ತವ್ಯ ಹೂಡಿದ್ದಾರೆ.

ಸಂಚಾರ ಸ್ಥಗಿತ: ಜಲಾಶಯದಿಂದ 15 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸುತ್ತಿರುವುದರಿಂದ ಜಲಾಶಯದ ಮುಂಭಾಗದ ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ.

ಹೀಗಾಗಿ ಹ್ಯಾಂಡ್‌ಪೋಸ್ಟ್‌ನಿಂದ ಎನ್. ಬೇಗೂರಿಗೆ ತೆರಳುವ ಬಿದರಹಳ್ಳಿ, ತೆರಣಿಮುಂಟಿ, ಮೊಸರಹಳ್ಳ, ಬಸಾಪುರ, ಕೆಂಚನಹಳ್ಳಿ, ಮೂರ್‌ಬಾಂದ್, ಭೀಮನಕೊಲ್ಲಿ, ಬೀರಂಬಳ್ಳಿ, ಗೆಂಡತ್ತೂರು ಗ್ರಾಮಗಳ ಗ್ರಾಮಸ್ಥರು ಸರಗೂರು ಮಾರ್ಗವಾಗಿ ತೆರಳುವಂತೆ ತಹಸೀಲ್ದಾರ್ ಸಣ್ಣರಾಮಪ್ಪ ತಿಳಿಸಿದ್ದಾರೆ.

ಸರಗೂರು, ಕೋಟೆ ಅಭಿವೃದ್ಧಿಗೆ ಶ್ರಮಿಸುವೆ: ಅನಿಲ್ ಚಿಕ್ಕಮಾದು



ಸರಗೂರು, ಜು.24– ಮತ್ತೊಮ್ಮೆ ಶಾಸಕನನ್ನಾಗಿ ಆಯ್ಕೆ ಮಾಡಿದ ತಾಲೂಕಿನ ಜನತೆಗೆ ಕೃತಜ್ಞತೆ ಸಲ್ಲಿಸುತ್ತೇನೆ. ಅಲ್ಲದೇ ಸರಗೂರು, ಹೆಚ್.ಡಿ.ಕೋಟೆ ತಾಲೂಕುಗಳ ಮತ್ತಷ್ಟು ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಕೊತ್ತೇಗಾಲದಲ್ಲಿ ಶ್ರೀಮಾರಮ್ಮನವರ ದೇವಾಲಯ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಅಭಿವೃದ್ಧಿಗೆ ಪೂರಕವಾದ ಅನುದಾನ ನೀಡಿ ಶ್ರಮಿಸಲಾಗುವುದು. ಈಗಾಗಲೇ ಗ್ರಾಮದ ಅಭಿವೃದ್ಧಿಗೆ 75 ಲಕ್ಷ ಅನುದಾನ ಬಿಡುಗಡೆ ಮಾಡಿ ಅಭಿವೃದ್ಧಿಪಡಿಸಲಾಗಿದೆ ಎಂದರು.

ಈ ಬಾರಿ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿದ್ದು, ರಾಜ್ಯದಲ್ಲಿ ನಮ್ಮದೇ ಸರ್ಕಾರ ಇರುವುದರಿಂದ ಮುಂದಿನ ದಿನಗಳಲ್ಲಿ ಹೆಚ್ಚು ಅನುದಾನ ತಂದು ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಗೊಳಿಸಲಾಗುವುದು ಎಂದರು.

ಕಾಂಗ್ರೆಸ್ ಚುನಾವಣೆ ಪೂರ್ವ ನೀಡಿದ್ದ ಭರವಸೆಯಂತೆ ಗೃಹಜ್ಯೋತಿ ಯೋಜನೆಯಡಿ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್, ಮನೆಯೊಡತಿಗೆ 2 ಸಾವಿರ ರೂ. ಪ್ರೋತ್ಸಾಹ ಧನ ನೀಡಲು ಗೃಹಲಕ್ಷ್ಮಿ ಯೋಜನೆ ಜಾರಿ, ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕಾರ್ಡ್‌ದಾರರಿಗೆ 5 ಕೆಜಿ ಅಕ್ಕಿ ಉಚಿತವಾಗಿ ನೀಡಲಾಗುತ್ತಿದ್ದು, ಆಯಾಯ ಇಲಾಖಾಧಿಕಾರಿಗಳು ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸಬೇಕು ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ್ ಮಾತನಾಡಿ, ಗ್ರಾಮದ ಮಾರಮ್ಮನ ದೇವಾಲಯ ನಿರ್ಮಾಣಕ್ಕೆ ಶಾಸಕರ ಅನುದಾನದಲ್ಲಿ 5 ಲಕ್ಷ ರೂ. ನೀಡಲಾಗಿದೆ. ಅದರಂತೆ ಗ್ರಾಮದಲ್ಲಿ ಬಸವ ಭವನ ನಿರ್ಮಾಣ, ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ನಿರ್ಮಿಸಿಕೊಡುವಂತೆ ಮನವಿ ಮಾಡಿದರು.


ಈ ವೇಳೆ ಗುಡಿಗೌಡ ನಂಜಪ್ಪ, ನಾಡಗೌಡ ರತ್ನಯ್ಯ, ಜಿಪಂ ಸದಸ್ಯ ಪಿ.ರವಿ. ಚಿಕ್ಕವೀರನಾಯಕ, ಎಸ್.ಎಸ್.ಪ್ರಭುಸ್ವಾಮಿ, ಸಿ.ತಿಮ್ಮಯ್ಯ, ಗುರುಸ್ವಾಮಿ, ಗ್ರಾಪಂ ಅಧ್ಯಕ್ಷೆ ರತ್ನಮ್ಮ, ಉಪಾಧ್ಯಕ್ಷೆ ಶೋಭ, ಸದಸ್ಯರಾದ ಚಲುವಪ್ಪ, ಮಹದೇವ್, ರಿತೀಶ್, ಗಣೇಶ್, ಬಸವರಾಜು, ಚಿಕ್ಕರಾಮಶೆಟ್ಟಿ, ಮಾಧು, ನಾಗರಾಜು, ಶಂಭುನಾಯಕ, ಕುಮಾರನಾಯಕ, ನಾಗೇಶ್, ಮಲ್ಲಿಕಾರ್ಜನಸ್ವಾಮಿ, ಪುಟ್ಟೇಗೌಡ, ಶಂಕರಪ್ಪ ವಿಜಯೇಂದ್ರ ಮಹದೇವ್, ನಾಗರಾಜು, ಸ್ವಾಮಿ ಇತರರಿದ್ದರು.



ತಿ.ನರಸೀಪುರದ ಹಳೇ ತಿರುಮಕೂಡಲು ಶ್ರೀ ಆದಿಚುಂಚನಗಿರಿ ರಜತೋತ್ಸವ ಭವನದಲ್ಲಿ ಬೆಂಗಳೂರು ಬಿ.ಸಿ.ರಂಗಪ್ಪ ವಿದ್ಯಾನಿಧಿ ಟ್ರಸ್ಟ್ ವತಿಯಿಂದ ನಡೆದ ಕಣಿಯರ್/ಕಣಿಯನ್ ಜನಾಂಗದ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕಗಳ ವಿತರಣೆ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಸೋಸಲೆ ಪಂಡಿತ್ ಧರ್ಮರತ್ನಾಕರ ಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ ಖಂಡಿಸಿ ಪ್ರತಿಭಟನೆ

ತಿ.ನರಸೀಪುರ, ಜು.24– ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ, ಹಿಂಸಾಚಾರ ಖಂಡಿಸಿ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಬಣ) ಮುಖಂಡರು, ಕಾರ್ಯಕರ್ತರು ಪಟ್ಟಣದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.



ಜಿಲ್ಲಾ ಸಂಚಾಲಕ ಸೋಸಲೆ ರಾಜಶೇಖರ್‌ಮೂರ್ತಿ ಮಾತನಾಡಿ, ಮಣಿಪುರದಲ್ಲಿ ಹಿಂಸಾಚಾರ, ಲೂಟಿ, ಕೊಲೆ ನಡೆಯುತ್ತಿದ್ದರೂ ಅಲ್ಲಿನ ಸರ್ಕಾರ ಯಾವುದೇ ಕ್ರಮಕೈಗೊಳ್ಳದೇ ತಟಸ್ಥವಾಗಿದೆ. ಕಳೆದ 3 ತಿಂಗಳಿಂದ ಎರಡು ಸಮುದಾಯಗಳ ನಡುವೆ ಮೀಸಲಾತಿ ವಿಚಾರಕ್ಕೆ ಹಿಂಸಾಚಾರ ನಡೆದು ಮಹಿಳೆಯರ ಬೆತ್ತಲೆ ಮೆರವಣಿಗೆ, ಅತ್ಯಾಚಾರದಂತಹ ಘಟನೆಗಳು ನಡೆದಿರುವುದು ಸಮಾಜ ತಲೆ ತಗ್ಗಿಸುವ ವಿಚಾರವಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮಣಿಪುರದಲ್ಲಿ ಅರಾಜಕತೆ ಸೃಷ್ಟಿಯಾಗಿ ಕಾನೂನು ಸುವ್ಯವಸ್ಥೆ ಹಾಳಾಗಿದ್ದರೂ ಸಹ ಇದುವರೆಗೂ ಮಧ್ಯ ಪ್ರವೇಶಿಸಿ ನಿಯಂತ್ರಣಕ್ಕೆ ತರಲು ಆಸಕ್ತಿ ತೋರದಿರುವುದು ವಿಪರ್ಯಾಸ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕಳೆದ 3 ತಿಂಗಳಿಂದ ನಡೆಯುತ್ತಿರುವ ಸಂಘರ್ಷ ಹತ್ತಿಕ್ಕಲು ವಿಫಲವಾಗಿರುವ ಮಣಿಪುರ ಸರ್ಕಾರವನ್ನು ವಜಾಗೊಳಿಸಿ ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿ ಮಾಡಬೇಕು. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ರಾಜ್ಯದಲ್ಲಿ ಶಾಂತಿ ನೆಲೆಸಲು ಅಗತ್ಯ ಕ್ರಮ ವಹಿಸಬೇಕು ಎಂದು ತಿಳಿಸಿದರು. ಈ ವೇಳೆ ತಾಲೂಕು ಆಡಳಿತದ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭ ತಾಲೂಕು ಸಂಚಾಲಕ ಎಂ.ಸಿದ್ದರಾಜು, ಬೆಟ್ಟಹಳ್ಳಿ ಸಿದ್ದರಾಜು, ನಾಗಲಗೆರೆ ಪುಟ್ಟಮ್ಮಣಿ, ಬೆನಕನಹಳ್ಳಿ ಸಹನಾ, ಬೇವಿನಹಳ್ಳಿ ಸರೋಜಮ್ಮ, ಕುಂತನಹಳ್ಳಿ ಜನಾರ್ಧನ್, ಅತ್ತಹಳ್ಳಿ ನವೀನ್, ರಾಮಯ್ಯ, ಗಂಗಾಧರ್, ಶಂಕರ್, ದಿಲೀಪ್, ಶಶಿಕಾಂತ್, ಪ್ರದೀಪ್, ಶಂಕರ್ ಹಾಜರಿದ್ದರು.

ಪ್ರತಿಭಾವಂತರನ್ನು ಗುರ್ತಿಸಿ, ಪ್ರೋತ್ಸಾಹಿಸಲು ಸಲಹೆ



ನಂಜನಗೂಡು, ಜು.24– ವೀರಶೈವ ಲಿಂಗಾಯತ ಸಮಾಜ ಪ್ರತಿಭಾವಂತರನ್ನು ಗುರ್ತಿಸುವ ಮೂಲಕ ಅವರನ್ನು ಪ್ರೋತ್ಸಾಹಿಸಬೇಕು ಎಂದು ಶ್ರೀಗುರು ಕಂಬಳೇಶ್ವರ ಮಲ್ಲನಮೂಲೆ ಮಠಾಧ್ಯಕ್ಷ ಚೆನ್ನಬಸವ ಸ್ವಾಮೀಜಿ ಸಲಹೆ ನೀಡಿದರು.

ನಗರದ ಮಲ್ಲನಮೂಲೆ ಮಠದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕ ಆಯೋಜಿಸಿದ್ದ ಬಸವ ಜಯಂತಿ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ಈ ಬಾರಿಯೂ ಬಸವ ಜಯಂತಿ ಆಚರಿಸಬೇಕಿತ್ತು ಆದರೆ ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿತ್ತು. ಸಮುದಾಯದವರು ನಮ್ಮ ಬಳಿ ಬಂದಾಗ ಬಸವ ಜಯಂತಿಯನ್ನು ನಮ್ಮ ಮಠದಲ್ಲೇ ಆಚರಿಸಿ ಪ್ರತಿಭಾವಂತರನ್ನು ಗುರ್ತಿಸಿ ಪ್ರೋತ್ಸಾಹಿಸುವಂತೆ ಸಲಹೆ ನೀಡಿದ್ದೆ. ಅದರಂತೆ ಇಂದು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ದೇವನೂರು ಮಹದೇವಪ್ಪ ಮಾತನಾಡಿ, ನಗರದಲ್ಲಿ ಬಸವ ಭವನ ಉದ್ಘಾಟನೆ ವೇಳೆ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದೆ. ಹೀಗಾಗಿ ಶ್ರೀಗಳ ಆಶಯದಂತೆ ಜಯಂತಿಯನ್ನು ಸರಳವಾಗಿ ಆಚರಿಸಲಾಗುತ್ತಿದೆ. ಪ್ರಸ್ತುತ ವಿದ್ಯಾರ್ಥಿಗಳು ಹೆಚ್ಚಾಗಿ ಮೊಬೈಲ್ ಬಳಸುತ್ತಿದ್ದು, ಇದರಿಂದ ಅವರ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳು ಮೊಬೈಲ್ ಬಿಟ್ಟು ಹೆಚ್ಚಾಗಿ ಪುಸ್ತಕಗಳನ್ನು ಓದಬೇಕು ಹಾಗೂ ದೈಹಿಕ ಕಸರತ್ತಿನ ಆಟಗಳಲ್ಲಿ ತೊಡಗಿಸಿಕೊಳ್ಳಬೇಕು. ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಧನೆ ಹಾದಿಯಲ್ಲಿ ಸಾಗುವ ಮೂಲಕ ನಿಮ್ಮ ತಂದೆ ತಾಯಿಗಳಿಗೆ ಮತ್ತು ಶಾಲೆಗೆ, ದೇಶಕ್ಕೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಈ ವೇಳೆ ಶಿರಮಳ್ಳಿ ಇಮ್ಮಡಿ ಮುರಗಿ ಸ್ವಾಮೀಜಿ, ಹೊನ್ನಲಗೆರೆ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಖಜಾಂಚಿ ಮಾಧು, ತಾಲೂಕು ಕಾರ್ಯದರ್ಶಿ ಮಹದೇವಮೂರ್ತಿ, ಶಿವಬಸಪ್ಪ ಶಿವಪ್ರಕಾಶ್, ನಂಜಪ್ಪ ಮಲ್ಲೇಶ್, ನಂಜಮ್ಮಣ್ಣಿ, ಸುಬ್ಬಣ್ಣ, ಲೋಕೇಶ, ಗುರುಸಿದ್ದಪ್ಪ ಶಿವಾನಂದ, ಮಹದೇವಪ್ಪ ಪ್ರೊ.ಸಿ.ವಿ. ಬಸವರಾಜು, ಶಿವಮೂರ್ತಿ ಉಪಸ್ಥಿತರಿದ್ದರು.

ಶಿಥಲೀಕರಣ ಘಟಕಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ

ನಾಲೆಗೆ ನೀರು ಹರಿಸುವ ಕಾರ್ಯಕ್ಕೆ ಶಾಸಕ ಡಿ.ರವಿಶಂಕರ್ ಚಾಲನೆ



ಚುಂಚನಕಟ್ಟೆ, ಜು.24– ರೈತರು ಬೆಳೆದ ತರಕಾರಿಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಶಿಥಲೀಕರಣ ಘಟಕ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಸಕ್ಕರೆ ಗ್ರಾಮದ ಬಳಿ ಕಾವೇರಿ ನದಿಯಿಂದ ಚಾಮರಾಜ ಅಣೆಕಟ್ಟೆ ಬಲದಂಡೆ ನಾಲೆಯ ಕ್ರಸ್ಟ್‌ಗೇಟ್‌ಗಳನ್ನು ತೆರೆಯುವ ಮೂಲಕ ನಾಲೆಗೆ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಬಾರಿ ಬರ ಆವರಿಸುತ್ತದೆ ಎಂಬ ಭಯದ ನಡುವೆ ದೈವ ಕೃಪೆಯಿಂದ ಉತ್ತಮ ಮಳೆಯಾಗುತ್ತಿದ್ದು, ಕಾವೇರಿ ಮೈದುಂಬಿದ ಪರಿಣಾಮ ನಾಲೆಗಳಿಗೆ ನೀರು ಹರಿಸಲಾಗುತ್ತಿದೆ. ನಾಲೆ ವ್ಯಾಪ್ತಿಯ ರೈತರು ನೀರನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ತಾಲೂಕು ವ್ಯಾಪ್ತಿಯ ಕಟ್ಟೇಪುರ, ಚಾಮರಾಜ, ಮಿರ್ಲೆ ಸೇರಿದಂತೆ ಎಲ್ಲಾ ನಾಲೆಗಳನ್ನು ಸ್ವಚ್ಛಗೊಳಿಸುವ ಕಾರ್ಯ ಅಂತಿಮ ಹಂತದಲ್ಲಿದೆ. ಈಗಾಗಲೇ ಹಾರಂಗಿ ಜಲಾಶಯ ಭರ್ತಿಯಾಗಿ, ಕೆಆರ್‌ಎಸ್‌ಗೆ ನಿರೀಕ್ಷೆಗೂ ಮೀರಿ ನೀರು ಹರಿದು ಬರುತ್ತಿರುವುದರಿಂದ ಇನ್ನೊಂದು ವಾರದೊಳಗೆ ಶೀಘ್ರ ಸಭೆ ಮಾಡಿ ಅವಳಿ ತಾಲೂಕಿನ ಎಲ್ಲಾ ಬೆಳೆಗಳಿಗೂ ನೀರು ಹರಿಸಲಾಗುವುದು ಎಂದರು.

ತರಕಾರಿ ಸಂಗ್ರಹದ ಶಿಥಲೀಕರಣ ಘಟಕ ಶೀಘ್ರ ಮಂಜೂರಾದರೆ ರೈತರಿಗೆ ಸಾಕಷ್ಟು ಅನುಕೂಲವಾಗಲಿದೆ. ಈ ಶಿಥಲೀಕರಣ ಘಟಕವನ್ನು ಅವಳಿ ತಾಲೂಕುಗಳ ಕೇಂದ್ರ ಸ್ಥಾನದಲ್ಲಿ ನಿರ್ಮಾಣ ಮಾಡಲಾಗುವುದು ಎಂದ ಅವರು, ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ ಹಾಗೂ ರಸಗೊಬ್ಬರ ವಿತರಣೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೃಷಿ ಇಲಾಖೆ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು.

ಇದಕ್ಕೂ ಮುನ್ನಾ ಶಾಸಕ ಡಿ.ರವಿಶಂಕರ್ ತಮ್ಮ ಪತ್ನಿ ಸುನೀತಾ ಅವರೊಂದಿಗೆ ಕಾವೇರಿ ನದಿಗೆ ತೆರಳಿ ಗಂಗಾ ಪೂಜೆ ನೆರವೇರಿಸಿ ಬಾಗಿನ ಅರ್ಪಿಸಿದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯ್, ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಮುಖಂಡರಾದ ಬಸವರಾಜು, ಜಗದೀಶ, ಮಹೇಶ, ಬಸವರಾಜು, ಗ್ರಾಪಂ ಅಧ್ಯಕ್ಷೆ ಸಾವಿತ್ರಮ್ಮ ಉಪಾಧ್ಯಕ್ಷೆ ಯಶೋಧ, ಸದಸ್ಯ ಗೌಡಯ್ಯ, ನೂತನ್, ಮಾಜಿ ಸದಸ್ಯ ಮಲ್ಲಿಕಾರ್ಜುನ, ಸಾಲಿಗ್ರಾಮ ಹಾರಂಗಿ ವಿಭಾಗದ ಇಇ ಈರಣ್ಣ, ನಂ.5 ನೀರಾವರಿ ಇಲಾಖೆ ಎಇಇ ಗುರುರಾಜ್, ಹೊಸೂರು ವಿಭಾಗದ ಎಇಇ ಈಶ್ವರ್, ಇಂಜಿನಿಯರ್‌ಗಳಾದ ಅಯಾಜ್ ಪಾಷ, ಕಿರಣ್‌ಕುಮಾರ್, ಪ್ರತಾಪ್‌ಸೋಗೆ, ಕನ್ನಿಕಾ, ಬಿಂದು, ಅವಿನಾಶ್ ಇದ್ದರು.

ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ, ಸೌಜನ್ಯ ಪ್ರಕರಣ ಖಂಡಿಸಿ

ಕೋಟೆಯಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟ ಪ್ರತಿಭಟನೆ

ಹೆಚ್.ಡಿ.ಕೋಟೆ, ಜು.24– ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ ಖಂಡಿಸಿ ಹಾಗೂ ಸೌಜನ್ಯಳ ಅತ್ಯಾಚಾರ, ಹತ್ಯೆ ಪ್ರಕರಣವನ್ನು ಮರು ತನಿಖೆಗೆ ಒಳಪಡಿಸಿ ಅಪರಾಧಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಪಟ್ಟಣದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.



ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಪ್ರತಿಭಟನೆ ನಡೆಸಿ ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿ, ಅವರ ಮೇಲೆ ಅತ್ಯಾಚಾರ ಎಸಗಲಾಗಿದೆ. ಮೈಇತಿ ಹಾಗೂ ಕುಕಿ ಸಮುದಾಯಗಳ ನಡುವಿನ ಗಲಭೆಯಿಂದಾಗಿ 160ಕ್ಕೂ ಹೆಚ್ಚು ಮಂದಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಈ ಸಂಬಂಧ ಮಣಿಪುರ ಸರ್ಕಾರ ಯಾವುದೇ ಕೈಗೊಂಡಿಲ್ಲ. ಈಗಲೂ ಮಣಿಪುರವು ಹೊತ್ತಿ ಉರಿಯುತ್ತಿದ್ದು, ಸಾವಿರಾರು ಮನೆಗಳು ಸುಟ್ಟು ಭಸ್ಮವಾಗಿವೆ. ಅಲ್ಲದೇ ಸಾವಿರಾರು ಮಂದಿ ತಮ್ಮ ಮನೆ ಮಠ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಮಣಿಪುರದಲ್ಲಿ ಇಂತಹ ಘಟನೆ ನಡೆಯುತ್ತಿದ್ದರೂ ಪ್ರಧಾನಿ ಮೋದಿ ಮೌನಕ್ಕೆ ಶರಣಾಗಿರುವುದು ಖಂಡನೀಯ. ತಮ್ಮದೇ ಸರ್ಕಾರ ಮಣಿಪುರದಲ್ಲಿ ಆಡಳಿತ ನಡೆಸುತ್ತಿದ್ದರೂ ಅಲ್ಲಿನ ಸರ್ಕಾರ, ಮುಖ್ಯಮಂತ್ರಿ, ಸಚಿವ ಸಂಪುಟ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಮಹಿಳೆಯರ ಬೆತ್ತಲೆ ಮೆರವಣಿಗೆ ಪ್ರಕರಣ ಬೆಳಕಿಗೆ ಬಂದ ನಂತರ ದೇಶಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗಿದೆ. ದೇಶದ ಸರ್ವೋಚ್ಛ ನ್ಯಾಯಾಲಯ ಸ್ವತಃ ಪ್ರಕರಣ ದಾಖಲಿಸಿಕೊಂಡು ಕೂಡಲೇ ಕ್ರಮ ಕೈಗೊಳ್ಳುವಂತೆ ಮಣಿಪುರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ಆದರೂ ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರ ತಡೆಯಲು ಅಲ್ಲಿನ ಸರ್ಕಾರ ವಿಫಲವಾಗಿದೆ. ಹೀಗಾಗಿ ರಾಷ್ಟ್ರಪತಿಗಳು ಮಧ್ಯ ಪ್ರವೇಶಿಸಿ ಅಲ್ಲಿನ ಸರ್ಕಾರ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.


ಕಳೆದ 11 ವರ್ಷಗಳ ಹಿಂದೆ ಸೌಜನ್ಯಳ ಅಪಹರಿಸಿ, ಅತ್ಯಾಚಾರಗೈದು, ಹತ್ಯೆ ಮಾಡಿರುವ ಅಪರಾಧಿಗಳನ್ನು ಬಂಧಿಸುವಲ್ಲಿ ಸರ್ಕಾರ ವಿಫಲವಾಗಿದೆ. ಹೀಗಾಗಿ ಈ ಪ್ರಕರಣವನ್ನು ಮತ್ತೊಮ್ಮೆ ತನಿಖೆಗೆ ಒಳಪಡಿಸಿ ಅಪರಾಧಿಗಳನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸಬೇಕು. ಅಲ್ಲದೇ ಈ ಹಿಂದೆ ನಡೆದಿರುವ 460ಕ್ಕೂ ಹೆಚ್ಚು ಅಸಹಜ ಸಾವುಗಳ ಬಗ್ಗೆ ತನಿಖೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಹೆಗ್ನೂರು ನಿಂಗರಾಜು, ರಾಜಣ್ಣ ಹಿಟ್ಟಾ, ಸಣ್ಣಕುಮಾರ ಕೆ.ಎಂ ಹಳ್ಳಿ, ಮುದ್ದಮಲ್ಲಯ್ಯ, ಚೌಡಹಳ್ಳಿ ಜವರಯ್ಯ, ಮಲಾರ ಮಹಾದೇವು, ಹೊ.ಕೆ.ಮಹೇಂದ್ರ, ಅಕ್ಬರ್ ಪಾಷಾ, ವಿಜಯ್ ಕುಮಾರ್, ಮುತ್ತು ಉಯ್ಯಂಬಳ್ಳಿ, ಹೊಮ್ಮರಗಳ್ಳಿ ಸಿದ್ದರಾಜು, ದಾಸಯ್ಯ ಹೊಳೆಹುಂಡಿ, ಕುಮಾರ, ಮಲಾರಾ ಮಹೇಶ್, ಶೈಲೇಂದ್ರ, ಸಿದ್ದರಾಜು, ಪುಟ್ಟಬಸವಯ್ಯ, ಅಯ್ಯಪ್ಪ, ಚಿಕ್ಕಣ್ಣ ಹಾಗೂ ಇತರ ಮುಖಂಡರಿರು.

ಈಗಾಗಲೇ ವಾಹನ ಚಾಲಕರು, ಸವಾರರು ನಲುಗಿ ಹೋಗಿರುವ ಎಂಜಿ ರಸ್ತೆ ಮಾರ್ಕೆಟ್ ಸ್ಥಳದಲ್ಲಿ ಮತ್ತೊಂದು ಅಡ್ಡಿ–ಆತಂಕ

● ಮಾರ್ಗಸೂಚಿ ಫಲಕ ಅಳವಡಿಕೆಗೆ ರಸ್ತೆಯಲ್ಲಿ ಕಂಬ ನಿರ್ಮಾಣ

● ಶಿಸ್ತುಬದ್ಧ ಸೌಕರ್ಯ ಕಲ್ಪಿಸುವ ಕೌಶಲ್ಯತೆ ನಮ್ಮ ಅಧಿಕಾರಿ ವರ್ಗಕ್ಕೆ ಇಲ್ಲವೆ...!?





ಮೈಸೂರು, ಜು.24(ಎಸ್‌ಬಿಡಿ)– ಮೈಸೂರಲ್ಲಿ ಫುಟ್‌ಪಾತ್ ಅತಿಕ್ರಮಣ ತೆರವಿಗೆ ಪ್ರಯತ್ನ ನಡೆದಿರುವಾಗಲೇ ಮಾರ್ಗಸೂಚಿ ಸಹಿತ ಜಾಹಿರಾತು ಫಲಕ ಅಳವಡಿಸಲು ರಸ್ತೆಯಲ್ಲೇ ಕಂಬ ನಿರ್ಮಿಸಿರುವುದಕ್ಕೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನಗರದ ಮಹಾತ್ಮ ಗಾಂಧಿ(ಎಂಜಿ) ರಸ್ತೆ, ಮಾರ್ಕೆಟ್ ಬಳಿ ಮಾರ್ಗಸೂಚಿ ಸಹಿತ ಜಾಹಿರಾತು ಫಲಕ (ಓವರ್‌ಹೆಡ್ ಕ್ಯಾಂಟಿಲಿವರ್ ಸೈನ್‌ಬೋರ್ಡ್) ಅಳವಡಿಸಲು ಇಕ್ಕೆಲಗಳಲ್ಲಿ ನೆಲದಾಳದಿಂದ ಸಿಮೆಂಟ್ ಪಿಲ್ಲರ್ ನಿರ್ಮಿಸಲಾಗಿದೆ. ಆದರೆ ರಸ್ತೆಯಲ್ಲೇ ಪಿಲ್ಲರ್ ನಿರ್ಮಿಸಿರುವುದರಿಂದ ವಾಹನ ಸಂಚಾರಕ್ಕೆ ಅಡ್ಡಿಯುಂಟಾಗಲಿದೆ. ಅಪಘಾತಕ್ಕೂ ಎಡೆಮಾಡಿಕೊಟ್ಟಂತಾಗಿದೆ.

ರಸ್ತೆ ಬದಿಯಲ್ಲಿ ಮಾರ್ಗಸೂಚಿ ಫಲಕ ಅಳವಡಿಸಿದರೆ ವಾಹನ ಸವಾರರಿಗೆ ಅನುಕೂಲವಾಗಲಿದೆ. ಆದರೆ ಇದಕ್ಕಾಗಿ ಮತ್ತೊಂದು ರೀತಿಯಲ್ಲಿ ಸಂಚಕಾರ ತಂದೊಡ್ಡುವುದು ಸರಿಯಲ್ಲ. ಈ ರಸ್ತೆಯಲ್ಲಿ ಸದಾ ವಾಹನ ದಟ್ಟಣೆ ಇರುತ್ತದೆ. ಮಾರುಕಟ್ಟೆ ಇರುವುದರಿಂದ ರಸ್ತೆ ಬದಿಯಲ್ಲೇ ಆಟೋ, ಇನ್ನಿತರ ಗೂಡ್ಸ್ ವಾಹನಗಳನ್ನು ನಿಲ್ಲಿಸುವುದರಿಂದ ಮತ್ತಷ್ಟು ಸಮಸ್ಯೆಯಾಗಿದೆ. ಇನ್ನು ಬಿಡಾಡಿ ದನಗಳು ರಸ್ತೆ ಮಧ್ಯೆಯೇ ಮಲಗುವುದರಿಂದ ಇಲ್ಲಿ ಸಂಚರಿಸಲು ವಾಹನ ಸವಾರರು, ಚಾಲಕರು ಹರಸಾಹಸಪಡಬೇಕು. ಇದೆಲ್ಲದರ ನಡುವೆ ರಸ್ತೆಯಲ್ಲೇ ಅವೈಜ್ಞಾನಿಕವಾಗಿ ಸಿಮೆಂಟ್ ಪಿಲ್ಲರ್ ನಿರ್ಮಿಸಲಾಗಿದೆ.

ನೆಲದೊಳಗಿಂದ ರಸ್ತೆ ಮಟ್ಟಕ್ಕಿಂತ ಒಂದು ಅಡಿ ಎತ್ತರಕ್ಕೆ ಪಿಲ್ಲರ್ ನಿರ್ಮಿಸಲಾಗಿದ್ದು, ಸದ್ಯ ಅದರಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂದೆನಿಸಬಹುದು. ಆದರೆ ಇದಕ್ಕೆ ಮೆಟಲ್ ಪಿಲ್ಲರ್‌ಗಳನ್ನು ಅಳವಡಿಸಿದಾಗ ಸಮಸ್ಯೆ ಅರಿವಾಗುತ್ತದೆ. ದೊಡ್ಡ ಗಾತ್ರದ ಮೆಟಲ್ ಪಿಲ್ಲರ್‌ಗಳನ್ನು ಅಳವಡಿಸುವುದರಿಂದ ವಾಹನ ಚಾಲನೆಗೆ ಅಡ್ಡಿಯಾಗಬಹುದು. ಮಳೆಯಾಗುವಾಗ ಪಿಲ್ಲರ್‌ಗಳನ್ನು ಗುರುತಿಸಲಾಗದೆ ಡಿಕ್ಕಿಯಾಗಬಹುದು. ಫಲಕ ಅಳವಡಿಸಲು ಅನುಮತಿ ನೀಡುವ ಮುನ್ನ ಪಾಲಿಕೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಬೇಕು. ಆದರೆ ಅಧಿಕಾರಿಗಳ ನಿರ್ಲಕ್ಷದಿಂದ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ ಎಂದು ಜನ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸ್ಥಳ ಪರಿಶೀಲನೆ ನಡೆಸಿ, ರಸ್ತೆ ಸಂಚಾರಕ್ಕೆ ಅಡ್ಡಿಯಾಗದಿರುವುದನ್ನು ಖಚಿತ ಪಡಿಸಿಕೊಂಡು ನಂತರ ಅನುಮತಿ ನೀಡಬೇಕಿತ್ತು. ಆದರೆ ಈಗ ಪಿಲ್ಲರ್ ನಿರ್ಮಿಸಿರುವ ಸ್ಥಳದಲ್ಲಿ ಫಲಕ ಅಳವಡಿಸುವುದರಿಂದ ಸಾರ್ವಜನಿಕರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗುತ್ತದೆ.

ಮಾರ್ಗಸೂಚಿ ಸಹಿತ ಜಾಹಿರಾತು ಫಲಕ ಅಳವಡಿಸಲು ಷರತ್ತುಗಳನ್ನು ವಿಧಿಸಿ, ನಿಗದಿತ ಶುಲ್ಕ ಪಾವತಿಸಿಕೊಂಡು ಅನುಮತಿ ನೀಡಲಾಗುತ್ತದೆ. ಆದರೆ ಅನುಮತಿ ನೀಡಿರುವ ಸ್ಥಳ ಬಿಟ್ಟು ತಮಗೆ ಅನುಕೂಲವಾಗುವ ಜಾಗದಲ್ಲಿ ಅಳವಡಿಸಲಾಗುತ್ತದೆ. ಅನುಮತಿಗಿಂತ ಹೆಚ್ಚಿನ ಸಂಖ್ಯೆಯ ಫಲಕ ಅಳವಡಿಸಲಾಗುತ್ತದೆ ಎಂಬ ಆರೋಪಗಳು ಪಾಲಿಕೆ ಸದಸ್ಯರಿಂದಲೇ ಕೇಳಿಬಂದಿವೆ. ಹಾಗಾಗಿ ಪಾಲಿಕೆ ಆಯುಕ್ತರು ಈ ಬಗ್ಗೆ ಪರಿಶೀಲನೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

ಸೌಜನ್ಯ ಕೊಲೆ ಪ್ರಕರಣ: ಮರು ತನಿಖೆಗೆ ಆಗ್ರಹಿಸಿ ಪ್ರತಿಭಟನೆ




ಮೈಸೂರು, ಜು.24(ಜಿಎ)–ಸೌಜನ್ಯ ಕೊಲೆ ಪ್ರಕರಣ ಮರು ತನಿಖೆಗೆ ಆಗ್ರಹಿಸಿ ಮೈಸೂರು ಹೃದಯವಂತ ಕನ್ನಡಿಗರ ಬಳಗದಿಂದ ನಗರ ಹುಣಸೂರು ರಸ್ತೆಯಲ್ಲಿರುವ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದ ಮುಂಭಾಗ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಸುಮಾರು 11 ವರ್ಷಗಳ ಹಿಂದೆ ನಡೆದ ಸೌಜನ್ಯ ಪ್ರಕರಣದಲ್ಲಿ ಅಮಾಯಕರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಅವರ ಕುಟುಂಬದವರಿಗೆ ಹಿಂಸೆ ನೀಡಿದವರನ್ನು ಕೂಡಲೇ ಬಂಧಿಸಬೇಕು ಹಾಗೂ ಸೌಜನ್ಯಳನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿರುವ ಕೊಲೆಗಾರರನ್ನು ಕೂಡಲೇ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಗಲ್ಲು ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಬಳಗದ ಸಂಸ್ಥಾಪಕ ಅಧ್ಯಕ್ಷ ಡಿ.ಪಿ. ಪರಮೇಶ್, ರವಿ, ಯೋಗೇಶ್, ಶಿವಮ್ಮ, ಮಹದೇವಿ, ಕೃಷ್ಣೇಗೌಡ, ರಾಜೇಂದ್ರ ಶಶಾಂಕ್ ಗೌಡ ಮತ್ತು ಸಿದ್ದೇಶ್ ಭಾಗಿಯಾಗಿದ್ದರು.

ಜುಲೈ 26ರವರೆಗೆ ಜ್ಞಾನವಾಪಿ ಮಸೀದಿ ಸಮೀಕ್ಷೆಯಿಲ್ಲ: ಸುಪ್ರೀಂಕೋರ್ಟ್

ನವದೆಹಲಿ: ಜುಲೈ 26 ರ ಸಂಜೆ 5 ಗಂಟೆಯವರೆಗೆ ಜ್ಞಾನವಾಪಿ ಮಸೀದಿ ಸಂಕೀರ್ಣದ ಯಾವುದೇ ಪುರಾತತ್ವ ಸರ್ವೇಕ್ಷಣಾ ಸಂಸ್ಥೆ ಸಮೀಕ್ಷೆ ನಡೆಸುವುದಿಲ್ಲ ಎಂದು ಸುಪ್ರೀಂಕೋರ್ಟ್ ಸೋಮವಾರ ಹೇಳಿದೆ.



ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಮಸೀದಿ ಸಮಿತಿಯ ಪರವಾಗಿ ನ್ಯಾಯಾಲಯಕ್ಕೆ ಹಾಜರಾದ ಹಿರಿಯ ವಕೀಲ ಹುಝೆಫಾ ಅಹ್ಮದಿ ಅವರು ಸಲ್ಲಿಸಿದ ಸಲ್ಲಿಕೆಗಳನ್ನು ಗಮನಿಸಿ ಈ ವಿಷಯವನ್ನು ತುರ್ತು ವಿಚಾರಣೆ ನಡೆಸಬೇಕು ಎಂದು ಹೇಳಿತು.

ಈ ಸ್ಥಳದಲ್ಲಿ ಯಾವುದೇ ಆಕ್ರಮಣಕಾರಿ ಕೆಲಸ ಅಥವಾ ಉತ್ಖನನ ಮಾಡಬಾರದು ಎಂದು ಎಎಸ್‌ಐ ತಂಡಕ್ಕೆ ತಿಳಿಸುವಂತೆ ಉತ್ತರ ಪ್ರದೇಶ ಸರ್ಕಾರವನ್ನು ಪ್ರತಿನಿಧಿಸುತ್ತಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸುಪ್ರೀಂ ಕೋರ್ಟ್ ಹೇಳಿದೆ.

ಉತ್ತರಪ್ರದೇಶದ ವಾರಣಾಸಿ ಜಿಲ್ಲಾ ನ್ಯಾಯಾಲಯದಿಂದ ಜ್ಞಾನವಾಪಿ ಕ್ಯಾಂಪಸ್‌ನ ಎಎಸ್‌ಐ ಸಮೀಕ್ಷೆಯ ಆದೇಶದ ನಂತರ, ಪ್ರಕ್ರಿಯೆಯು ಇಂದು ಪ್ರಾರಂಭವಾಗಿ ಎಎಸ್‌ಐ ತಂಡವು ಬೆಳಿಗ್ಗೆ 7 ಗಂಟೆಗೆ ಜ್ಞಾನವಾಪಿ ಕ್ಯಾಂಪಸ್‌ಗೆ ತಲುಪಿ ತನ್ನ ಸಮೀಕ್ಷೆಯನ್ನು ಪ್ರಾರಂಭಿಸುತ್ತದೆ ಎಂದು ಹೇಳಲಾಗಿತ್ತು. ಮಾಹಿತಿಯ ಪ್ರಕಾರ, ASI ತನ್ನ ಸಮೀಕ್ಷೆಯ ವರದಿಯನ್ನು ಆಗಸ್ಟ್ 4 ರೊಳಗೆ ವಾರಣಾಸಿಯ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಹೇಳಲಾಗಿತ್ತು.

ವಾರಣಾಸಿಯ ಕಾಶಿ ವಿಶ್ವನಾಥ ದೇವಸ್ಥಾನದ ಪಕ್ಕದಲ್ಲಿರುವ ಜ್ಞಾನವಾಪಿ ಮಸೀದಿಯನ್ನು ದೇವಾಲಯದ ಮೇಲೆ ನಿರ್ಮಿಸಲಾಗಿದೆಯೇ ಎಂದು ನಿರ್ಧರಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಯಾವುದೇ ಆಕ್ರಮಣಕಾರಿ ಕೆಲಸವನ್ನು ಕೈಗೊಳ್ಳಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವಿಶ್ವ ಈಜು ಚಾಂಪಿಯನ್‌ಷಿಪ್: ಫೆಲ್ಪ್ಸ್ ದಾಖಲೆ ಮುರಿದ ಲಿಯೊನ್



ಫುಕುವೋಕಾ, ಜಪಾನ್: ಫ್ರಾನ್ಸ್‌ನ ಲಿಯೊನ್ ಮರ್ಚಾಂಡ್ ಅವರು ಅಮೆರಿಕದ ದಿಗ್ಗಜ ಈಜುಪಟು ಮೈಕ್ ಫೆಲ್ಪ್ಸ್ ಅವರ ಹೆಸರಿನಲ್ಲಿದ್ದ ಕೊನೆಯ ವಿಶ್ವದಾಖಲೆಯನ್ನು ಮುರಿದರು. ಇಲ್ಲಿ ನಡೆಯುತ್ತಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ 21 ವರ್ಷದ ಲಿಯೊನ್, ಭಾನುವಾರ ಪುರುಷರ 400 ಮೀ. ವೈಯಕ್ತಿಕ ಮೆಡ್ಲೆ ವಿಭಾಗದಲ್ಲಿ 4 ನಿ. 02.50 ಸೆಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. ಫೆಲ್ಪ್ಸ್ ಅವರು 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ 4 ನಿ.03.84 ಸೆ.ಗಳಲ್ಲಿ ಗುರಿ ತಲುಪಿದ್ದು ಇದುವರೆಗಿನ ದಾಖಲೆಯಾಗಿತ್ತು ಈಜು ಸ್ಪರ್ಧೆಯಲ್ಲಿ ಸುದೀರ್ಘ ಅವಧಿ ಯವರೆಗೆ ಮುರಿಯದೇ ಇದ್ದ ದಾಖಲೆ ಇದಾಗಿತ್ತು.

ಟಿಟ್ಮಸ್ ದಾಖಲೆ: ಆಸ್ಟ್ರೇಲಿಯಾದ ಆರಿಯಾರ್ನ್ ಟಿಟ್ಮಸ್, ಮಹಿಳೆಯರ 400 ಮೀಟರ್ಸ್ ಫ್ರೀಸ್ಟೈಲ್ ಈಜಿನಲ್ಲಿ ನೂತನ ವಿಶ್ವದಾಖಲೆ ನಿರ್ಮಿಸಿದರು. 400 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಅವರು ಗುರಿ ಮುಟ್ಟಲು 3ನಿಮಿಷ, 55.38 ಸೆಕೆಂಡುಗಳನ್ನು ತೆಗೆದುಕೊಂಡರು. ನಾಲ್ಕು ತಿಂಗಳುಗಳ ಹಿಂದಷ್ಟೇ ಕೆನಡಾದ ಸಮ್ಮರ್ ಮೆಕ್ಲಂಟೋಷ್ (3ನಿ.56.08ಸೆ) ನಿರ್ಮಿಸಿದ್ದ ದಾಖಲೆಯನ್ನು ಟಿಟ್ಮಸ್ ಮೀರಿ ನಿಂತರು. ಮೆಕ್ಲಂಟೋಷ್ ಅವರು ಇಲ್ಲಿ ನಾಲ್ಕನೇ ಸ್ಥಾನ (3ನಿ.59.94ಸೆ) ಪಡೆದರು. ಈ ಸ್ಪರ್ಧೆಯಲ್ಲಿ ಅಮೆರಿಕದ ಕೇಟಿ ಲೆಡೆಕಿ (3ನಿ.58.73ಸೆ) ಮತ್ತು ನ್ಯೂಜಿಲೆಂಡ್‌ನ ಎರಿಕಾ ಫೇರ್‌ವೆದರ್ (3ನಿ.59.59ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

2022–23ನೇ ಸಾಲಿಗೆ ಇಪಿಎಫ್ ಠೇವಣಿಗೆ ಶೇ.8.15 ಬಡ್ಡಿದರ

ಕೇಂದ್ರ ಸರ್ಕಾರದ ಅನುಮೋದನೆ

ನವದೆಹಲಿ: 2022–23ನೇ ಸಾಲಿನ ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್) ಠೇವಣಿ ಮೇಲೆ ಒದಗಿಸುವ ಬಡ್ಡಿದರವನ್ನು ಶೇ. 8.15ಕ್ಕೆ ನಿಗದಿಪಡಿಸಲು ಸರ್ಕಾರ ಅನುಮೋದಿಸಿದೆ. ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಮಾರ್ಚ್ 28,2023ರಂದು 2022–23ರ ಆರ್ಥಿಕ ವರ್ಷದಲ್ಲಿ ತನ್ನ ಆರು ಕೋಟಿ ಚಂದಾದಾರರಿಗೆ ಉದ್ಯೋಗಿಗಳ ಭವಿಷ್ಯ ನಿಧಿ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇ. 8.15ಕ್ಕೆ ಹೆಚ್ಚಿಸಿತ್ತು.

ಸೋಮವಾರ ಹೊರಡಿಸಿದ ಸರ್ಕಾರದ ಅಧಿಕೃತ ಆದೇಶದ ಪ್ರಕಾರ, 2022–23ರ ಇಪಿಎಫ್‌ನಲ್ಲಿ ಶೇಕಡಾ 8.15 ರ ಬಡ್ಡಿಯನ್ನು ಸದಸ್ಯರ ಖಾತೆಗಳಿಗೆ ಜಮಾ ಮಾಡಲು ಇಪಿಎಫ್‌ಒ ಕಚೇರಿಗಳಿಗೆ ಹೇಳಿದೆ. ಈ ವರ್ಷದ ಮಾರ್ಚ್‌ನಲ್ಲಿ ಇಪಿಎಫ್‌ಒ ಟ್ರಸ್ಟಿಗಳು ಅನುಮೋದಿಸಿದ ಇಪಿಎಫ್ ಬಡ್ಡಿ ದರಕ್ಕೆ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದ ನಂತರ ಈ ಆದೇಶ ಬಂದಿದೆ.

ಈ ಇಪಿಎಫ್‌ಒ ಕ್ಷೇತ್ರ ಕಚೇರಿಗಳು ಚಂದಾದಾರರ ಖಾತೆಗಳಿಗೆ ಜಮೆ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತವೆ. ಮಾರ್ಚ್ 2022 ರಲ್ಲಿ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) 2021–22ರ ಇಪಿಎಫ್ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇಕಡಾ 8.5 ರಿಂದ ಶೇಕಡಾ 8.10 ಕ್ಕೆ ಇಳಿಸಿತ್ತು.

ಕಾರ್ಗಿಲ್ ವಿಜಯೋತ್ಸವ: ನಾಳೆ ಬೃಹತ್ ಬೈಕ್ ರ್ಯಾಲಿ



> ಸಂಘದ 250ಕ್ಕೂ ಹೆಚ್ಚು ಮಂದಿ ಬೈಕ್ ರ್ಯಾಲಿಯಲ್ಲಿ ಪಾಲ್ಗೊಳ್ಳುತ್ತಿದ್ದು, ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರಿನ 100ಕ್ಕೂ ಹೆಚ್ಚು ಮಂದಿ ಹಾಗೂ ಎನ್‌ಸಿಸಿ ವಿದ್ಯಾರ್ಥಿಗಳು ಸೇರಿದಂತೆ 500ಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ. ಆಸಕ್ತ ಸಾರ್ವಜನಿಕರೂ ಅಂದು ಸಮಯಕ್ಕೆ ಸರಿಯಾಗಿ ಸ್ಥಳಕ್ಕೆ ಬಂದು ಸಂಚಾರ ನಿಯಮ ಪಾಲನೆಯೊಂದಿಗೆ ಬೈಕ್ ರ್ಯಾಲಿಯಲ್ಲಿ ಭಾಗವಹಿಸಬಹುದು.
> -ಕೆ.ಪಿ.ದಿವಾಕರ

ಮೈಸೂರು,ಜು.24(ಪಿಎಂ)– ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಮೈಸೂರು ಜಿಲ್ಲಾ ಘಟಕ ಹಾಗೂ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಜಂಟಿ ಆಶ್ರಯದಲ್ಲಿ ಕಾರ್ಗಿಲ್ ವಿಜಯೋತ್ಸವ ದಿನದ ಪ್ರಯುಕ್ತ ಜು.26ರಂದು ಬೃಹತ್ ಬೈಕ್ ರ್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯ ಉಪಾಧ್ಯಕ್ಷ ಹಾಗೂ ಜಿಲ್ಲಾಧ್ಯಕ್ಷ ಕೆ.ಪಿ.ದಿವಾಕರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಜನರಲ್ಲಿ ದೇಶಾಭಿಮಾನ ಮೂಡಿಸುವ ಉದ್ದೇಶದಿಂದ ಬೈಕ್ ರ್ಯಾಲಿ ಆಯೋಜಿಸಲಾಗಿದೆ. ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರ ವೃತ್ತದಲ್ಲಿ (ಮೆಟ್ರೋ ಪೋಲ್ ವೃತ್ತ) ಬೆಳಗ್ಗೆ 9ಕ್ಕೆ ರ್ಯಾಲಿಗೆ ಚಾಲನೆ ದೊರೆಯಲಿದೆ. ಇದಕ್ಕೂ ಮುನ್ನ ಕೆ.ಎಂ. ಕಾರ್ಯಪ್ಪರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು ಎಂದರು.

ಎನ್‌ಸಿಸಿ ಗ್ರೂಪ್ ಮೈಸೂರು ಹೆಡ್‌ಕ್ವಾರ್ಟ್ರಸ್‌ನ ಕಮಾಂಡೆಂಟ್ ಕರ್ನಲ್ ಆರ್.ಆರ್.ಮೆನನ್ ಬೈಕ್ ರ್ಯಾಲಿಗೆ ಚಾಲನೆ ನೀಡಲಿದ್ದಾರೆ. ರೈಲ್ವೆ ನಿಲ್ದಾಣ ವೃತ್ತ, ಇರ್ವಿನ್ ರಸ್ತೆ, ಅಶೋಕ ರಸ್ತೆ, ದೊಡ್ಡಗಡಿಯಾರ ವೃತ್ತ, ಜಯಚಾಮರಾಜ ಒಡೆಯರ್ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಏಕಲವ್ಯ ವೃತ್ತ, ಕುವೆಂಪುನಗರ ವಿಜಯಾ ಬ್ಯಾಂಕ್ ವೃತ್ತ ಮಾರ್ಗದಲ್ಲಿ ಸಾಗುವ ಬೈಕ್ ರ್ಯಾಲಿಯು ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದ ಎದುರು ಕೊನೆಗೊಳ್ಳಲಿದೆ ಎಂದು ತಿಳಿಸಿದರು.

ಬಳಿಕ ಸಭಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಪಾಲ್ಗೊಳ್ಳಲಿದ್ದಾರೆ. ರೋಟರಿ ಜಿಲ್ಲೆ 3181ರ ಜಿಲ್ಲಾ ಗವರ್ನರ್ ಹೆಚ್.ಆರ್.ಕೇಶವ್ ಉಪಸ್ಥಿತರಿರಲಿದ್ದಾರೆ. ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ಸಿ.ಜಗದೀಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದ ಐದು ಮಾಜಿ ಯೋಧರನ್ನು ಸನ್ಮಾನಿಸಲಾಗುವುದು. ಜೊತೆಗೆ ವೀರ ನಾರಿಯರು (ಹುತಾತ್ಮ ಯೋಧರ ಪತ್ನಿಯರು), ವೀರ ಮಾತೆಯರು (ಹುತಾತ್ಮ ಯೋಧರ ತಾಯಂದಿರು) ಹಾಗೂ ಮಾಜಿ ಸೈನಿಕರ ಪತ್ನಿಯರಿಗೆ ಗೌರವ ಸಮರ್ಪಣೆ ಮಾಡಲಾಗುವುದು. ಮೈಸೂರು ಜಿಲ್ಲೆಯ ಪ್ರಥಮ ಮಹಿಳಾ ಪೈಲಟ್ ಆಗಿ ಆಯ್ಕೆಯಾಗಿರುವ ಮಾಜಿ ಸೈನಿಕ ವಿಕ್ರಮ್‌ರಾಜ್ ಅವರ ಪುತ್ರಿ ತನುಶ್ರೀ ಗೌಡ ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ನಂಜುಂಡಸ್ವಾಮಿ, ಸಂಘದ ವೀರನಾರಿ ಘಟಕದ ರಾಜ್ಯಾಧ್ಯಕ್ಷೆ ರಜನಿ ಸುಬ್ಬಯ್ಯ, ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ಸಿ.ಜಗದೀಶ್, ಕಾರ್ಯದರ್ಶಿ ಗೋಪಾಲ ಕೃಷ್ಣ, ಕಾರ್ಯಾಧ್ಯಕ್ಷ ಆರ್.ರಾಜೇಶ್ ಗೋಷ್ಠಿಯಲ್ಲಿದ್ದರು.

9ನೇ ವರ್ಷದ ಚಿರಸ್ಮರಣೆ

ಶ್ರೀ ಎನ್.ಎಸ್. ಶ್ರೀನಿವಾಸ್‌ರವರು (ನ್ಯಾಯಬೆಲೆ ಅಂಗಡಿ ಮಾಲೀಕರು)



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ

ಎಸ್. ನಟರಾಜ್ ಮತ್ತು ಕುಟುಂಬವರ್ಗದವರು ಹಾಗೂ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು

ಮೊದಲನೇ ವರ್ಷದ ಪುಣ್ಯಸ್ಮರಣೆ

ದೊಡ್ಡನೆ ದೊರೆ



ಎಂ.ಇ.ಆನಂದ್

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಆನಂದ್ ರವರ ಧರ್ಮಪತ್ನಿ ಪ್ರೇಮ, ಅಳಿಯಂದಿರು, ಮಕ್ಕಳು ಎ. ಜ್ಯೋತಿ, ತಿಮ್ಮೇಗೌಡ ಮೈಸೂರು, ಉಷಾ ರಾಜೇಗೌಡ ಮತ್ತು ಮೊಮ್ಮಕ್ಕಳು

3ನೇ ವರ್ಷದ ಸವಿನೆನಪು



ವಿಜಯ್‌ಕುಮಾರ್ (ಆರ್.ಐ.)

REVENUE INSPECTOR

ಕ್ಯಾತಮಾರನಹಳ್ಳಿ, ಮೈಸೂರು

IN THE COURT OF I ADDITIONAL SENIOR CIVIL JUDGE AT MYSURU

Original Suit No.: 1228/2022

PLAINTIFF/S: 1) Sri B. S. Krishnaraj Son of Late Sri B.H.Sanne Gowda Aged about 58 years Residing at: #4564/A, H.T. Double Road, Vijayanagar 2nd Stage, Mysuru 570 017

2) Smt. Geetha C. N. Wife of Sri B. S. Krishnaraj Aged about 46 years Residing at: #4564/A, H.T. Double Road, Vijayanagar 2nd Stage, Mysuru-570017 **V/s**

DEFENDANT: Indian Institute of Civil Services Training Academy, Bangalore. Represented by its Chairman & Managing Director Sri Ramesh gowda M.S. Son of Late Sri Shrikantappa, Aged about 53 years Residing at #202, 4th main, Near Hari vidyala school, Sharada Railway layout, Bogadi, Mysore -570026

Having Office at: Indian Institute of Civil Services Training Academy Opposite to Gana Bharathi, Service Road, Adichunchangiri Road,Kuvempunagara, Mysuru

PUBLIC NOTICE

This is to notify that the plaintiffs have filed the above suit for the relief of recovery of money as alleged in the plaint as against defendant.

The summons was issued by this court and also through R.P.A.D., to the Defendant which was returned unserved. Now the above case is posted on 01/09/2023 for your appearance. So the Defendant is hereby summoned to appear before the court in person or through a pleader duly instructed and able to answer all material questions relating to the above said case, on the 1st day of September 2023 at 11.00 A.M. In default of your appearance before the court on the said date of hearing, the Court will be proceeding treating you ex-parte.

Given under my hand and seal on this the 12th day of July 2023

By order of the Court

Sd/- Chief Ministerial officer, Court of Senior Civil Judge and CJM, Mysuru.

Sri.P.K. Ponnaiah, Sri.B.P. Vignesh
Sri Naveen Ponnaiah, Advocates,
No.1662/1A, First Floor, Radhamadhav Connect, Narayana Shastry Road, Beside Vathsalya Nursing Home, Mysore-570 004. Ph. 9448773611, 9449281232

Mysuru, Date: 11.07.2023

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಸಾವಿತ್ರಮ್ಮನವರು

ಮೈಸೂರಿನ ಮಂಚೇಗೌಡನಕೊಪ್ಪಲು 3ನೇ ಕ್ರಾಸ್‌ನಲ್ಲಿ ಶ್ರೀ ಘನನೀಲ ಸಿದ್ದಪ್ಪಾಜಿ ದೇವಸ್ಥಾನ ನಿರ್ಮಾಣಕ್ಕೆ ನಮಗೆ ಪ್ರೇರಕ ಶಕ್ತಿಯಾಗಿದ್ದ ನಮ್ಮ ಮಾತೃಶ್ರೀಗಳಾದ ಶ್ರೀಮತಿ ಸಾವಿತ್ರಮ್ಮನವರು 15.07.2023 ಶನಿವಾರ ದೈವಾಧೀನರಾದರು. ತತ್ಸಂಬಂಧ ಉತ್ತರ ಕ್ರಿಯಾದಿ ಕಾರ್ಯವನ್ನು 25.07.2023 ಮಂಗಳವಾರ ಬೆಳಿಗ್ಗೆ 10.30ಗಂಟೆಗೆ ಮೈಸೂರಿನ ಮಂಚೇಗೌಡನ ಕೊಪ್ಪಲಿನ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿದ್ದೇವೆ. ಆಹ್ವಾನ ಪತ್ರಿಕೆ ತಲುಪದಿದ್ದವರು, ಇದನ್ನೇ ಆಹ್ವಾನವೆಂದು ಪರಿಗಣಿಸಿ, ಆಗಮಿಸಬೇಕಾಗಿ ಕೋರಿಕೆ.

ಭೋಜನ: ಮಧ್ಯಾಹ್ನ 12.30ಕ್ಕೆ, ಹರಿಕಥೆ: ಸಂಜೆ 7.00 ರಿಂದ

ದುಃಖತಪ್ತರು: ಲೇಟ್ ಶ್ರೀ ಶಿವಲಿಂಗೇಗೌಡರ ಕುಟುಂಬದವರು, ಹೆಣ್ಣುಮಕ್ಕಳು, ಅಳಿಯಂದಿರು, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಪಿ.ಎ.ಹುಚ್ಚಪ್ಪ

ಜನನ: 25.07.1939
ಮರಣ: 15.07.2023

ಇವರು ದಿನಾಂಕ 15.07.2023 ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 26.07.2023 ಬುಧವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ #20/1, 9ನೇ ಮುಖ್ಯರಸ್ತೆ, 5ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಶ್ರೀಮತಿ ಸಾಕಮ್ಮ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

3ನೇ ವರ್ಷದ ಪುಣ್ಯಸ್ಮರಣೆ



ಡಾ.ಪಾಡೆಯಂಡ ಮೀನಾಕ್ಷಿ ಮುದ್ದಯ್ಯ

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖತಪ್ತರು: ಪತಿ: ಪಾಡೆಯಂಡ ಮುದ್ದಯ್ಯ (ಸುಗುಣ) & ಕುಟುಂಬ ವರ್ಗದವರು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 04 MYS 2023-24
ದಿನಾಂಕ: 20-07-2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಹೈಡ್ರಾಲಿಕ್ ಪಾರುಗಾಣಿಕಾ ಸಾಧನದ ಪೂರೈಕೆ ಮತ್ತು ಕಾರ್ಯಾರಂಭ. (ಟೆಂಡರ್ ಸಂಖ್ಯೆ L9235854)	ರೂ. 36,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10–08–2023, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಕ್ತಾಯ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು/ಮೈಸೂರು

PUB/257/AAV/PRB/SWR/2023-24

S.W.Railways SWRRLY SWRRLY

DOCUMENTS LOST

1. **Basheer Ahammed,** S/o Syed Nazeer Hussain, Resident of Lal Band Street, Hunsur Town. Lost Registered Sale Deed document of House in 2nd Division, Ontepalaya Borey, 21st ward of Hunsur town with Katha No:2955 and Document No-HUN-1-02020-2011-12. CD No-HUND-74.
2. **Mumtaz Unnias,** W/o Syed Mohammad, Resident of # 322, Lal Band Street, Hunsur Town. Lost Registered Sale Deed document of House in 2nd Division, Ontepalaya Borey, 21st ward of Hunsur town with Katha No:2955 and Document No- HUN-1-02097-2006-07, CD No- HUND19.

ಸಾರ್ವಜನಿಕ ಸೂಚನೆ/ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ **ಮಣಿಕಂದಸುದನ್ ಮೈಲ್ಸಾಮಿ**, ಫ್ಲಾಟ್ ನಂ.207, ಡ್ಯುವೋ ಹಾರ್ಮನಿ ಅಪಾರ್ಟ್‌ಮೆಂಟ್, ಸುರಂಜನದಾಸ್ ರಸ್ತೆ, ನ್ಯೂ ತಿಪ್ಪಸಂದ್ರ ಪೋಸ್ಟ್, ಬೆಂಗಳೂರು–560075 ಮತ್ತು **ಶ್ರೀ ಕೃಷ್ಣ ಹಾಸವೈ D/o ವಿಜಯ ಲಕ್ಷ್ಮಿ**, 31–16–18, ಬುಳ್ಳೆಮ್ಮ ಸ್ಟ್ರೀಟ್, ಮಾಚವರಂ ಡೌನ್, ವಿಜಯವಾಡ (ನಗರ), ಮಾಚವರಂ, ವಿಜಯವಾಡ (ನಗರ), ಕೃಷ್ಣ, ಆಂಧ್ರಪ್ರದೇಶ–520004 ಹಾಗೂ **ಶ್ರೀ ಹರ್ಷಾ ವೆಂಕಟ ಲಿಂಗಂ D/o ಲಿಂಗಂ ಜಗದೀಶ**, #822, ಕೃಷ್ಣ ಕುಂಜ, 3ನೇ ಕ್ರಾಸ್, 1ನೇ ಬ್ಲಾಕ್, ಹೆಚ್‌ಆರ್‌ಬಿಆರ್ ಬಡಾವಣೆ, ಕಲ್ಯಾಣ್‌ನಗರ, ಬೆಂಗಳೂರು–ಉತ್ತರ–560043ರವರುಗಳು ಈ ಕೆಳಗೆ ನಮೂದಿಸಿದ ಷೆಡ್ಯೂಲ್ ಆಸ್ತಿಯನ್ನು ಅದರ ನಿಜವಾದ ಮಾಲೀಕ **ಮಂಜುನಾಥ.ವಿ S/o ವೆಂಕಟರಾಮಪ್ಪ**, #79, ವಲಗೇರನಹಳ್ಳಿ, ಕುಪ್ಪಹಳ್ಳಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ–563126, ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಮೇಲೆ ತಿಳಿಸಿದ ಮಾರಾಟ ವಹಿವಾಟಿಗೆ ಯಾರಾದರೂ ಯಾವುದೇ ಆಕ್ಷೇಪಣೆ/ಹಕ್ಕುಗಳು/ಆಸಕ್ತಿ/ವಿವಾದಗಳನ್ನು ಹೊಂದಿದ್ದರೆ, ಅವರು ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 2 ದಿನಗಳ ಒಳಗಾಗಿ ತಾವು ಹೊಂದಿರುವ ಆಕ್ಷೇಪಣೆ/ಹಕ್ಕುಗಳು/ವಿವಾದಗಳ ವಿವರಗಳನ್ನು ರುಜುವಾತುಪಡಿಸುವ ದಾಖಲೆಗಳೊಂದಿಗೆ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಬಹುದು. ಇಲ್ಲವಾದಲ್ಲಿ ಯಾವುದೇ ಮೂರನೇ ವ್ಯಕ್ತಿಯ ಆಕ್ಷೇಪಣೆ/ಹಕ್ಕುಗಳು/ಆಸಕ್ತಿ/ವಿವಾದಗಳು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಮೇಲೆ ಹೇಳಿದ ಮಾಲೀಕರೊಂದಿಗೆ ಮಾರಾಟದ ವಹಿವಾಟನ್ನು ಪೂರ್ಣಗೊಳಿಸುವವರಿರುತ್ತಾರೆ ಮತ್ತು ಅದರ ನಂತರದ ಯಾವುದೇ ಆಕ್ಷೇಪಣೆ/ಹಕ್ಕುಗಳು/ಆಸಕ್ತಿ/ವಿವಾದಗಳನ್ನು ಪರಿಗಣಿಸಲಾಗುವುದಿಲ್ಲ.

ಅನುಸೂಚಿ

ಮೈಸೂರು ಜಿಲ್ಲೆ, ಸರಗೂರು ತಾಲೂಕು, ಕಂದಲಿಕೆ ಹೋಬಳಿ, ಕಿತ್ತೂರು ಗ್ರಾಮದಲ್ಲಿರುವ ಸ.ನಂ.73/3 (ಹಳೆ ನಂ.73/2) ರಲ್ಲಿ 5 ಎಕರೆ 3 ಗುಂಟೆ ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ. **ಪೂರ್ವಕ್ಕೆ:** ಕಬಿನಿ ಅಣೆಕಟ್ಟು ಯೋಜನೆಯಿಂದ ಸ್ವಾಧೀನಪಡಿಸಿಕೊಂಡ ಭೂಮಿ, **ಪಶ್ಚಿಮಕ್ಕೆ:** ಸರ್ಕಾರಿ ಓಣಿ, **ಉತ್ತರಕ್ಕೆ:** ಕಬಿನಿ ಹಿನ್ನೀರು ಪ್ರದೇಶ ಮತ್ತು **ದಕ್ಷಿಣಕ್ಕೆ:** ತಮ್ಮಯ್ಯಚಾರ್ ಅವರಿಗೆ ಸೇರಿದ ಆಸ್ತಿ.

ಸಹಿ/–**ಸದಾಶಿವಪ್ಪ .ಬಿ** ಬಿ.ಎ.,ಎಲ್.ಎಲ್.ಬಿ.,
ವಕೀಲರು, #16, ಗಾಯಿತ್ರಿ ಕಾಂಪ್ಲೆಕ್ಸ್, ಕಾಳಿದಾಸ ರಸ್ತೆ,
ಹೆಚ್.ಡಿ. ಕೋಟೆ ಟೌನ್, ಹೆಚ್.ಡಿ. ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ: **ಮೊ.ನಂ. 9538171277**

ದಿನಾಂಕ: 24–07–2023
ಸ್ಥಳ: ಹೆಚ್.ಡಿ. ಕೋಟೆ